# ರೈತ ತೀರ್ಪು

ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣಕ್ಕಾಗಿ ಕರ್ನಾಟಕದಲ್ಲಿ ನಡೆದ ಒಂದು ಪ್ರಕ್ರಿಯೆಯ ವರದಿ

೨೦೦೯











ಆದರ್ಶ

**ADARSA**

(**A**lliance for **D**emocratizing **A**gricultural **R**esearch in **S**outh **A**sia)

# ರೈತ ತೀರ್ಪು

ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣಕ್ಕಾಗಿ ಕರ್ನಾಟಕದಲ್ಲಿ ನಡೆದ ಒಂದು ಪ್ರಕ್ರಿಯೆಯ ವರದಿ

೨೦೦೯


<u>ಸಂಕಲನ ಮತ್ತು ಸಂಪಾದನೆ</u>

ಸಂತೋಷ್ ಕೌಲಗಿ



ಆದರ್ಶ

**A D A R S A**

(**A**lliance for **D**emocratizing **A**gricultural **R**esearch in **S**outh **A**sia)

<u>ಸಹಯೋಗ</u>

ಇಕ್ರಾ, ಬೆಂಗಳೂರು; ಹಿತ್ತಲಗಿಡ, ಬೆಂಗಳೂರು; ಅಪ್ಪಿಕೋ ಚಳುವಳಿ, ಶಿರ್ಸಿ; ಕೃಷಿ ಮಾಧ್ಯಮ ಕೇಂದ್ರ, ಧಾರವಾಡ

RAITA TEERPU - ONDU VARADI - A brief report in Kannada of the process of Farmer's Jury held in Karnataka, India in 2009 organised by ADARSA (**A**lliance for **D**emocratizing **A**gricultural **R**esearch in **S**outh **A**sia)

Publishers : ADARSA,
c/o Deccan Development Society,
Pastapur, Dist: Medak, A P , India.

web site : www.raitateerpu.com

Year of Publication : 2010

Designed by : Sanket Designers
Melkote , Karnataka, India

## ಈ ಪ್ರಕಟಣೆಯನ್ನು ಕುರಿತು...



ಅಭಿವೃದ್ಧಿ ಸಂಬಂಧದ ಚಿಂತನೆಗಳಿಗೆ ನಮ್ಮ ಗ್ರಾಮೀಣರು ಯಾವ ರೀತಿಯ ಕಾಣ್ಕೆಗಳನ್ನೂ ಸಲ್ಲಿಸಲಾರರೆಂಬುದು ನಮ್ಮಲ್ಲಿ ಸಾಧಾರಣ ನಂಬಿಕೆಯಾಗಿದೆ. ವಿಶ್ವವಿದ್ಯಾನಿಲಯಗಳು ಮತ್ತಿತರ ಶೈಕ್ಷಣಿಕ ಸಂಸ್ಥೆಗಳ **"ವಿದ್ವಜನ"**ರ ಪ್ರಶ್ನೆ ಮತ್ತು ಸರ್ವೇಕ್ಷಣಗಳಿಗೆ ಜವಾಬು ನೀಡುವುದಕ್ಕೆ ಮಾತ್ರ ಅವರ ಪಾತ್ರ ಸೀಮಿತವಾಗಿರುತ್ತದೆ. ಈ ಗ್ರಾಮೀಣ ಜನತೆಯಲ್ಲೂ ಮುಖ್ಯವಾಗಿ ಸಣ್ಣಪುಟ್ಟ ರೈತಾಪಿ ವರ್ಗ, ಮಹಿಳೆಯರು, ದಲಿತರು ಮತ್ತು ಆದಿವಾಸಿಗಳು ಯಾವಾಗಲೂ ನಮ್ಮ **'ಚಿಂತನ ಶ್ರೇಣಿ'**ಯ ಕೆಳಹಂತಗಳಲ್ಲೇ ಇರುವವರಾಗಿರುತ್ತಾರೆ! ನಮ್ಮ ಕೃಷಿ ಸಂಶೋಧನೆ ಮತ್ತು ಕೃಷಿ ನೀತಿ ನಿರೂಪಣೆಯ **ಅಧ್ವರ್ಯುಗಳು** ಈ ಗ್ರಾಮೀಣ ಕ್ಷೇತ್ರವನ್ನು ಕೊಳಕೆಂದೇ ಭಾವಿಸಿ ತಿರಸ್ಕಾರದಿಂದ ನೋಡುತ್ತಾರೆ. **ಸಣ್ಣದು ಎಂದೂ ಕಾರ್ಯಸಾಧುವಲ್ಲ** ಎನ್ನುವ ಅಪಾಯಕಾರಿ ಮತ್ತು ಅಜ್ಞಾನಜನ್ಯವಾದ ಘೋಷಣೆಯ ಅಸ್ತ್ರವನ್ನು ಝಳಪಿಸುವ ಕೃಷಿ ಸಂಶೋಧನೆಗೆ ನಮ್ಮ ಗ್ರಾಮ ಸಮಾಜಗಳಿಂದ ಕಲಿಯುವುದು ಒತ್ತಟ್ಟಿಗಿರಲಿ, ಅವರನ್ನು ಆಲಿಸುವುದಕ್ಕೂ ಸಮಯವಿರುವುದಿಲ್ಲ.

ಆದರೆ ಈ ಸಣ್ಣಪುಟ್ಟ ಮತ್ತು ಕಡೆಗಣಿತ ಕೃಷಿಕರ ಹಾಗೂ ಇವರಲ್ಲಿ ಮಹಿಳೆಯರು, ದಲಿತರು ಮತ್ತು ಆದಿವಾಸಿಗಳ ಮಾತಿಗೆ ಕಿವಿಗೊಡುವ ತಾಳ್ಮೆ ನಮ್ಮಲ್ಲಿದ್ದರೆ ಪರ್ಯಾವರಣ ಜ್ಞಾನದ ಒಂದು ಭಂಡಾರವೇ ನಮ್ಮೆದುರು ತೆರೆದುಕೊಳ್ಳುತ್ತದೆ. ಈ ಜ್ಞಾನ ಭಂಡಾರವೇ ಸಹಸ್ರಾರು ವರ್ಷಗಳಿಂದ ಸದೃಢವಾದ ಕೃಷಿ ಪದ್ಧತಿಯನ್ನು ಇಲ್ಲಿ ಮತ್ತು ಅನೇಕ ಪ್ರದೇಶಗಳಲ್ಲಿ ಪೋಷಿಸಿಕೊಂಡು ಬಂದಿದೆ. ಈ ಜ್ಞಾನ ಸಂಪತ್ತು ಕೃಷಿ ಸಂಶೋಧನೆ ರಾಸಾಯನಿಕ ಮತ್ತು ಹೈಬ್ರೀಡ್ ದುರಂತಗಳಲ್ಲಿ ಸಿಲುಕಿ ಈಚಿನ ದಶಕಗಳಲ್ಲಿ **ಕುಲಾಂತರಿ ತಂತ್ರಜ್ಞಾನ** ಎನ್ನುವ ಸರ್ವನಾಶದ ಹಾದಿ ಹಿಡಿದಿದೆ.

ಇದು ಕರ್ನಾಟಕದಲ್ಲಿ ಆಯೋಜಿಸಿದ್ದ **ರೈತತೀರ್ಪು** ಕಾರ್ಯಕ್ರಮಕ್ಕೆ ಇದ್ದ ಹಿನ್ನಲೆ. ನಮ್ಮ ಕೃಷಿಕರ ಕಾಣ್ಕೆಗಳನ್ನು ಕೃಷಿ ಸಂಶೋಧನೆಯ ಮಂಚೂಣಿಯಲ್ಲಿಟ್ಟು ಅವರನ್ನು ಫಿರ್ಯಾದುದಾರರನ್ನಾಗಿ ನ್ಯಾಯ ನೀಡುವವರನ್ನಾಗಿ ಗುರುತಿಸುವುದು, ರೈತ ತೀರ್ಪಿನ ಉದ್ದೇಶ. ಈ ಉದ್ದೇಶದ ಬೀಜವನ್ನು ಬಿತ್ತಿದ್ದು ೨೦೦೬ರಲ್ಲಿ ಪೋರ್ಚುಗಲ್‌ನಲ್ಲಿ. ಅಲ್ಲಿ ಇಂಗ್ಲೆಂಡ್‌ನ **ಪರಿಸರ ಮತ್ತು ಅಭಿವೃದ್ಧಿಯ ಅಂತರರಾಷ್ಟ್ರೀಯ ಸಂಸ್ಥೆ (I.I.E.D)** ಯು ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣವನ್ನು ಕೇಂದ್ರದಲ್ಲಿಟ್ಟುಕೊಂಡು ಒಂದು ಸಮ್ಮೇಳನವನ್ನು ನಡೆಸಿತು. ಅಲ್ಲಿ ಸೇರಿದ್ದ ಆಹಾರ ಸಾರ್ವಭೌಮತೆಯ ಕಾರ್ಯಕರ್ತರು ಈ **ರೈತ ತೀರ್ಪು** ಪ್ರಕ್ರಿಯೆಗೆ ಜನ್ಮ ಕೊಟ್ಟರು. ಇದನ್ನು ಕಾರ್ಯಗತಗೊಳಿಸಲು ಜಾಗತಿಕ ಮಟ್ಟದಲ್ಲಿ ಪ್ರವರ್ತನವನ್ನು ನಾಲ್ಕು ಭೌಗೋಳಿಕ ಪ್ರದೇಶಗಳಿಗೆ ವಿಂಗಡಿಸಲಾಯಿತು. ಲ್ಯಾಟಿನ್ ಅಮೇರಿಕ, ಪಶ್ಚಿಮ ಆಫ್ರಿಕಾ ಮತ್ತು ದಕ್ಷಿಣ ಏಷ್ಯದ ಪ್ರವರ್ತನದ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಸಾಧ್ಯವೇ? ಎಂದು ನನ್ನನ್ನು ಕೇಳಲಾಯಿತು. ಆ ಜವಾಬ್ದಾರಿಯಲ್ಲಿ ಇಡೀ ಪ್ರಕ್ರಿಯೆಗೆ ರೂಪಕೊಡುವುದು ಮತ್ತು ಅದನ್ನು ಸಂಘಟಿಸುವುದೂ ಸೇರಿತ್ತು. ಆಹಾರ ಸಾರ್ವಭೌಮತೆಯ ಕ್ಷೇತ್ರದಲ್ಲಿ ಕ್ರಿಯಾಶೀಲರಾದ ಮಿತ್ರರ ದೊಡ್ಡದೊಂದು ಬಳಗವೇ ನನಗೆ ದಕ್ಷಿಣ ಏಷ್ಯಾದಲ್ಲಿ ಇದ್ದುದರಿಂದ ನಾನು ಈ ಆಹ್ವಾನವನ್ನು ಸ್ವೀಕರಿಸಿದೆ. ಆದರ್ಶ (ADARSA- Alliance for Democratizing Agriculture Research in South Asia) - **ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣಕ್ಕಾಗಿ ದಕ್ಷಿಣ ಏಷ್ಯ ಒಕ್ಕೂಟ** ಹುಟ್ಟು ಪಡೆದು ಈ ಪ್ರಕ್ರಿಯೆಯನ್ನು ದಕ್ಷಿಣ ಏಷ್ಯಾದಲ್ಲಿ ಮುನ್ನಡೆಸಲು ಅನುವಾಯಿತು. ಒಕ್ಕೂಟವು ಭಾರತದಲ್ಲಿನ ಪ್ರಯೋಗಕ್ಕಾಗಿ ಕರ್ನಾಟಕವನ್ನು ತನ್ನ ಕೇಂದ್ರವನ್ನಾಗಿಸಿಕೊಂಡಿತು. ಇದೇ ಮಾದರಿಯ ಪ್ರಕ್ರಿಯೆಗಳು ನೇಪಾಳ ಮತ್ತು ಶ್ರಿಲಂಕಾಗಳಲ್ಲೂ ಮುಂದುವರೆದಿದೆ. ಈ ಪರಿಶ್ರಮದ ಪ್ರಮುಖ ಫಲ **ರೈತ ತೀರ್ಪು**. ಇದೊಂದು ಅಭೂತಪೂರ್ವ ಮತ್ತು ಐತಿಹಾಸಿಕ ಕ್ರಿಯಾಸರಣಿ.

ಆದರ್ಶಕ್ಕೆ ಆಧಾರವಾಗಿ ನಿಂತಿರುವ ಸಂಸ್ಥೆ **ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ**. ನಾನು ೨೫ ವರ್ಷಗಳ ಹಿಂದೆ ಸಹ ಸಂಸ್ಥಾಪಕನಾಗಿ ಪ್ರಾರಂಭಿಸಿದ ಈ ಸಂಸ್ಥೆ ಮುಖ್ಯವಾಹಿನಿಯಿಂದ ಹೊರಗುಳಿದ ಗ್ರಾಮೀಣ ಸಮುದಾಯಗಳ ಜೊತೆ

ಕೆಲಸ ಮಾಡುತ್ತಾ ಅಪಾರ ಅನುಭವದ ನೆಲೆಯಲ್ಲಿ ನಿಂತಿದೆ. ಆಂಧ್ರ ಪ್ರದೇಶದ ಮೇದಕ್ ಜಿಲ್ಲೆಯ ಪಸ್ತಾಪುರ ಗ್ರಾಮದಲ್ಲಿ **ಪ್ರಜಾತೀರ್ಪು** ಎಂದು ಕರೆದ ರೈತ ನ್ಯಾಯ ಮಂಡಲಿ ಯನ್ನು ಮಾರ್ಚ ೨೦೦೧ರಲ್ಲಿ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ ಆಯೋಜಿಸಿತ್ತು. ಇದು ಭಾರತದ ಮಟ್ಟಿಗೆ ಮೊಟ್ಟಮೊದಲ ಪ್ರಜಾನ್ಯಾಯಮಂಡಲಿ ಆಗಿತ್ತು. ಆದರೆ ವ್ಯಾಪ್ತಿಯ ಆಗಾಧತೆ ಮತ್ತು ಸಂಕೀರ್ಣತೆಗಳನ್ನು ಗಮನಿಸಿ ನೋಡಿದಾಗ ರೈತ ತೀರ್ಪು ತನ್ನ ಹಿಂದಿನ ಈ ಮಾದರಿಯ ಎಲ್ಲಾ ಪ್ರಯೋಗಗಳನ್ನೂ ಮೀರಿ ನಿಂತಿತ್ತು. ಆದಗ್ಯೂ ರೈತ ತೀರ್ಪುವಿನಂತಹ ಸಾಧಾರಣವಲ್ಲದ ಕಾರ್ಯವಿಧಿಗೆ ಹಿಂದಿನ ಪ್ರಯೋಗಗಳು ತಮ್ಮ ಅನುಭವಗಳನ್ನು ಧಾರೆಯೆರೆದಿವೆ.

ಈ ಹಿನ್ನೆಲೆಯಲ್ಲಿ ರೂಪುಗೊಂಡ ರೈತ ತೀರ್ಪು – ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣಕ್ಕಾಗಿ ಪ್ರಜಾನ್ಯಾಯಮಂಡಲಿಯ ವರದಿಯನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ. ನ್ಯಾಯ ಮಂಡಲಿಯ ಮುಖ್ಯ ಸಚೇತಕರೂ ನನ್ನ ಮಿತ್ರರೂ ಆದ ಶ್ರೀ ಸಂತೋಷ ಕೌಲಗಿ ಅವರು ಈ ವರದಿಯನ್ನು ಸಿದ್ಧಪಡಿಸಿದ್ದಾರೆ. ರೈತ ತೀರ್ಪು  ಮತ್ತು ಅದರ ಹಿಂದಿನ ಘಟನಾವಳಿಗಳ ಬಹುತರವಾದ ದಾಖಲೆಗಳನ್ನು ನೋಡಿ, ಪರೀಕ್ಷಿಸಿ ಈ ವರದಿಗೆ ರೂಪಕೊಟ್ಟಿದ್ದಾರೆ. ತಮಗೆ ದೊರೆತ ಅಲ್ಪ ಕಾಲಾವಧಿಯಲ್ಲಿ ವರದಿಯನ್ನು ಸಿದ್ಧಗೊಳಿಸಿದ ಮಿತ್ರ ಸಂತೋಷ್ ಕೌಲಗಿ ಮತ್ತು ಅವರ ಸಹೋದ್ಯೋಗಿ ಸಂತೋಷ್ ಶೀಲವಂತ್ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ರೈತ ತೀರ್ಪು ಯಶಸ್ವಿಯಾಗಲು ಸದಾ ನನ್ನೊಡನೆ ಇದ್ದು ಮತ್ತು ಸಹಕಾರ ನೀಡಿದ ಇಕ್ರಾ ಸಂಸ್ಥೆಯ ಬಾಬು, ಹಿತ್ತಲ ಗಿಡ ಪತ್ರಿಕೆಯ ಪ್ರಕಾಶ್ ಕಮ್ಮರಡಿ, ಅಪ್ಪಿಕೋ ಚಳುವಳಿಯ ಪಾಂಡುರಂಗ ಹೆಗಡೆ ಮತ್ತು ಕೃಷಿ ಮಾಧ್ಯಮ ಕೇಂದ್ರದ ಅನಿತಾ ಪೈಲೂರು ಇವರನ್ನು ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ.

ತೀರ್ಪಿಗಿಂತ ನಮಗೆ ಮುಖ್ಯವಾಗಿ ಕಾಣುವುದು ಅತ್ಯಂತ ಪ್ರಜಾಸತ್ತಾತ್ಮಕವಾಗಿ ನಡೆದ ಅದರ ಪೂರ್ವಭಾವಿ ಕಾರ್ಯಗತಿಗಳು. ಈ ಕಾರ್ಯಗತಿ  ಕೃಷಿ ಮತ್ತು ಕೃಷಿ ಸಂಶೋಧನೆಗೆ ಸಂಬಂಧಿಸಿದ ಎಲ್ಲಾ ವಲಯಗಳ ಜನರನ್ನು ಒಂದೇ ವೇದಿಕೆಗೆ ತಂದಿದ್ದು ವಿಶಿಷ್ಟವೆಂದೇ ಹೇಳಬೇಕು. ಇವರಲ್ಲಿ ಪ್ರತಿಯೊಬ್ಬರು ಸಮಾಜದಲ್ಲಿ ಕಡೆಗಣಿಸಲ್ಪಟ್ಟವರ ಮತ್ತು ದನಿ ವಂಚಿತರ ಪರವಾಗಿ ನಿಂತು ಸಮರ್ಥರಾಗಿ ದುಡಿದರು.ಪಾರದರ್ಶಕವಾದ ಮತ್ತು ಪ್ರಜಾಸತ್ತಾತ್ಮಕವಾದ ರೀತಿಯಲ್ಲಿ ಕಾರ್ಯವಿಧಾನಗಳನ್ನು ನಡೆಸಲು ಅವರು ಪಟ್ಟಶ್ರಮ ಹಾಗೂ ಶೇ.೫೦ರಷ್ಟು ಮಹಿಳೆಯರು ಅಲ್ಲದೆ ಸಾಧ್ಯವಾದಷ್ಟು ಪ್ರಮಾಣದಲ್ಲಿ ದಲಿತರು, ಆದಿವಾಸಿಗಳು ಮತ್ತು ಸಣ್ಣ ಹಿಡುವಳಿದಾರರನ್ನು ನ್ಯಾಯಮಂಡಲಿಗೆ ಕರೆತರುವುದರಲ್ಲಿ ಇವರು ತೋರಿಸಿದ ಕಾಳಜಿ ಮುಖ್ಯ ಪಾತ್ರವಹಿಸಿತ್ತು. ನ್ಯಾಯಮಂಡಲಿಯ ತೀರ್ಪುಗಳನ್ನು ನಾವು ಒಪ್ಪಬಹುದು ಅಥವಾ ಒಪ್ಪದೆ ಇರಬಹುದು. ಆದರೆ ತೀರ್ಪಿನಲ್ಲಿ ಪ್ರಕಟಗೊಂಡಿರುವ ಭಾವ – ಚಿಂತಕ ಪ್ರಬುದ್ಧತೆ  ಮತ್ತು ಆಸಕ್ತಿಯ ತೀವ್ರತೆಗೆ ಸ್ಪಂದಿಸದಿರಲು ಸಾಧ್ಯವಿಲ್ಲ.

ಈ ಪ್ರಕಟಣೆ **ರೈತ ತೀರ್ಪು** ವಿಗೆ ಸಂಬಂಧಿಸಿದ ಘಟನಾವಳಿಗಳನ್ನು ವರದಿ ಮಾಡುತ್ತಲೆ ಈ ಪ್ರಕ್ರಿಯೆಯ ಮೌಲ್ಯಗಳನ್ನೂ ಚಿಂತಿಸಿ ಪ್ರಕಟಗೊಳಿಸಲು ಪ್ರಯತ್ನಿಸಿದೆ. ಈ ಪ್ರಯತ್ನ ಸಫಲವಾಗಿದೆ. ಎಂದು ನನ್ನ ನಂಬಿಕೆ. ಈ ವರದಿ ಕೃಷಿಪರ ಚಳುವಳಿ, ರೈತ ಸಮುದಾಯಗಳು, ಕೃಷಿ ಸಂಶೋಧಕ ಮತ್ತು ಶಿಕ್ಷಕ ವೃಂದ, ನೀತಿ ನಿರೂಪಕರು ಮತ್ತು ಕಾರ್ಯಕರ್ತರ ಮಡಿಲು ಸೇರಿದೆ. ಇದನ್ನು ಓದಿ, ಅರ್ಥೈಸಿ, ಪರ್ಯಾಲೋಚಿಸಿ ಇದರ ಐತಿಹಾಸಿಕ ಮಹತ್ವವು ನಮ್ಮ ಸದ್ಯದ ಅಭಿವೃದ್ಧಿಯನ್ನು ಕುರಿತ ಸಂವಾದ ಮತ್ತು ವ್ಯಾಖ್ಯಾನಗಳಿಗೆ ಯಾವ ರೀತಿಯ ಕೊಡುಗೆಯನ್ನು ನೀಡಬಲ್ಲದು ಎಂದು ಚಿಂತಿಸಬೇಕು.

ವರದಿ ನಿಮ್ಮ ಮುಂದಿದೆ.

ನಿಮ್ಮ,

**ಪಿ.ವಿ.ಸತೀಶ್**

ನಿರ್ದೇಶಕರು
ಡೆಕ್ಕನ್ ಡೆವೆಲಪ್‌ಮೆಂಟ್ ಸೊಸೈಟಿ,
ಹೈದರಾಬಾದ್, ಆಂಧ್ರಪ್ರದೇಶ, ಭಾರತ
ಮತ್ತು
ದಕ್ಷಿಣ ಏಷ್ಯಾ ಸಂಯೋಜಕರು, ಆದರ್ಶ

**ರೈತ ತೀರ್ಪು ೨೦೦೯ರ ಡಿಸೆಂಬರ್ ಮಾಹೆಯಲ್ಲಿ ಕರ್ನಾಟಕದಲ್ಲಿ ನಡೆದ ವಿಶಿಷ್ಟ ಕಾರ್ಯಕ್ರಮ. ಪ್ರಪಂಚದ ವಿವಿಧ ದೇಶಗಳಲ್ಲಿ ಪ್ರಚಲಿತವಾಗಿರುವ ನಾಗರಿಕ ನ್ಯಾಯ ಮಂಡಲಿಗಳ ಮಾದರಿಯಲ್ಲಿ ಈ ಕಾರ್ಯಕ್ರಮ ನಡೆಯಿತು. ಇದು ಕರ್ನಾಟಕದ ರೈತ ಚರಿತ್ರೆಯಲ್ಲಿ ಮಹತ್ವದ ಘಟನೆ.**

## ನಾಗರಿಕ ನ್ಯಾಯ ಮಂಡಲಿ ಎಂದರೇನು?

ಎಲ್ಲ ರಾಜಕೀಯ ವ್ಯವಸ್ಥೆಗಳಿಗಿಂತ ಪ್ರಜಾಪ್ರಭುತ್ವ ವ್ಯವಸ್ಥೆ ಹೆಚ್ಚು ಜನಪರವಾದದ್ದು ಎಂಬುದರಲ್ಲಿ ಎರಡು ಮಾತಿಲ್ಲ. ವಾಕ್ ಸ್ವಾತಂತ್ರ್ಯ, ಧರ್ಮ ಸ್ವಾತಂತ್ರ್ಯ, ವೃತ್ತಿ ಸ್ವಾತಂತ್ರ್ಯ ಹೀಗೆ ಮನುಷ್ಯನ ಸ್ವತಂತ್ರ ಪ್ರವೃತ್ತಿಯನ್ನು ಗೌರವದಿಂದ ಕಾಣುವುದರೊಂದಿಗೆ ಎಲ್ಲರನ್ನೂ ಸರಿ ಸಮಾನರನ್ನಾಗಿ ಕಾಣುವ ವ್ಯವಸ್ಥೆಯಿದು ಎಂದು ಪ್ರಪಂಚದ ಬಹು ಜನರು ಭಾವಿಸಿದ್ದಾರೆ. ಹಾಗಾಗಿ ಈ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಹಾಗೂ ಸುಧಾರಿಸುವ ಪ್ರಯತ್ನ ಪ್ರಪಂಚದಾದ್ಯಂತ ನಡೆಯುತ್ತಲೇ ಇದೆ. ಬೇರೆ ರಾಜಕೀಯ ವ್ಯವಸ್ಥೆಗಳಿಗೆ ಹೋಲಿಸಿದರೆ ಇನ್ನೂ ಶೈಶಾವಸ್ಥೆಯಲ್ಲಿರುವ ಪ್ರಜಾಪ್ರಭುತ್ವ ವ್ಯವಸ್ಥೆಯ ಎಲ್ಲ ಆಶಯಗಳು ಸಂಪೂರ್ಣವಾಗಿ ನಾಗರಿಕರಿಗೆ ಒದಗುವಂತಾಗಲು ಈ ವ್ಯವಸ್ಥೆ ಇನ್ನೂ ಬಹಳ ದೂರ ಕ್ರಮಿಸಬೇಕಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಎಷ್ಟೇ ಪರಿಷ್ಕೃತಗೊಂಡಿದ್ದರೂ, ಅದರ ಪ್ರಕ್ರಿಯೆಯಲ್ಲಿ ಅಶಕ್ತರು ಪಾಲ್ಗೊಳ್ಳುವುದು ಇಂದೂ ಕೂಡ ಕಷ್ಟ ಸಾಧ್ಯವಾಗಿದೆ. ಹಣ, ಜಾತಿ, ಧರ್ಮ, ಜನಾಂಗದ ಬಲವುಳ್ಳವರ ಮುಂದೆ ಅವುಗಳ ಬೆಂಬಲವಿಲ್ಲದ ಕೋಟ್ಯಾಂತರ ಜನ ಎರಡನೆಯ ದರ್ಜೆಯ ಪ್ರಜೆಗಳಾಗಿ ಬದುಕುವ ಸ್ಥಿತಿ ಇದೆ. ಹಾಗೆಂದ ಮಾತ್ರಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತ್ಯಜಿಸಿಬಿಡೋಣ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಇದಕ್ಕಿಂತಲೂ ಉತ್ತಮವಾದ ರಾಜಕೀಯ ವ್ಯವಸ್ಥೆ ಇನ್ನೂ ಮೂಡಿ ಬಂದಿಲ್ಲ. ನಮಗಿರುವ ದಾರಿ ಎಂದರೆ ಈ ರಾಜಕೀಯ ವ್ಯವಸ್ಥೆಯನ್ನು ಸರಿದಾರಿಗೆ ತರಲು ಸದಾ ಕಾರ್ಯನಿರತರಾಗಿರುವುದು. ಇಂತಹ ಒಂದು ಪ್ರಯತ್ನ ನಾಗರಿಕ ನ್ಯಾಯ ಮಂಡಲಿ. ಯುರೋಪು ಮತ್ತು ಅಮೇರಿಕಾ ದೇಶಗಳಲ್ಲಿ ಚುನಾಯಿತ ಪ್ರಭುತ್ವ ನಾಗರಿಕರ ದನಿಯನ್ನು ಆಲಿಸಲು ಸೋತಾಗ ನಾಗರಿಕರು ಪರ್ಯಾಯವಾಗಿ ಸಾಮಾಜಿಕ ಕಾಳಜಿಯುಳ್ಳ ಪರಿಣಿತರ, ಗಣ್ಯರ ನ್ಯಾಯ ಮಂಡಳಿ ರಚಿಸಿ ಅದರ ಮುಂದೆ ತಮ್ಮ ದು:ಖ, ದುಮ್ಮಾನ ಮತ್ತು ಅಭಿಪ್ರಾಯಗಳನ್ನು ವಾದದ ರೂಪದಲ್ಲಿ ಮಂಡಿಸುತ್ತಾರೆ. ನ್ಯಾಯ ಮಂಡಲಿ ಇವರ ಎಲ್ಲ ವಾದಗಳನ್ನು ಶಾಂತ ರೀತಿಯಿಂದ ಆಲಿಸಿ ಕಡೆಗೆ ತಾನೊಂದು ತೀರ್ಪು ನೀಡುತ್ತದೆ. ಆ ತೀರ್ಪಿಗೆ ಸಾಕಷ್ಟು ಪ್ರಚಾರ ನೀಡಿ, ಅದರ ಬಗ್ಗೆ ಒಂದು ಸಾರ್ವಜನಿಕ ಅಭಿಪ್ರಾಯ ಉಂಟಾಗುವಂತೆ ಮಾಡಲಾಗುತ್ತದೆ. ಜನ ಸಾಮಾನ್ಯರ ಒಲವೇನಿದೆ ಎಂಬುದು ಪ್ರಭುತ್ವದ ಗಮನಕ್ಕೆ ಬರುವಂತೆ ಮಾಡಲಾಗುತ್ತದೆ. ಈ ಪ್ರಕ್ರಿಯೆಯಿಂದ ಸಾರ್ವಜನಿಕರಿಗೆ ಆಗಿರುವ ಅನ್ಯಾಯವು ಬಹಿರಂಗಗೊಳ್ಳುತ್ತದೆ. ಪ್ರಭುತ್ವ ಮುಜಗರ ಮತ್ತು ಒತ್ತಡಕ್ಕೆ ಒಳಗಾಗಿ ತನ್ನ ನಿಲುವನ್ನ ಸರಿಪಡಿಸಿಕೊಳ್ಳ ಬೇಕಾದ ವಾತಾವರಣ ನಿರ್ಮಾಣವಾಗುತ್ತದೆ. ನಾಗರಿಕ ನ್ಯಾಯ ಮಂಡಲಿಗಳ ಈ ಪ್ರಕ್ರಿಯೆ ಬಹಳ ಯಶಸ್ವಿಯಾಗಿ ಯುರೋಪು, ಅಮೇರಿಕಾದಲ್ಲಿ ನಡೆದಿದೆ.






# ರೈತ ತೀರ್ಪು

ಇತ್ತೀಚಿನ ವರ್ಷಗಳಲ್ಲಿ ಕೃಷಿ ಸಂಶೋಧನೆಯ ಕ್ಷೇತ್ರದಲ್ಲಿ ಹೊಸಗಾಳಿ ಬೀಸ ತೊಡಗಿದೆ. ಕೆಲವರಿಗೆ ಇದು ಸಂಶೋಧನೆಗೆ ಪೂರಕವಾದ ವಾತಾವರಣವನ್ನು ಉಂಟು ಮಾಡಿದೆ ಎನಿಸಿದರೆ ಮತ್ತೆ ಹಲವರಿಗೆ ಈ ಹೊಸಗಾಳಿಯಿಂದ ಸಂಶೋಧನೆಗಳು ರೈತರಿಂದ ದೂರ ಹೊರಟು ಹೋಗುತ್ತಿವೆ ಎನಿಸತೊಡಗಿದೆ. ಇದನ್ನು ತೀರ್ಮಾನ ಮಾಡುವವರು ಯಾರು? ಎಂಬ ಪ್ರಶ್ನೆ ಬಂದಾಗ, ಈ ಸಂಶೋಧನೆಗಳ ಫಲಾನುಭವಿಗಳಾದ, ರೈತರ, ನ್ಯಾಯ ಮಂಡಲಿಯೊಂದನ್ನು ರಚಿಸಿ, ಅದರ ಮುಂದೆ, ವಿಷಯ ಪರಿಣಿತರು ಕೃಷಿ ಸಂಶೋಧನೆಗಳ ಇತ್ತೀಚಿನ ವಿದ್ಯಾಮಾನವನ್ನು ಮಂಡಿಸುವ ವ್ಯವಸ್ಥೆ ಆಗಬೇಕೆಂದು ಹಲವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಘಟನೆಗಳಿಗೆ ಅನಿಸತೊಡಗಿತು. ಆ ಚಿಂತನೆಯ ಫಲವಾಗಿ, ಕೃಷಿ ಸಂಶೋಧನೆಗಳು ಹಿಡಿದಿರುವ ಜಾಡು ಸಣ್ಣ ಮತ್ತು ಅತಿ ಸಣ್ಣ ರೈತರ ದೃಷ್ಟಿಯಿಂದ ಎಷ್ಟು ಪ್ರಸ್ತುತ ಎಂಬುದನ್ನು ಈ ನ್ಯಾಯ ಮಂಡಲಿ ಆಲಿಸಬೇಕೆಂದು ಸಹ ತೀರ್ಮಾನಿಸಲಾಯಿತು. 'ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣ' ಎಂಬ ಚೌಕಟ್ಟಿನೊಳಗೆ ನ್ಯಾಯಾಸ್ಥಾನದ ಪ್ರಕ್ರಿಯೆ ನಡೆದು ನ್ಯಾಯ ಮಂಡಲಿ ತೀರ್ಪು ನೀಡಿತು. ಮುಖ್ಯವಾಹಿನಿಯ ಪ್ರಕ್ರಿಯೆಯಿಂದ ವಂಚಿತರಾದ, ರೈತರು, ರೈತ ಮಹಿಳೆಯರು, ದಲಿತರು ಹಾಗೂ ಆದಿವಾಸಿಗಳು ನ್ಯಾಯ ಮಂಡಲಿಯ ಸದಸ್ಯರಾಗಿ ಕೃಷಿ ಸಂಶೋಧನೆಯನ್ನು ಪರಾಮರ್ಶಿಸಿ ತೀರ್ಪು ನೀಡಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶ ವಂಚಿತ, ದನಿ ವಂಚಿತ, ಶೋಷಿತ ವರ್ಗದ ಅಭಿಪ್ರಾಯಗಳು ಸಾರ್ವಜನಿಕಗೊಳ್ಳುವಂತೆ ಮಾಡುವಲ್ಲಿ ಈ ಪ್ರಕ್ರಿಯೆ ಮಹತ್ತರ ಪಾತ್ರ ವಹಿಸಿತು. ಈ ರೀತಿಯ ಚಾರಿತ್ರಿಕವಾದ ಘಟನೆಯೊಂದು ಪ್ರಪಂಚದಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ ನಡೆದದ್ದು ವಿಶೇಷ.



## ಹಿನ್ನೆಲೆ

**ತೊ**ಂಭತ್ತರ ದಶಕದಲ್ಲಿ ಪ್ರಚಾರಕ್ಕೆ ಬಂದ 'ಆಹಾರ ಭದ್ರತೆ' ಯ ಕಲ್ಪನೆ ಆಹಾರ ಉತ್ಪಾದನೆಯ ಕಡೆಗೆ ಗಮನ ಹರಿಸಿತೇ ಹೊರತು ರೈತರ ಭದ್ರತೆ ಹಾಗೂ ಸ್ವತಂತ್ರದ ಕಡೆಗೆ ಗಮನ ಹರಿಸಲೇ ಇಲ್ಲ. ಹಾಗಾಗಿ 'ಆಹಾರ ಭದ್ರತೆ'ಯ ಬದಲಾಗಿ ಆಗಬೇಕಿರುವುದು 'ಆಹಾರದ ಸಾರ್ವಭೌಮತ್ವ' ಎಂಬ ವಿಚಾರ ಬೆಳೆಯತೊಡಗಿತು. ಅಂದರೆ ಆಹಾರದ ಉತ್ಪತ್ತಿಯ ವಿಧಾನದ ಮೇಲಿನ ಹಿಡಿತ ಸಂಪೂರ್ಣವಾಗಿ ರೈತರಲ್ಲಿರಬೇಕೆಂಬುದು ಇದರ ಉದ್ದೇಶ. ಈ ವಿಚಾರವನ್ನು ನಾಗರಿಕ ಸಂಘಟನೆಗಳು, ಅಂತಾರಾಷ್ಟ್ರೀಯ ಹೋರಾಟಗಳು ಎತ್ತಿಹಿಡಿದಿವೆ. ಆಹಾರ ಸಾರ್ವಭೌಮತ್ವ ರೈತರ ಹಿಡಿತಕ್ಕೆ ಬರಬೇಕೆಂದರೆ ಅದರ ಪ್ರಮುಖ ಕೊಂಡಿಯಾದ ಕೃಷಿ ಸಂಶೋಧನೆಯಲ್ಲಿ ರೈತರ ಪಾಲ್ಗೊಳ್ಳುವಿಕೆ ಅನಿವಾರ್ಯ ಎನ್ನುವುದು ಹೋರಾಟದ ಅನುಭವದಿಂದ ಬಂದಿದೆ. ಬಹಳ ಸಮಯದವರೆಗೆ ಕೃಷಿ ಸಂಶೋಧನೆ ಎಂಬುದು ಕೇವಲ ಪರಿಣಿತರಿಗಷ್ಟೇ ಸೀಮಿತವಾದ ಕ್ಷೇತ್ರವೆಂದು ಭಾವಿಸಲ್ಪಟ್ಟಿದೆ. ರೈತರು ಸಂಶೋಧನೆಯ ಫಲಾನುಭವಿಗಳೆಂದು ತೀರ್ಮಾನಿಸಿ ಅವರನ್ನು ಸಂಶೋಧನಾ ವಲಯದಿಂದ ಹೊರಗಿಡಲಾಗಿದೆ. ಕೃಷಿ ಉತ್ಪಾದನೆಯಲ್ಲಿ ಯಾವುದೇ ವೈಫಲ್ಯವಾದಾಗ ರೈತರ ಅಜ್ಞಾನ ಮತ್ತು ಅಸಮರ್ಥತೆಯೇ ವೈಫಲ್ಯಕ್ಕೆ ಕಾರಣ ಎಂದು ರೈತರನ್ನು ದೂಷಿಸಲಾಗಿದೆ. ಈ ವೈಫಲ್ಯಕ್ಕೆ ಕೃಷಿಗಿಂತ, ಕೃಷಿಗೆ ನಾವು ನೀಡಿದ ತಂತ್ರಜ್ಞಾನದಲ್ಲಿಯೇ ಏನಾದರೂ ದೋಷವಿರಬಹುದೇ ಎಂದು ಒಮ್ಮೆಯೂ ಪರಿಣಿತರಾಗಲಿ, ಸಂಶೋಧಕರಾಗಲಿ, ಆಡಳಿತಗಾರರಾಗಲಿ ಯೋಚಿಸಿಲ್ಲ. ಸಂಶೋಧನೆ ಸಮಸ್ಯೆಗೆ ಉತ್ತರವನ್ನು ಕಂಡುಹಿಡಿಯುತ್ತದೆ, ನಿಜ. ಆದರೆ ಮೊದಲು, ಸಮಸ್ಯೆಯನ್ನು ಅದು ಸರಿಯಾಗಿ ಅರ್ಥಮಾಡಿಕೊಂಡಿರುತ್ತದೆಯೇ? ಎಂಬುದು ಸಾಮಾನ್ಯರಿಗಿರುವ ಅನುಮಾನ.



ದಕ್ಷಿಣ ಏಶಿಯಾದಲ್ಲಿ ರೈತರು ಕೃಷಿ ವಿಜ್ಞಾನವೆಂಬುದನ್ನು ಹಲವು ಶತಮಾನಗಳಿಂದ ಅಭಿವೃದಿಪಡಿಸಿದ್ದಾರೆ. ಬೇಸಾಯ ಶಾಸ್ತ್ರ, ಭೂ ಸತ್ವ ಹಾಗೂ ಸಸ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ದಕ್ಷಿಣ ಏಶಿಯಾದ ರೈತರು ಮಾಡಿರುವ ಹಲವು ಸಂಶೋಧನೆಗಳು ಅಚ್ಚರಿಯನ್ನುಂಟುಮಾಡುತ್ತವೆ. ದಕ್ಕನ್ ಪ್ರದೇಶದ ಒಣ ಭೂಮಿಯಲ್ಲಿಯ ಜೀವ ವೈವಿಧ್ಯವು ಸಂಶೋಧನೆಯ ವಿಸ್ಮಯ ಲೋಕವಾಗಿದೆ. ಹಾಗೆಯೇ ಪೂರ್ವ ಭಾರತದ ಗದ್ದೆಗಳಲ್ಲಿ ಮಾಡುವ ಮೀನು-ಭತ್ತ-ಬಾತುಕೋಳಿ ವ್ಯವಸಾಯ ಕೂಡ ಅದ್ಭುತ. ಅಂತೆಯೇ ಮಲೆನಾಡಿನ ಸಾಂಬಾರ ಬೆಳೆಯ ತೋಟಗಳೂ ಸಹ. ಈ ಪ್ರತಿಯೊಂದು ಕೃಷಿ ವಲಯವೂ ಜೀವ ವೈವಿಧ್ಯದ ವಿಶ್ವವಿದ್ಯಾನಿಲಯ. ರೈತರು ಇಂತಹ ಅನೇಕ ಸಂಶೋಧನೆಗಳನ್ನು ಮಾಡಿರುವಾಗ ಅವರನ್ನು ಕೃಷಿ ಸಂಶೋಧನಾ ವಲಯದಿಂದ ಹೊರಗಿಟ್ಟಿರುವುದೇಕೆ?

ಇದು ಅರಿವಿಗೆ ಬರುತ್ತಿದ್ದಂತೆ ಏಶಿಯಾದ ಅನೇಕ ನಾಗರಿಕ ಸಂಘಟನೆಗಳು ರೈತ ಮುಂದಾಳತ್ವದ ಕೃಷಿಸಂಶೋಧನೆಗೆಸಂಬಂಧಪಟ್ಟಂತೆ ಸಂವಾದಕ್ಕೆ, ಸಾರ್ವಜನಿಕ ಚರ್ಚೆಗೆ ಅನೇಕ ಕ್ರಮಗಳನ್ನು ಕೈಗೊಂಡಿವೆ. ಹಾಗೆಯೇ ತಳಮಟ್ಟದ ಕೃಷಿ ಸಂಶೋಧನೆಯಾದ ಯೋಜನೆ, ಅಂಕಿ-ಅಂಶ ಸಂಗ್ರಹಣೆ ಮತ್ತು ಕೃಷಿ ಸಂಶೋಧನೆಯ ವಿಶ್ಲೇಷಣೆಯಲ್ಲಿ ನೇರವಾಗಿ ರೈತ ಸಮುದಾಯಗಳನ್ನು ತೊಡಗಿಸುತ್ತಿವೆ. ಪ್ರಪಂಚದಾದ್ಯಂತ, ಸಾರ್ವಜನಿಕ ಹೂಡಿಕೆಯ ಸಂಶೋಧನೆಗಳು, ರೈತರಿಗೆ, ಆಹಾರ ಕ್ಷೇತ್ರದ ಕೆಲಸಗಾರರಿಗೆ ಹಾಗೂ ಬಳಕೆದಾರರಿಗಿರುವ ಆಯ್ಕೆಗಳನ್ನೂ, ಅವರು ಮಾಡುವ ಹಾಗೂ ಜೀವಿಸುವ ವಾತಾವರಣವನ್ನು ರೂಪಿಸತೊಡಗಿವೆ. 'ಸೀಮಿತ ದೃಷ್ಟಿ ಕೋನದ ಆರ್ಥಿಕ ಆಸಕ್ತಿಗಳನ್ನು ದೂರ ಇಟ್ಟು ಸಾರ್ವಜನಿಕ ಹಿತವನ್ನು ಕಾಪಾಡುವ, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಪಾಲಿಸಿ ಪ್ರಜಾತಾಂತ್ರೀಕರಣಗೊಳಿಸುವ ದಾರಿಗಳನ್ನು ಹುಡುಕಬೇಕಿದೆ'






ಎಂದು ಇಂಗ್ಲೆಂಡ್ ದೇಶದ ಅಂತಾರಾಷ್ಟ್ರೀಯ ಪರಿಸರ ಮತ್ತು ಅಭಿವೃದ್ಧಿ ಸಂಸ್ಥೆಯ ಡಾ.ಮೈಕೆಲ್ ಪಿಂಬರ್ಟ್ ಹೇಳುತ್ತಾರೆ.

೨೦೦೫ ರಿಂದ ೨೦೦೭ ರ ವರೆಗೆ ರೈತರೊಂದಿಗೆ, ದನಗಾಹಿಗಳೊಂದಿಗೆ, ಆದಿವಾಸಿಗಳೊಂದಿಗೆ, ನೀತಿ ನಿರೂಪಕರೊಂದಿಗೆ ಮತ್ತು ಸಾಮಾಜಿಕ ಚಳುವಳಿಗಳ ಪ್ರತಿನಿಧಿಗಳೊಂದಿಗೆ ವಿವಿಧ ಹಂತಗಳಲ್ಲಿ ನಡೆಸಿದ ಮಾತುಕತೆಯು, ತಮಗೆ ಬೇಕಾದ ಆಹಾರ ಮತ್ತು ಕೃಷಿ ಸಂಶೋಧನೆಗೆ ಸಂಬಂಧಿಸಿದಂತೆ ನಾಗರಿಕರಿಗಿರುವ ಪರಿಕಲ್ಪನೆಯನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿರ್ಧರಿಸಲು ಹಾಗೂ ಅವರನ್ನು ಸಮರ್ಥರನ್ನಾಗಿಸಲು ಬಹು ದೇಶಗಳ ಮಟ್ಟದಲ್ಲಿ ಉಪಕ್ರಮವೊಂದನ್ನು ರೂಪಿಸಲಾಯಿತು. ಈ ಅಂತಾರಾಷ್ಟ್ರೀಯ ಉಪಕ್ರಮವು, ಆಹಾರ ವ್ಯವಸ್ಥೆಯ ಪಾಲನೆಯ ಪ್ರಜಾತಾಂತ್ರೀಕರಣ ಮತ್ತು ಸಾರ್ವಜನಿಕ ಹಿತಕ್ಕಾಗಿ ಆಹಾರ ಮತ್ತು ಕೃಷಿ ಸಂಶೋಧನೆಯ ಬಗೆಗಿನ ನಾಗರಿಕ ಮರು ಚಿಂತನೆಯ ಪ್ರಸ್ತಾಪವನ್ನು ತನ್ನ ಯೋಜನೆಯನ್ನಾಗಿಸಿಕೊಂಡಿತು. ಈ ಉಪಕ್ರಮವು ವಿಕೇಂದ್ರಿತವಾದ, ತಳದಿಂದ ಮೇಲಕ್ಕೆ ಚಲಿಸುವ, ಮತ್ತು ರೈತರು ಹಾಗೂ ನಾಗರಿಕರ ಆಹಾರ ಸಾರ್ವಭೌಮತ್ವವನ್ನು ಒಪ್ಪುವ ಕೃಷಿ ಸಂಶೋಧನೆಯ ಪ್ರಕ್ರಿಯೆಯನ್ನು ಬೆಂಬಲಿಸುತ್ತದೆ. ಜೊತೆಗೆ ಕೃಷಿ ಸಂಶೋಧನೆಯ ನೀತಿ ಹಾಗೂ ರೂಢಿಗಳ ಬದಲಾವಣೆಗೆ ಸಾಮೂಹಿಕವಾಗಿ ಒತ್ತಡ ತರಲು ಸಂಘಟನಾತ್ಮಕ ಕಾರ್ಯಮಾಡುತ್ತದೆ.

ಈ ಜನ ಸಹಭಾಗಿತ್ವದ ಪ್ರಕ್ರಿಯೆಯಲ್ಲಿ ಸಣ್ಣ ರೈತರು, ಆದಿವಾಸಿಗಳು, ದನಗಾಹಿಗಳು, ಆಹಾರ ಕ್ಷೇತ್ರದ ಕಾರ್ಮಿಕರು ಮತ್ತು ಇತರ ನಾಗರಿಕರು ಯಾವುದೇ ಹಿಂಜರಿಕೆ ಇಲ್ಲದೆ ಪಾಲ್ಗೊಳ್ಳಲು ಸಾಧ್ಯವಾಗುವಂತಹ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಪ್ರಪಂಚದ ನಾಲ್ಕು ವಲಯಗಳಲ್ಲಿ ೨೦೦೭ರಲ್ಲಿ ಪ್ರಕ್ರಿಯೆ ಪ್ರಾರಂಭಿಸಲಾಯಿತು. ಪಶ್ಚಿಮ ಆಫ್ರಿಕಾದಲ್ಲಿ ಮಾಲಿ ದೇಶವನ್ನು, ದಕ್ಷಿಣ ಏಶಿಯಾದಲ್ಲಿ ಭಾರತವನ್ನು, ಪಶ್ಚಿಮ ಏಶಿಯಾದಲ್ಲಿ ಇರಾನ್ ದೇಶವನ್ನು ಹಾಗೂ ಲ್ಯಾಟಿನ್ ಅಮೇರಿಕಾದಲ್ಲಿ ಬೊಲಿವಿಯಾ ದೇಶವನ್ನು ವಲಯ ಸಂಯೋಜಕ ದೇಶಗಳಾಗಿ ನಿಯೋಜಿಸಲಾಯಿತು.



ಅಂತಾರಾಷ್ಟ್ರೀಯ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ, ಅಂತಾರಾಷ್ಟ್ರೀಯ ಪರಿಸರ ಮತ್ತು ಅಭಿವೃದ್ಧಿ ಸಂಸ್ಥೆಯೊಂದಿಗೆ ವಲಯ ಸಂಜೋಜಕರು ಕೈ ಜೋಡಿಸಿ ಕೆಲಸಮಾಡುತ್ತಾರೆ. ಈ ಇಡೀ ಪ್ರಕ್ರಿಯೆಗೆ 'ಆದರ್ಶ' (**A**lliance for **D**emocratizing **A**gricultural **R**esearch in **S**outh **A**sia) ಎಂದು ನಾಮಕರಣ ಮಾಡಲಾಗಿದೆ. ದಕ್ಷಿಣ ಏಶಿಯಾದ ಸಂಯೋಜಕರಾಗಿ ಆಂಧ್ರಪ್ರದೇಶದ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ ಕೆಲಸ ನಿರ್ವಹಿಸುತ್ತಿದೆ. ಕಳೆದ ೨೫ ವರ್ಷಗಳಿಂದ ಅತಿ ಸಣ್ಣ ರೈತರು, ದಲಿತ ಮಹಿಳಾ ರೈತರೊಂದಿಗೆ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ ಕೆಲಸ ಮಾಡುತ್ತಿದೆ.

ಈ ಹೊಸ ಪ್ರಯೋಗವು, ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಗೆ ಸಂಬಂಧಿಸಿದ ತೀರ್ಮಾನಗಳು, ನೀತಿ–ನಿರೂಪಣೆ, ಸಂಪನ್ಮೂಲ ವಿತರಣೆ, ಸಂಶೋಧನಾ ಸಂಸ್ಥೆಗಳ ಆಯ್ಕೆಗೆ ಸಂಬಂಧಿಸಿದ ವಿಷಯಗಳಲ್ಲಿ, ನಾಗರಿಕರು ಹಾಗೂ ತಜ್ಞರಲ್ಲದವರೂ ಸಹ ಪಾಲ್ಗೊಳ್ಳುವ ಅವಕಾಶಗಳನ್ನು ಹೆಚ್ಚಿಸಿದೆ.

ಅನೇಕ ವಲಯಗಳಲ್ಲಿ ನಡೆದಿರುವ ಈ ಪ್ರಕ್ರಿಯೆಗೆ ನೆದರಲ್ಯಾಂಡ್‌ನ ಮಿನಿಸ್ಟ್ರಿ ಆಫ್ ಫಾರಿನ್ ಅಫೇರ್, ದಿ ಸ್ವಿಸ್ ಡೆವಲಪಮೆಂಟ್ ಕೊ–ಆಪರೇಶನ್, NOVIB-OXFAM, ದಿ ಕ್ರಿಸ್ಟಿನ್‌ಸನ್ ಫಂಡ್ ಸಂಸ್ಥೆಗಳು ನೆರವು ನೀಡಿವೆ.

• • • • • • • • • • • • • •

# ರೈತ ತೀರ್ಪು ಹೇಗೆ ಕಾರ್ಯ ನಿರ್ವಹಿಸಿದೆ?

**ಈ** ಮೇಲ್ಕಾಣಿಸಿ ಹಿನ್ನೆಲೆಯಲ್ಲಿ ರೈತ ತೀರ್ಪು ಅಸ್ತಿತ್ವಕ್ಕೆ ಬಂದಿದೆ. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಸಂಪೂರ್ಣ ನಂಬಿಕೆ ಇಟ್ಟಿರುವ ಪ್ರಕ್ರಿಯೆ ರೈತ ತೀರ್ಪು. ಹಾಗಾಗಿ ಪ್ರಾರಂಭದಿಂದ ಅಂತ್ಯದವರೆಗೂ ರೈತ ತೀರ್ಪಿನ ಪ್ರತಿಯೊಂದು ಹಂತವೂ ಪಾರದರ್ಶಕವಾಗಿದ್ದು ಪ್ರಜಾತಾಂತ್ರಿಕ ವ್ಯವಸ್ಥೆಯ ಎಲ್ಲ ಆಶಯಗಳನ್ನು ಮೈಗೂಡಿಸಿಕೊಂಡು ನಡೆದಿದೆ. ಈ ಪ್ರಕ್ರಿಯೆ ಪ್ರಜಾತಾಂತ್ರಿಕವಾಗಿ ನಡೆಯುವಂತೆ ಮಾಡಲು ಹಲವಾರು ಚರ್ಚೆಯ ನಂತರ ಇಡೀ ಪ್ರಕ್ರಿಯೆಯನ್ನು ಆರು ಭಾಗಗಳಾಗಿ ವಿಂಗಡಿಸಲಾಯಿತು. ಅವು ಯಾವುವೆಂದರೆ

* ಸಂಚಾಲನಾ ಸಮಿತಿ
* ಮೇಲ್ವೀಕ್ಷಣಾ ಸಮಿತಿ
* ಸಂಪನ್ಮೂಲ ವ್ಯಕ್ತಿಗಳು ಮತ್ತು ಸಲಹೆಗಾರರು
* ರೈತ ನ್ಯಾಯಮಂಡಳಿ
* ವಾದಿಗಳು ಮತ್ತು ಸಾಕ್ಷಿಗಳು
* ಆಸಕ್ತರು



## ಸಂಚಾಲನಾ ಸಮಿತಿ



ರೈತ ತೀರ್ಪಿನ ಕಲ್ಪನೆಯನ್ನು ಧಾರವಾಡ ಮತ್ತು ಬೆಂಗಳೂರಿನಲ್ಲಿ ನಡೆದ ಎರಡು ಪ್ರತ್ಯೇಕ ನಾಗರಿಕ ಸಭೆಗಳಲ್ಲಿ ಮಂಡಿಸಲಾಯಿತು. ಈ ಸಭೆಗಳು ಕ್ರಮವಾಗಿ ೬-೬-೨೦೦೮ ಹಾಗೂ ೧೬-೭-೨೦೦೮ ರಂದು ನಡೆದವು. ಈ ಸಭೆಗಳಲ್ಲಿ ರೈತರು, ಮಹಿಳೆಯರು, ರೈತಸಂಘಟನೆಗಳು ಗ್ರಾಹಕ ಸಂಘಟನೆಗಳ ಪ್ರತಿನಿಧಿಗಳು, ವಿಜ್ಞಾನಿಗಳು, ವಿದ್ವಾಂಸರು, ಮಾಧ್ಯಮ ಪ್ರತಿನಿಧಿಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಅವರೆಲ್ಲರೂ ರೈತ ತೀರ್ಪಿನ ವಿಚಾರವನ್ನು ಸರ್ವಾನುಮತದಿಂದ ಸಮರ್ಥಿಸಿದರು.


ಈ ಸಭೆಗಳಲ್ಲಿ ಭಾಗವಹಿಸಿದ ವ್ಯಕ್ತಿಗಳಿಂದ ಆಯ್ದ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಿ ಅವರಿಗೆ ಕೆಳಕಾಣಿಸಿದ ಜವಾಬ್ದಾರಿಯನ್ನು ಕೊಡಲಾಯಿತು.

* ರೈತ ತೀರ್ಪಿನ ಪ್ರಕ್ರಿಯೆಯನ್ನು ನೆರವೇರಿಸುವುದು.
* ನ್ಯಾಯ ಮಂಡಳಿಗೆ ರೈತರನ್ನು ಆಯ್ಕೆಮಾಡುವುದು.
* ನ್ಯಾಯ ಮಂಡಳಿ ಆಯ್ಕೆಗೆ ಮಾನದಂಡಗಳನ್ನು ಗೊತ್ತುಪಡಿಸುವುದು.
* ವಿಚಾರ ಮಂಡನೆಗೆ ವಾದಿಗಳನ್ನು, ಸಾಕ್ಷಿಗಳನ್ನು ಗುರುತಿಸುವುದು.
* ಆಸಕ್ತ ಜನರ ಪಟ್ಟಿಯನ್ನು ತಯಾರು ಮಾಡುವುದು.
* ರೈತ ತೀರ್ಪು ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಳ್ಳಲು ಬೇಕಾದ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸುವುದು.
* ರೈತ ತೀರ್ಪಿನ ಪ್ರಕ್ರಿಯೆಯು ಸಶಕ್ತಗೊಳ್ಳಲು ಬೇಕಾದ ಸಲಹೆ ಸೂಚನೆಗಳನ್ನು ನೀಡುವುದು.



# ಸಂಚಾಲನಾ ಸಮಿತಿ ಸದಸ್ಯರು

**ಈ** ಕೆಳಕಾಣಿಸಿದ ಮಹನೀಯರು ಸಂಚಾಲನಾ ಸಮಿತಿಯ ಸದಸ್ಯರಾಗಿದ್ದುಕೊಂಡು ತಮ್ಮ ಜವಾಬ್ದಾರಿಯನ್ನು ಉತ್ಸಾಹ ಮತ್ತು ಶ್ರದ್ಧೆಯಿಂದ ನಿರ್ವಹಿಸಿದರು.



**ಶ್ರೀ ಆನಂದತೀರ್ಥ ಪ್ಯಾಟಿ**
ಗುಲ್ಬರ್ಗ
ದೂ : ೯೪೪೮೨೪೦೬೭೬
: anpyatee@gmail.com

ಹತ್ತು ವರ್ಷಕ್ಕೂ ಹೆಚ್ಚಿನ ಕಾಲದಿಂದ ಪತ್ರಕರ್ತರಾಗಿರುವ ಶ್ರೀ ಪ್ಯಾಟಿ ಸದ್ಯ ಗುಲ್ಬರ್ಗದಲ್ಲಿ ಪ್ರಜಾವಾಣಿ ದಿನ ಪತ್ರಿಕೆಯ ಹಿರಿಯ ವರದಿಗಾರರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಗ್ರಾಮೀಣ ಬದುಕು ಹಾಗೂ ಕೃಷಿಗೆ ಸಂಬಂಧಿಸಿದಂತೆ ಬರಹ ಮಾಡಲು ಕರ್ನಾಟಕದಾದ್ಯಂತ ಪ್ರವಾಸ ಮಾಡಿದ್ದಾರೆ. ಅವರ ಬರಹಗಳ ಸಂಗ್ರಹ 'ಶತಶೃಂಗರ ಸಾಲಿನಲ್ಲಿ' ಎಂಬ ಹೆಸರಿನಲ್ಲಿ ಪ್ರಕಟಗೊಂಡಿದೆ. 'ಸಾವಯವ ಕೃಷಿಯ ಕಡೆಗೆ ಹತ್ತು ಹೆಜ್ಜೆಗಳು' ಎಂಬ ಪುಸ್ತಕಕ್ಕೆ ಸಹ ಲೇಖಕರಾಗಿದ್ದಾರೆ.



**ಡಾ॥ ಎನ್. ದೇವಕುಮಾರ್**
ಬೆಂಗಳೂರು
ದೂ : ೯೪೮೦೦೩೭೮೭೦
: ndevakumar@yahoo.com

ರೈತಪರ ವಿಜ್ಞಾನಿಯಾದ ದೇವಕುಮಾರ ಅವರು ಈ ಹಿಂದೆ ಶಿವಮೊಗ್ಗದ ಸಾವಯವ ಕೃಷಿ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿದ್ದರು. ಸುಮಾರು ೮೦ ದೇಸಿ ತಳಿ ಭತ್ತವನ್ನು ತಮ್ಮ ಕೇಂದ್ರದಲ್ಲಿ ಬೆಳೆಸಿ ಅದನ್ನು ರೈತರಿಗೆ ಹಂಚಿದವರು. ಸಾವಯವ ಕೃಷಿ ಹಾಗೂ ಪಾರಂಪರಿಕ ತಳಿಗಳ ಬಗ್ಗೆ ಅಪಾರ ಕಾಳಜಿಯುಳ್ಳವರು. ಸದ್ಯ ಅವರು ತೃಣ ಧಾನ್ಯಗಳು ಹಾಗೂ ಜನಪ್ರಿಯವಾಗಿಲ್ಲದ ಆಹಾರ ಬೆಳೆಗಳ ಮೇಲೆ ಸಂಶೋಧನೆ ನಡೆಸಿದ್ದಾರೆ.



**ಶ್ರೀ ಚನ್ನಬಸಪ್ಪ ಶಿವಪ್ಪ ಕೊಂಬಳಿ**
ಕಾಕೊಳ
ರಾಣೆಬೆನ್ನೂರು ತಾಲ್ಲೂಕು
ಹಾವೇರಿ ಜಿಲ್ಲೆ

ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತರು. ಸಾವಯವ ಕೃಷಿ ಮಿಶನಿನ್ ಜಿಲ್ಲಾ ಸಂಯೋಜಕರು. ತಮ್ಮ ಗ್ರಾಮದಲ್ಲಿ ನೀರು ಸಂರಕ್ಷಣೆಗೆ ಹೊಸ ಆಯಾಮ ತೋರಿದವರು. ತಮ್ಮ ಗ್ರಾಮದ ಜನರನ್ನು ಒಗ್ಗೂಡಿಸಿ ಶ್ರಮದಾನದ ಮೂಲಕ ಕೆರೆಗಳ ಹೂಳು ತೆಗೆಯುವುದು, ಅರಣ್ಯೀಕರಣ ಮಾಡುವುದರೊಂದಿಗೆ ಮಳೆ ನೀರು ಕೊಯ್ಲು ಮಾಡಿ ಗ್ರಾಮ ನೀರಿನ ಸ್ವಾವಲಂಬನೆಗೆ ಕಾರಣರಾದವರು. ತಮ್ಮ ಹೆಚ್ಚಿನ ಸಮಯವನ್ನು ಕರ್ನಾಟಕದಾದ್ಯಂತ ನೀರು ಸಂರಕ್ಷಣೆಗೆ ಸಂಬಂಧಿಸಿದಂತೆ ಜನ ಜಾಗೃತಿಯನ್ನು ಉಂಟು ಮಾಡಲು ಬಳಸುತ್ತಿದ್ದಾರೆ. ತಮ್ಮ ಗ್ರಾಮದಲ್ಲಿ ಸ್ವಾಭಾವಿಕ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಪ್ರಾರಂಭಿಸಿ ಅದರ ಮೂಲಕ ಪರಿಸರ ಶಿಕ್ಷಣ ನೀಡುವ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ.



**ಡಾ॥ ಪ್ರಕಾಶ ಭಟ್**
ಧಾರವಾಡ
ದೂ: ೯೦೦೮೪೫೨೪೪೭
: bhatps@gmail.com

ಪಶು ವೈದ್ಯರಾದ ಪ್ರಕಾಶ ಭಟ್ಟರು ಪದವಿಯ ನಂತರ ನೇರವಾಗಿ ಗ್ರಾಮೀಣಾಭಿವೃದ್ಧಿ ಕ್ಷೇತ್ರಕ್ಕೆ ಬಂದವರು. ೨೫ ವರ್ಷಗಳ ಕಾಲ ಕರ್ನಾಟಕದ ಬೈಫ್ ಗ್ರಾಮೀಣ ಸಂಸ್ಥೆಯಲ್ಲಿ ವಿವಿಧ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದವರು. ಸಮುದಾಯದ ಶಕ್ತಿಯಲ್ಲಿ ಅಗಾಧ ನಂಬಿಕೆಯಿಟ್ಟಿರುವ ಅವರು ಸುಸ್ಥಿರ ಕೃಷಿ ಹಾಗೂ ಸಂಬಂಧಿ ಚಟುವಟಿಕೆಗಳಿಗೆ ಚಾಲನೆ ನೀಡಿದವರು. ಗ್ರಾಮೀಣ ಬದುಕಿನಲ್ಲಿ ಸ್ವಾವಲಂಬನೆ ಹಾಗೂ ಸ್ವಾಭಿಮಾನದ ಮೂಲಕ ಸುಸ್ಥಿರತೆ ತರುವ ಯೋಜನೆಗಳ ಹುಡುಕಾಟದಲ್ಲಿರುವ ಡಾ.ಪ್ರಕಾಶ ಭಟ್ಟರು ಯಕ್ಷಗಾನ ಕಲಾವಿದರೂ ಸಹ.



**ಡಾ|| ಎಲ್. ಜಿ. ಹಿರೇಗೌಡರ**
ಹುಲಕೋಟಿ, ಗದಗ – ೫೮೫೨೦೫
ದೂ: ೯೪೪೮೩೫೮೭೭೨
: laxs@gmail.com

ಧಾರವಾಡದ ಕೃಷಿ ವಿಶ್ವವಿದ್ಯಾಲಯದಿಂದ ಕೃಷಿಯಲ್ಲಿ ಸ್ನಾತಕೋತ್ತರ ಪದವಿ ಪಡೆದ ಹಿರೇಗೌಡರ ಅವರು ಭಾರತೀಯ ಕೃಷಿ ಸಂಶೋಧನಾ ಕೇಂದ್ರದಿಂದ ಡಾಕ್ಟರೇಟ್ ಪದವಿ ಪಡೆದವರು. ಸರಳತೆ ಹಾಗೂ ರೈತಪರ ನಿಲುವುಗಳಿಗಾಗಿ ಹೆಸರಾದವರು. ೧೯೮೫ ರಲ್ಲಿ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರವನ್ನು ಸೇರಿ ಅನೇಕ ರೈತಪರ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದ್ದಾರೆ. ಸಾವಯವ ಕೃಷಿ, ಭೂ ಮತ್ತು ಜಲ ಸಂರಕ್ಷಣೆ, ಸ್ವಸಹಾಯ ಸಂಘಗಳು ಹೀಗೆ ವಿವಿಧ ಚಟುವಟಿಕೆಗಳಿಗೆ ಯಶಸ್ವಿಯಾಗಿ ಚಾಲನೆ ನೀಡಿದವರು. ರೈತರಿಂದ ನೇರವಾಗಿ ಗ್ರಾಹಕರಿಗೆ ಪದಾರ್ಥಗಳು ತಲುಪುವಂತಾಗಲು ರೈತ ಸಂತೆಗಳನ್ನು ಹುಲಕೋಟಿಯಲ್ಲಿ ಪ್ರತಿ ವಾರ ನಡೆಸುತ್ತಾ ಬಂದಿದ್ದಾರೆ.



**ಶ್ರೀಮತಿ ಅನಿತಾ ಪೈಲೂರು**
ನಾರಾಯಣಪುರ
ಧಾರವಾಡ
ದೂ: ೦೮೩೬ ೨೪೪೪೭೩೬
: anithapailoor@gmail.com

ಕೃಷಿ ಮಾಧ್ಯಮ ಕೇಂದ್ರದ ನಿರ್ದೇಶಕರು. ಗ್ರಾಮೀಣಾಭಿವೃದ್ಧಿಯ ಬಗ್ಗೆ ಕನ್ನಡ ಮತ್ತು ಇಂಗ್ಲೀಷ್ ಪತ್ರಿಕೆಗಳಿಗೆ ಲೇಖನಗಳನ್ನು ಸತತವಾಗಿ ಬರೆದು ಸಾರ್ವಜನಿಕ ಗಮನವನ್ನು ಅತ್ತ ಸೆಳೆದಿದ್ದಾರೆ. ಪ್ರತಿಷ್ಠಿತ ನ್ಯಾಶನಲ್ ಫೌಂಡೇಶನ್ ಫಾರ್ ಇಂಡಿಯಾದ ಫೇಲೋಶಿಪ್ ಪಡೆದು ಸಮುದಾಯ ಬೀಜ ಬ್ಯಾಂಕ್ ಗಳನ್ನು ಅಧ್ಯಯನ ಮಾಡಿದ್ದಾರೆ. ಅಭಿವೃದ್ಧಿ,ಕೃಷಿ, ನೀರು, ಪರಿಸರ ಹೀಗೆ ಹತ್ತು ಹಲವು ಸಾಮಾಜಿಕ ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಸದಾ ತೊಡಗಿಕೊಂಡಿರುವ ಅನಿತಾ ಅಪಾರ ಜನಪರ ಕಾಳಜಿಯುಳ್ಳವರು. ೨೦೦೧ ರಿಂದ ಧಾರವಾಡದ ಕೃಷಿ ಮಾಧ್ಯಮ ಕೇಂದ್ರದ ನಿರ್ದೇಶಕರಾಗಿದ್ದು ಕೊಂಡು ಹತ್ತು ಹಲವು ಚಟುಚಟಿಕೆಗಳಿಗೆ ಚಾಲನೆ ನೀಡಿದ್ದಾರೆ. ಕೇಂದ್ರದ ಮೂಲಕ ಗ್ರಾಮೀಣ ಪತ್ರಿಕೋದ್ಯಮದಲ್ಲಿ ದೂರ ಶಿಕ್ಷಣವನ್ನು ನೀಡುತ್ತಾ ವಿಶಿಷ್ಟವಾದ ಕೆಲಸವೊಂದನ್ನು ಮಾಡುತ್ತಾ ಬಂದಿದ್ದಾರೆ. ತಮ್ಮ ಕೇಂದ್ರದ ಮೂಲಕ ಹಲವಾರು ಪ್ರತಿಭಾವಂತ ಯುವಕ ಯುವತಿಯರು ಗ್ರಾಮೀಣ ಬದುಕು–ಸಮಸ್ಯೆ, ಕೃಷಿ. ಪರಿಸರ ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ಬರೆಯಲು ತಯಾರು ಮಾಡಿದ್ದಾರೆ.



**ಶ್ರೀಮತಿ ಸುನಂದಾ ಜಯರಾಂ**
ಕರ್ನಾಟಕ ರಾಜ್ಯ ರೈತ ಸಂಘ
ಮಂಡ್ಯ
ದೂ: ೯೯೮೦೮೨೩೩೧೮

ಕರ್ನಾಟಕದ ಮಂಡ್ಯ ಜಿಲ್ಲೆಯ ರೈತ ಹೋರಾಟದಲ್ಲಿ ನಿಷ್ಠೆಯಿಂದ ತೊಡಗಿಕೊಂಡಿರುವ ರೈತ ಮಹಿಳೆ ಹಾಗೂ ರೈತ ನಾಯಕಿ. ಕರ್ನಾಟಕ ರಾಜ್ಯ ರೈತ ಸಂಘದ ಮಹಿಳಾ ಘಟಕದ ನಾಯಕಿಯಾಗಿ ರೈತ ಸಂಘದ ಅನೇಕ ಹೋರಾಟಗಳಲ್ಲಿ ನೇರವಾಗಿ ತೊಡಗಿ ಹೋರಾಡಿದ ಅನುಭವ ಶ್ರೀಮತಿ ಸುನಂದಾ ಜಯರಾಂ ಅವರದು. ಜಿಲ್ಲಾ ಪಂಚಾಯತ್ ಸದಸ್ಯೆಯಾಗಿ ಒಬ್ಬ ಮಾದರಿ ಜನಪ್ರತಿನಿಧಿಯಾಗಿ ಕೆಲಸ ಮಾಡಿದವರು ಕೂಡ. ನ್ಯಾಶನಲ್ ಅಲಯನ್ಸ ಫಾರ್ ಪೀಪಲ್ಸ ಮೂಮೆಂಟ್ ನ ಕರ್ನಾಟಕ ವಲಯದ ಸಕ್ರೀಯ ಸದಸ್ಯೆ. ತಮಿಳುನಾಡು ಮತ್ತು ಕರ್ನಾಟಕ ಮಧ್ಯೆ ಕಾವೇರಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ರೈತ ಮಟ್ಟದಲ್ಲಿ ಒಂದು ಶಾಂತಿಯುತ ಮಾರ್ಗ ಕಂಡುಹಿಡಿಯಲು ನಡೆಯುತ್ತಿರುವ ಪ್ರಯತ್ನದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.



**ಶ್ರೀ ಪಿ. ಬಾಬು**
ಇಕ್ರ ಸಂಸ್ಥೆ, ಬೆಂಗಳೂರು
ದೂ:೦೮೦೨೫೨೧೩೧೦೪
: icra@bgl.vsnl.net.in

ಇಕ್ರಾ ಎಂಬ ಸ್ವಯಂಸೇವಾ ಸಂಸ್ಥೆಯೊಂದಿಗೆ ಗುರುತಿಸಿ ಕೊಂಡಿರುವ ಶ್ರೀ ಬಾಬು ಅವರು ಕರ್ನಾಟಕದಲ್ಲಿ ಸುಸ್ಥಿರ ಕೃಷಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಳೆದ ಎರಡು ದಶಕಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರ ಸಂಸ್ಥೆ ಇಕ್ರಾ ಸುಮಾರು ೫೦೦ ಜನ ಸಣ್ಣ ಹಾಗೂ ಅತಿ ಸಣ್ಣ ರೈತರೊಂದಿಗೆ ಕರ್ನಾಟಕದ ವಿವಿಧ ಕೃಷಿ ವಲಯಗಳಲ್ಲಿ ಕೆಲಸ ಮಾಡುತ್ತಿದೆ.

ಇಕ್ರಾ ಸಂಸ್ಥೆಯ ಮಾರ್ಗದರ್ಶನದಲ್ಲಿ ರೈತರ ಪ್ರಯೋಗ ಪರಿವಾರಗಳು ಸಾವಯವ ಕೃಷಿ ಪದ್ಧತಿಯಲ್ಲಿ ವಿವಿಧ ಬೆಳೆಗಳನ್ನು ಬೆಳೆದು ಗರಿಷ್ಠ ಇಳುವರಿ ಪಡೆಯಲು ಬೇಕಾದ ತಂತ್ರಗಳನ್ನು/ ಪದ್ಧತಿಗಳನ್ನು ರೂಪಿಸುತ್ತಿದ್ದಾರೆ. ಇಕ್ರಾ ಸಂಸ್ಥೆಯು ಸುಸ್ಥಿರ ಕೃಷಿಗೆ ಸಂಬಂಧಿಸಿದಂತೆ ಕಳೆದ ಇಪ್ಪತ್ತು ವರ್ಷಗಳಿಂದ ರಾಜ್ಯ ಮಟ್ಟದ ಹಲವು ತರಬೇತಿಗಳನ್ನು ನಡೆಸಿ ನೂರಾರು ರೈತರು ತಮ್ಮ ಕೃಷಿ ಪದ್ಧತಿಯಲ್ಲಿ ಬದಲಾವಣೆ ತಂದುಕೊಂಡು ಸುಸ್ಥಿರತೆಯತ್ತ ನಡೆಯಲು ಪ್ರೇರಣೆ ನೀಡಿದೆ. ಅಲ್ಲದೆ ಇಕ್ರಾ ಆಹಾರ ಭದ್ರತೆ, ಕೃಷಿ ಕಾರ್ಮಿಕರು ಮತ್ತು ಉದ್ಯೋಗ ಖಾತ್ರಿ ಯೋಜನೆ, ರೈತರ ಆತ್ಮಹತ್ಯೆ, ಮಿಶ್ರ ಬೆಳೆಗಳಿಗೆ ಸಂಬಂಧಿಸಿದಂತೆ ಕ್ರಿಯಾ ಸಂಶೋಧನೆಗಳಲ್ಲಿ ತೊಡಗಿಕೊಂಡಿದೆ. ಸಾವಯವ ಕೃಷಿ ವಿಚಾರಕ್ಕೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆಯಲ್ಲಿ ಇಕ್ರಾ ಕರ್ನಾಟಕದಲ್ಲಿ ಪ್ರಮುಖ ಸಂಸ್ಥೆ. ಜೊತೆಗೆ 'ಸಹಜ ಸಾಗುವಳಿ' ಎಂಬ ಕೃಷಿ ಮಾಸ ಪತ್ರಿಕೆಯನ್ನು ಸಹ ಇದು ಹೊರತರುತ್ತಿದೆ. ಹಾಗೆಯೇ ಓ.ಎಫ್.ಎ.ಐ, ಸೇಜ್ ನಂತಹ ರಾಷ್ಟ್ರೀಯ , ಅಂತರ ರಾಷ್ಟ್ರೀಯ ಚಳುವಳಿಗಳನ್ನು ಕರ್ನಾಟಕದಲ್ಲಿ ಸಂಯೋಜಿಸುತ್ತಿದೆ.



**ಡಾ|| ಚನ್ನೇಶ್ ಟಿ. ಎಸ್**

ಕೃಷಿ ವಿಜ್ಞಾನಿ, ಕೃಷಿ ವಿಜ್ಞಾನಕೇಂದ್ರ
ಚಿಂತಾಮಣಿ
ದೂ: ೯೪೪೮೨೬೮೫೪೮
: channeshts@gmail.com

ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಿಂದ ಪದವೀಧರರಾದ ಡಾ.ಚನ್ನೇಶ ಅವರು ಮಣ್ಣು ವಿಜ್ಞಾನದಲ್ಲಿ ಸಂಶೋಧನೆ ಮಾಡಿ ಪಿ.ಎಚ್.ಡಿ ಪಡೆದಿದ್ದಾರೆ. ಕರ್ನಾಟಕ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, ಕನ್ನಡ ವಿಶ್ವವಿದ್ಯಾಲಯ, ಕಾಲೇಜು ಉಪನ್ಯಾಸಕ ಹೀಗೆ ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡಿ ಅಪಾರ ಅನುಭವವುಳ್ಳವರು. ಸದ್ಯ ಚಿಂತಾಮಣಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸಹ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಮಣ್ಣು, ಜೀವ ವೈವಿಧ್ಯ, ಸಾವಯವ ಕೃಷಿಗೆ ಸಂಬಂಧಿಸಿದಂತೆ ಪುಸ್ತಕಗಳು ಹಾಗೂ ಲೇಖನಗಳನ್ನು ಬರೆದಿದ್ದಾರೆ. ಸಾಹಿತ್ಯಾಸಕ್ತರೂ ಆದ ಡಾ.ಚನ್ನೇಶ್ ಒಬ್ಬ ರೈತ ಪರ ವಿಜ್ಞಾನಿ.



ಶ್ರೀ ಕುರುಬೂರು ಶಾಂತಕುಮಾರ
ರೈತಹೋರಾಟಗಾರರು
ಚಾಮರಾಜನಗರ
ದೂ: ೯೪೪೮೦೬೦೬೪೦


ಚಾಮರಾಜ ನಗರ ಜಿಲ್ಲೆಯ ರೈತ ನಾಯಕ. ರಾಜ್ಯ ಕಬ್ಬು ಬೆಳೆಗಾರರ ಹಿತಕ್ಕಾಗಿ ಸತತವಾಗಿ ಹೋರಾಟದಲ್ಲಿ ತೊಡಗಿಕೊಂಡಿರುವವರು. ಅನೇಕ ರೈತ ಹೋರಾಟಗಳನ್ನು, ಧರಣಿಗಳನ್ನು ಯಶಸ್ವಿಯಾಗಿ ಸಂಘಟಿಸಿದವರು. ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಹಲವು ರೈತ ನಿಯೋಗಗಳನ್ನು ಪ್ರತಿನಿಧಿಸಿ ಸರ್ಕಾರದ ಗಮನವನ್ನು ಸೆಳೆದವರು. ಸದ್ಯ ಇವರು ರಾಜ್ಯ ಕಬ್ಬು ಬೆಳೆಗಾರರ ಸಂಘಟನೆಯ ರಾಜ್ಯ ಸಂಚಾಲಕರು. ಇದಲ್ಲದೆ 'ರೈತ ಧ್ವನಿ' ಎಂಬ ಕನ್ನಡ ವಾರ ಪತ್ರಿಕೆ ಯನ್ನು ಪ್ರಕಾಶಿಸುತ್ತಿದ್ದಾರೆ. 'ಸಿಹಿ ಬೆಳೆದವನ ಕಹಿ ಬಾಳು' ಎಂಬ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಹೇಳುವ ಕಿರು ಹೊತ್ತಿಗೆಯೊಂದನ್ನು ಇತ್ತೀಚಿಗೆ ಪ್ರಕಾಶಿಸಿದ್ದಾರೆ.



**ಶ್ರೀ ವಿಶ್ವನಾಥ ಪಾಟೀಲ**

ಕೌತಾಬಿ, ಬೀದರ
ದೂ: ೯೩೪೧೦೮೪೨೮೭

ಬೀದರ ಜಿಲ್ಲೆಯ ಒಣ ಭೂಮಿ ರೈತರಾದ ಪಾಟೀಲರು ಕರ್ನಾಟಕ ರಾಜ್ಯ ರೈತ ಸಂಘದ ಬೀದರ್ ಜಿಲ್ಲಾ ಘಟಕದ ಅಧ್ಯಕ್ಷರು. ಶಾಲಾ ಶಿಕ್ಷಕರಾಗಿ ತಮ್ಮ ವೃತ್ತಿ ಜೀವನವನ್ನ ಪ್ರಾರಂಭಿಸಿದ ಪಾಟೀಲರು ನಂತರ ಕೃಷಿ ಚಳುವಳಿಗೆ ಬಂದವರು. ಬೀದರ ಜಿಲ್ಲೆಯಲ್ಲಿ ರೈತ ಚಳುವಳಿಯನ್ನ ಕಟ್ಟುವ ಜವಾಬ್ದಾರಿಯನ್ನು ಹೊತ್ತಿರುವ ಪಾಟೀಲರು ಸದಾ ಚಟುವಟಿಕೆಯಲ್ಲಿರುವ ವ್ಯಕ್ತಿ.



**ಶ್ರೀ ಪಿ. ವಿ. ಸತೀಶ್**

ಪಸ್ತಾಪುರ
ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ
ಆಂಧ್ರಪ್ರದೇಶ
ದೂ: ೯೨೪೬೮೭೬೩೭೭
: satheeshperiyapatna@gmail.com

ಪಿ.ವಿ. ಸತೀಶ್‌ರವರು ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯ ನಿರ್ದೇಶಕರಾಗಿದ್ದುಕೊಂಡು ಕಳೆದ ೨೫ ವರ್ಷಗಳಿಂದ ಸುಮಾರು ೫೦೦೦ ದಲಿತ ಮಹಿಳೆಯರನ್ನು ಒಗ್ಗೂಡಿಸಿ ಆಹಾರ, ಬೀಜ ಸಾರ್ವಭೌಮತ್ವ, ಸಮುದಾಯ ನಿಯಂತ್ರಿತ ಮಾರುಕಟ್ಟೆ, ಮಾಧ್ಯಮ, ಸ್ವಾಯತ್ತವಾದ ಸ್ಥಳೀಯ ಆರೋಗ್ಯ ವ್ಯವಸ್ಥೆ ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಕೆಲಸ ಮಾಡಲು ಅವರಿಗೆ ಪ್ರೇರಣೆನೀಡುತ್ತಿದ್ದಾರೆ. ಸಮುದಾಯ ಮಾಧ್ಯಮ, ಕುಲಾಂತರಿ ತಳಿ ವಿರುದ್ಧ ಹೋರಾಟ, ಆಹಾರ ಸಾರ್ವಭೌಮತ್ವ, ಹೀಗೆ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟವರು. ಸತೀಶ್‌ರವರು ಕುಲಾಂತರಿ ತಳಿ ವಿರೋಧಿ ಹೋರಾಟ, ಆಂಧ್ರ ಪ್ರದೇಶದ ಆಹಾರ ಸಾರ್ವಭೌಮತ್ವ ಒಕ್ಕೂಟ, ದಕ್ಷಿಣ ಏಶಿಯಾದಲ್ಲಿ ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣ ಹೀಗೆ ಅಂತಾರಾಷ್ಟ್ರೀಯ ಒಕ್ಕೂಟಗಳ ಸಂಯೋಜಕರು. ಅಭಿವೃದ್ಧಿಗೆ ಸಂಬಂಧಿಸಿದ ಚಿತ್ರ ನಿರ್ಮಾಪಕರು ಆಗಿರುವ ಶ್ರೀ ಸತೀಶ್‌ರವರು ನೂರಾರು ಸಾಕ್ಷ ಚಿತ್ರಗಳು ಹಾಗೂ ಹತ್ತಾರು ಪುಸ್ತಕಗಳನ್ನು ರಚಿಸಿದ್ದಾರೆ.



**ಶ್ರೀ ಸಂತೋಷ ಕೌಲಗಿ**

ಮೇಲುಕೋಟೆ
ಮಂಡ್ಯ ಜಿಲ್ಲೆ
ದೂ : ೯೯೦೦೫೩೭೪೩೪
: koulagi.santosh@gmail.com

ಸಂತೋಷ ಕೌಲಗಿಯವರು ಕೃಷಿಕರೂ ಹೌದು, ಕೃಷಿ ಚಿಂತಕರೂ ಹೌದು. ತಂದೆ-ತಾಯಿಗಳು ಸರ್ವೋದಯ ಕಾರ್ಯಕರ್ತರಾದ್ದರಿಂದ ಬಾಲ್ಯದಲ್ಲಿಯೇ ಮಹಾತ್ಮ ಗಾಂಧಿಯವರ ಆದರ್ಶಗಳಿಗೆ ತೆರೆದುಕೊಂಡವರು. ಕಳೆದ ೨೫ ವರ್ಷಗಳಿಂದ ಸಾವಯವ ಕೃಷಿ ಮಾಡುತ್ತಿರುವ ಇವರು ಮಸನೋಬು ಫುಕುವೋಕಾ ಅವರ ಒನ್ ಸ್ಟ್ರಾ ರೆವಲ್ಯೂಶನ್ ಪುಸ್ತಕವನ್ನು ಕನ್ನಡಕ್ಕೆ ಪರಿಣಾಮಕಾರಿಯಾಗಿ ಅನುವಾದಿಸಿ ಅವರನ್ನು ಕನ್ನಡದ ಜನಕ್ಕೆ ಪರಿಚಯಿಸಿದವರು. ಈ ಪುಸ್ತಕದಿಂದಾಗಿ ಕರ್ನಾಟಕದ ಕೃಷಿ ವಲಯದಲ್ಲಿ ಸಂಚಲನವನ್ನು ಉಂಟುಮಾಡಿದವರು. ಸದ್ಯ ಮೇಲುಕೋಟೆಯ ಬಳಿ ಒಂದು ಸಣ್ಣ ಗ್ರಾಮದಲ್ಲಿ ನೆಲೆಸಿ ಕೃಷಿ ಮತ್ತು ಕೃಷಿ ಚಿಂತನೆಯ ಕೆಲಸ ಮಾಡುತ್ತಿದ್ದಾರೆ.



**ಶ್ರೀ ಪಾಂಡುರಂಗ ಹೆಗಡೆ**

ಸಿರ್ಸಿ
ಉತ್ತರ ಕನ್ನಡ.
ದೂ : ೯೪೪೮೮೧೮೦೯
: appiko@gmail.com

ಕರ್ನಾಟಕದ ಪರಿಸರ ಚಳುವಳಿ ಯಲ್ಲಿ ಕಳೆದ ಮೂವತ್ತು ವರ್ಷಗಳಿಂದ ಮಂಚೂಣಿಯಲ್ಲಿದ್ದಾರೆ ಶ್ರೀ ಪಾಂಡುರಂಗ ಹೆಗಡೆ. ಸಾಮಾಜಿಕ ಕಾರ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ದೆಹಲಿ ವಿಶ್ವವಿದ್ಯಾನಿಲಯದಿಂದ ಪಡೆದ ಶ್ರೀ ಹೆಗಡೆ ಚಿಪ್ಕೋ ಚಳುವಳಿಯ ನೇತಾರ ಶ್ರೀ ಸುಂದರಲಾಲ ಬಹುಗುಣ ಅವರಿಂದ ಪ್ರಭಾವಿತರಾಗಿ ಚಿಪ್ಕೋ ಚಳುವಳಿಗೆ ಧುಮುಕಿದರು. ಹಿಮಾಲಯದಲ್ಲಿ ಪಾದಯಾತ್ರೆಯ ಮೂಲಕ ಜನರಲ್ಲಿ ಪರಿಸರ ಜಾಗೃತಿಯುಂಟುಮಾಡುವ ಬಹುಗುಣರ ಕಾರ್ಯದಲ್ಲಿ ಪಾಲ್ಗೊಂಡವರು. ಅಲ್ಲಿಂದ ಹಿಂದಿರುಗಿದ ಮೇಲೆ ತಮ್ಮ ಸ್ವಂತ ಊರು ಸಿರ್ಸಿಯಲ್ಲೂ ಚಿಪ್ಕೋ ಚಳುವಳಿಯ ಮಾದರಿಯಲ್ಲಿ ಅಪ್ಪಿಕೋ ಚಳುವಳಿಯನ್ನು ಕಟ್ಟಿದವರು. ಇಡೀ ಪಶ್ಚಿಮ ಘಟ್ಟದಲ್ಲಿ ಪಾದಯಾತ್ರೆ ಕೈಗೊಂಡು ಪರಿಸರ ಸಂರಕ್ಷಣೆಯಲ್ಲಿ ಜನರನ್ನು ಜಾಗೃತಗೊಳಿಸುವ ಕೆಲಸವನ್ನು ಮಾಡಿದ್ದಾರೆ. ಪರಿಸರ ಚಳುವಳಿ ಹಾಗೂ ಪರಿಸರದ ಬಗ್ಗೆ ಸತತವಾಗಿ ಬರೆಯುತ್ತಾ ಬಂದಿರುವ ಇವರು ಅಶೋಕ ಫಲೋ ಆಗಿದ್ದವರು. ಸದ್ಯ ಸಿರ್ಸಿಯಲ್ಲಿ 'ಪ್ರಕೃತಿ' ಎಂಬ ಸ್ವಯಂ ಸೇವಾ ಸಂಸ್ಥೆಯನ್ನು ನಡೆಸುತ್ತಿದ್ದಾರೆ.



**ಶ್ರೀ ಗೋಪಿಕೃಷ್ಣ**

ಬೆಳಗಾವಿ
ದೂ: ೯೪೪೮೧೩೨೬೦೯
: gopi.krishna50@yahoo.com

ಮುಂಬೈನ ಪ್ರತಿಷ್ಠಿತ ಟಾಟಾ ಸಮಾಜ ವಿಜ್ಞಾನ ಸಂಸ್ಥೆಯಲ್ಲಿ ಸಮುದಾಯ ಅಭಿವೃದ್ಧಿಯಲ್ಲಿ ತರಬೇತಿ ಪಡೆದ ಗೋಪಿಕೃಷ್ಣ ಹಲವು ವರ್ಷಗಳ ಕಾಲ ರಾಯಚೂರಿನಲ್ಲಿ ಸ್ವಯಂ ಸೇವಾ ಸಂಸ್ಥೆ ಸ್ಥಾಪಿಸಿ ಕೆಲಸ ಮಾಡಿದವರು. ನಂತರ ಆಕ್ಸ್‌ಫಾಮ ಸಂಸ್ಥೆಯ ಉನ್ನತ ಹುದ್ದೆಯಲ್ಲಿ ಕೆಲಸ ನಿರ್ವಹಿಸಿದ ಅವರು ಹಲವು ಅಂತಾರಾಷ್ಟ್ರೀಯ ಸಂಸ್ಥೆಗಳಿಗೆ ಸಲಹೆಗಾರರಾಗಿ ಕಾರ್ಯಮಾಡಿದ್ದಾರೆ. ಪಾರಂಪರಿಕ ಕುಶಲಕರ್ಮಿಗಳು, ಚರ್ಮ ಕೆಲಸಗಾರರು ಮತ್ತು ಸ್ವಾಭಾವಿಕ ನಾರುಗಳಲ್ಲಿ ಕೆಲಸ ಮಾಡುವವರಲ್ಲಿ ಆಸಕ್ತಿ ತೋರಿದ ಗೋಪಿಕೃಷ್ಣ ಅವರು ಕುಶಲಕರ್ಮಿಗಳ ಉತ್ಪನ್ನಗಳ ಗುಣಮಟ್ಟ ಸುಧಾರಣೆ, ಮಾರುಕಟ್ಟೆ ಸಂಬಂಧಿಸಿದ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಕುಶಲಕರ್ಮಿಗಳ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ದೊರೆತು ಅವರ ಆರ್ಥಿಕ ಮಟ್ಟ ಸುಧಾರಣೆ ಮಾಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ.



**ಶ್ರೀ ಸುಬ್ಬಣ್ಣ ಬೀರಾದಾರ**

ಗುಲ್ಬರ್ಗ
ದೂ: ೯೯೭೨೧೫೭೪೧೩
: bsrdsglb@gmail.com

ಸಾಮಾಜಿಕ ಕಾರ್ಯದಲ್ಲಿ ತರಬೇತಿ ಪಡೆದಿರುವ ಇವರು ಹಲವು ವರ್ಷಗಳಿಂದ ಸ್ವಯಂಸೇವಾ ಕ್ಷೇತ್ರದಲ್ಲಿ ಕೆಲಸ ಮಾಡಿದ ಅನುಭವ ಪಡೆದಿದ್ದಾರೆ. ಬಿಜಾಪುರ ಜಿಲ್ಲೆಯ ಒಣ ಭೂಮಿ ರೈತರೊಂದಿಗೆ ಕೆಲಸ ಮಾಡಿ ಅನುಭವ ಹೊಂದಿದ್ದಾರೆ. ವಿಶಿಷ್ಟವಾದ ದೃಷ್ಟಿ ಕೋನದೊಂದಿಗೆ ಗ್ರಾಮೀಣ ಅಭಿವೃದ್ಧಿಯಲ್ಲಿ ತೊಡಗಿಸಿ ಕೊಂಡಿರುವ ಇವರು ಸದ್ಯ ಗುಲ್ಬರ್ಗದ ಬಯಲು ಸೀಮೆ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕರು.



**ಶ್ರೀ ಬಸವರಾಜು**

ಸಂತೆಶಿವರ
ಹಾಸನ ಜಿಲ್ಲೆ

ಸಾವಯವ ಕೃಷಿಯನ್ನು ಗಂಭೀರವಾಗಿ ಪರಿಗಣಿಸಿ ಹಾಸನ ಜಿಲ್ಲೆಯ ಸಂತೆಶಿವರದಲ್ಲಿ ಕೃಷಿ ಮಾಡುತ್ತಿರುವ ರೈತ ವಿಜ್ಞಾನಿ ಶ್ರೀ ಬಸವರಾಜು. ತಮ್ಮ ಮಿಶ್ರ ಬೆಳೆಯ ತೋಟದಲ್ಲಿ ಅನೇಕ ಪ್ರಯೋಗಗಳು ಹಾಗೂ ಕೃಷಿ ಪದ್ಧತಿಯನ್ನು ನಡೆಸುತ್ತಿರುವ ಇವರು ಬಾಳೆ, ತೆಂಗು ಬೆಳೆಗಾರರು. ಸತತವಾಗಿ ತನ್ನ ಕೃಷಿ ಅನುಭವವನ್ನ ಇತರರೊಂದಿಗೆ ಹಂಚಿಕೊಳ್ಳುವ ಬಸವರಾಜು ಅವರು ಕರ್ನಾಟಕ ರಾಜ್ಯ ಸಾವಯವ ಕೃಷಿ ಮಿಶನನ್ನಿನ ರಾಜ್ಯ ಸಮಿತಿಯ ಸದಸ್ಯರು.



**ಶ್ರೀ ವೈ. ಜೆ. ಮುರಳೀಧರ**

ಬೆಂಗಳೂರು
ದೂ: ೯೪೪೮೧೪೫೧೭೦
creatorg@sifi.com

ಗ್ರಾಹಕ ಚಳುವಳಿಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ಇವರು ಬೆಂಗಳೂರಿನ ಗ್ರಾಹಕ ಹಕ್ಕು ಶಿಕ್ಷಣ ಮತ್ತು ಜಾಗೃತಿ ಟ್ರಸ್ಟಿನ ಸಂಯೋಜಕರು. ಇವರ ಸಂಸ್ಥೆ ಗ್ರಾಹಕ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಕಾನೂನು ಹಾಗೂ ತಾಂತ್ರಿಕ ಸಲಹೆಗಳನ್ನು ನೀಡುತ್ತಾ ಬಂದಿದೆ. ಈ ಸಂಸ್ಥೆ ನಿಯಮಿತವಾಗಿ ಗ್ರಾಹಕ ಹಕ್ಕು ಹಾಗೂ ಮಾಹಿತಿ ಹಕ್ಕಿಗೆ ಸಂಬಂಧಿಸಿದಂತೆ ಚರ್ಚೆ, ವಿಚಾರ ಗೋಷ್ಠಿಗಳನ್ನು ನಡೆಸುತ್ತಾ ಬರುತ್ತಿದೆ.

• • • • • • • • • • • • •

# ಮೇಲ್ವಿಚಾರಣಾ ಸಮಿತಿ

ರೈತ ತೀರ್ಪಿನ ಇಡೀ ಪ್ರಕ್ರಿಯೆ ಪಕ್ಷಾತೀತವಾಗಿ, ಪೂರ್ವಗ್ರಹವಿಲ್ಲದೆ ನ್ಯಾಯಯುತವಾಗಿ ನಡೆಯುತ್ತಿರುವುದನ್ನು ಪರಿವೀಕ್ಷಿಸುವುದು ಈ ಸಮಿತಿಯ ಜವಾಬ್ದಾರಿಯಾಗಿತ್ತು. ಹಿರಿಯರು ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಗೌರವದ ಸ್ಥಾನ ಪಡೆದವರು ಮೇಲ್ವಿಚಾರಣಾ ಸಮಿತಿಯ ಸದಸ್ಯರಾಗಿದ್ದರು. ರೈತ ತೀರ್ಪಿಗೆ ಸಂಬಧಿಸಿದ ಪ್ರತಿಯೊಂದು ಬೆಳವಣಿಗೆಯನ್ನು ನಿರಂತರವಾಗಿ ಮೇಲ್ವಿಚಾರಣಾ ಸಮಿತಿಯ ಸದಸ್ಯರ ಗಮನಕ್ಕೆ ತರಲಾಗುತ್ತಿತ್ತು. ಸಮಿತಿಯ ಸದಸ್ಯರ ಸಲಹೆ ಮತ್ತು ಅಭಿಪ್ರಾಯಗಳನ್ನು ಸತತವಾಗಿ ಪಡೆಯಲಾಗುತ್ತಿತ್ತು.


**ಈ ಕೆಳಕಾಣಿಸಿದ ಹಿರಿಯರು ಸಮಿತಿಯ ಸದಸ್ಯರಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದರು.**



**ನ್ಯಾ|| ಎಂ. ಎನ್ ವೆಂಕಟಾಚಲಯ್ಯ :** ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತರಾದವರು. ತಮ್ಮ ವಿದ್ವತ್ತು, ಸ್ಪಷ್ಟ ಮಾತು ಹಾಗೂ ಜನಪರ ನಿಲುವಿಗಾಗಿ ಹೆಸರಾದವರು.



**ಡಾ|| ಎಚ್. ಸುದರ್ಶನ :** ಚಾಮರಾಜನಗರ ಜಿಲ್ಲೆ ಬಿಳಿಗಿರಿರಂಗನ ಬೆಟ್ಟದಲ್ಲಿ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರವನ್ನು ಸ್ಥಾಪಿಸಿ ಸೋಲಿಗರ ಏಳ್ಗೆಗಾಗಿ ಕಳೆದ ೩೦ ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿದ್ದಾರೆ. ಸೋಲಿಗ ರೊಂದಿಗೆ ಕೆಲಸ ಮಾಡುತ್ತಾ ಅವರ ವೈದ್ಯ ಪದ್ಧತಿ ಮತ್ತು ಅದರ ಮಹತ್ವವನ್ನು ಅರಿತು ಅದರ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದ್ದಾರೆ. ನಂತರ ಕರುಣಾ ಟ್ರಸ್ಟ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿ ಕರ್ನಾಟಕ ಸರ್ಕಾರದ ೨೫ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತಾವು ವಹಿಸಿಕೊಂಡು ಉತ್ತಮವಾಗಿ ನಡೆಸುತ್ತಾ ಬಂದಿದ್ದಾರೆ. ಇದಲ್ಲದೆ ಅರುಣಾಚಲ ಪ್ರದೇಶದಲ್ಲಿ ಕೂಡ ೯ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಡೆಸುತ್ತಿದೆ ಕರುಣಾ ಟ್ರಸ್ಟ್. ರೈಟ್ ಲೈವ್ಲಿಹುಡ್ ಪ್ರಶಸ್ತಿ ಪುರಸ್ಕೃತರಾದ ಡಾ.ಸುದರ್ಶನ ಅವರು ರಾಜ್ಯ ಲೋಕಾಯುಕ್ತದ ಸದಸ್ಯರಾಗಿ ಭ್ರಷ್ಟಾಚಾರ ನಿರ್ಮೂಲನೆಗಾಗಿ ಸತತವಾಗಿ ದುಡಿದಿದ್ದಾರೆ. ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮಿತಿಗಳ ಸದಸ್ಯರು ಹಾಗೂ ಪ್ರಶಸ್ತಿಪುರಸ್ಕೃತರು.



**ಡಾ|| ಗೋಪಾಲ ಕಾಡೆಕುಡಿ :** ಪ್ರಸಿದ್ಧ ಅಭಿವೃದ್ಧಿ ಅರ್ಥಶಾಸ್ತ್ರಜ್ಞರು. ದೆಹಲಿ ಇನ್ಸ್‌ಟಿಟ್ಯೂಟ್ ಆಫ್ ಇಕನಾಮಿಕ್ ಗ್ರೋತ್ ಸಂಸ್ಥೆಯ ಮುಖ್ಯಸ್ಥರಾಗಿದ್ದವರು. ನಂತರ ಬೆಂಗಳೂರಿನ ಪ್ರತಿಷ್ಠಿತ ಸಾಮಾಜಿಕ ಮತ್ತು ಆರ್ಥಿಕ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿದ್ದರು. ಅಭಿವೃದ್ಧಿ ಮತ್ತು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಇತ್ತೀಚಿಗೆ ಕರ್ನಾಟಕ ಅಭಿವೃದ್ಧಿ: ಸಾರ್ವಜನಿಕ ಸಂಪನ್ಮೂಲಗಳ ನಿರ್ವಹಣೆಯ ಬಗ್ಗೆ ಗ್ರಂಥವನ್ನು ರಚಿಸಿದ್ದಾರೆ.



**ಡಾ|| ದ್ವಾರಕೀನಾಥ :** ಕರ್ನಾಟಕ ಕೃಷಿ ಆಯೋಗದ ಅಧ್ಯಕ್ಷರಾಗಿದ್ದವರು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಮಾಜಿ ಕುಲ ಸಚಿವರು.

ಡಾ|| ದ್ವಾರಕೀನಾಥ ಅವರು ಪ್ರಸಿದ್ಧ ಕೃಷಿ ವಿಜ್ಞಾನಿಯಾಗಿದ್ದು ಅನೇಕ ಪ್ರತಿಷ್ಠಿತ ಪ್ರಶಸ್ತಿಗಳ ಪುರಸ್ಕೃತರು. ಕರ್ನಾಟಕ ರಾಜ್ಯ ಯೋಜನಾ ಆಯೋಗವಲ್ಲದೆ ಹಲವು ನೀತಿ ನಿರೂಪಕ ಸಮಿತಿಗಳ ಸದಸ್ಯರು.



**ಶ್ರೀ ಕೆ. ಆರ್. ವೇಣುಗೋಪಾಲ್ :** ಐ. ಎ. ಎಸ್. ಅಧಿಕಾರಿಯಾದ ಶ್ರೀ ವೇಣುಗೋಪಾಲ ಅವರು ಪ್ರಧಾನ ಮಂತ್ರಿಗಳ ಸಲಹೆಗಾರರಾಗಿದ್ದವರು. ಸಾರ್ವಜನಿಕ ಆಹಾರ ವಿತರಣೆಯ ಪಿತಾಮಹರೆಂದೇ ಪರಿಚಿತರಾಗಿರುವ ಇವರು ರಾಷ್ಟ್ರೀಯ ಮಾನವಹಕ್ಕು ಆಯೋಗದ ವರದಿಗಾರರಾಗಿದ್ದರು.



**ಡಾ॥ ಹನುಮಂತಯ್ಯ** : ದಲಿತ ಮತ್ತು ಬಂಡಾಯ ಚಳುವಳಿಗಳ ಮೂಲಕ ತಮ್ಮ ವ್ಯಕ್ತಿತ್ವವನ್ನ ರೂಪಿಸಿಕೊಂಡ ಹನುಮಂತಯ್ಯನವರು ಹೋರಾಟಗಾರರು ಹಾಗೂ ಕವಿಗಳು.

ಹಲವು ಪುಸ್ತಕಗಳನ್ನು ರಚಿಸಿರುವ ಇವರು ಶ್ರೀ ಜಗಜೀವನ ರಾಂ ಅವರ ಬಗ್ಗೆ ಒಂದು ಪುಸ್ತಕವನ್ನು ಸಂಪಾದಿಸಿದ್ದಾರೆ. ಕರ್ನಾಟಕ ವಿಧಾನ ಪರಿಷತ್‌ನ ಸದಸ್ಯರಾಗಿ ಸದನದಲ್ಲಿ ದಲಿತ ಸಮಸ್ಯೆಗಳನ್ನು ಬಹಳ ಪರಿಣಾಮಕಾರಿಯಾಗಿ ಮಂಡಿಸುತ್ತಾ ಬಂದಿದ್ದಾರೆ. ದಲಿತ ಮಹಿಳೆಯರ ಸಮಸ್ಯೆಗಳ ಬಗೆಗಿನ ಅವರ ಪರಿಣಾಮಕಾರಿ ವಿಚಾರ ಮಂಡನೆಯಿಂದಾಗಿ ಸರ್ಕಾರ ದಲಿತ ಮಹಿಳೆಯರ ಹಿತ ಸಂರಕ್ಷಣೆಗೆ ಸಂಬಂಧಿಸಿದಂತೆ ಕಾನೂನು ರಚನೆ ಮಾಡಿದೆ.



**ಶ್ರೀಮತಿ ಹೇಮಲತಾ ಮಹಿಷಿ** : ವೃತ್ತಿಯಿಂದ ವಕೀಲರಾದ ಶ್ರೀಮತಿ ಮಹಿಷಿ ಮಹಿಳಾ ಚಳುವಳಿಯೊಂದಿಗೆ ಗುರುತಿಸಿಕೊಂಡವರು. ಮಹಿಳೆಯರಿಗೆ ಕಾನೂನಿನ ತಿಳುವಳಿಕೆ ಕೊಡುವ ಕೆಲಸದಲ್ಲಿ ತೊಡಗಿಕೊಂಡವರು. ವರದಕ್ಷಿಣೆ, ಮಹಿಳೆಯರ ಮೇಲಿನ ದೌರ್ಜನ್ಯ, ಮಹಿಳೆಯರ ಆಸ್ತಿ ಹಕ್ಕು ಇವುಗಳಿಗೆ ಸಂಬಂಧಿಸಿದ ಕಾನೂನು ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರು. ಮಹಿಳೆ ಮತ್ತು ಕಾನೂನಿಗೆ ಸಂಬಂಧಿದಂತೆ ಹಲವು ಪುಸ್ತಕಗಳನ್ನು ರಚಿಸಿದ್ದಾರೆ. ಪ್ರಸಿದ್ಧ ಅಂಕಣಕಾರರೂ ಸಹ ಆಗಿದ್ದಾರೆ. ಮಹಿಳಾ ಆಯೋಗದ ಹಾಗೂ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆ ಸಂಸ್ಥೆಯ ಸದಸ್ಯರಾಗಿದ್ದವರು.



**ಶ್ರೀಮತಿ ಬಿ. ಟಿ. ಲಲಿತಾ ನಾಯಕ** : ಬಂಡಾಯ ಸಾಹಿತ್ಯ ಚಳುವಳಿಯಿಂದ ಮೂಡಿಬಂದ ಶ್ರೀಮತಿ ಲಲಿತಾ ನಾಯಕ ಕಾದಂಬರಿಕಾರರು, ಕವಿ, ಕತೆಗಾರ್ತಿ. ಅವರ ಬರಹಗಳು ಅಲೆಮಾರಿ ಬಂಜಾರ ಸಮುದಾಯದ ನೋವು ನಲಿವುಗಳನ್ನು ಚಿತ್ರಿಸುತ್ತವೆ. ದಲಿತ ಹಾಗೂ ಇತರ ಚಳುವಳಿಗಳೊಂದಿಗೆ ಗುರುತಿಸಿಕೊಂಡಿರುವ ಅವರು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಾಗಿ ಕೆಲವು ಕಾಲ ರಾಜ್ಯ ಸಚಿವ ಸಂಪುಟದಲ್ಲಿದ್ದವರು. ಜಾನಪದ ಕಲಾವಿದರೂ ಸಹ.

• • • • • • • • • • • • • • • • • • • • • • • • • • •

## ಸಂಪನ್ಮೂಲ ವ್ಯಕ್ತಿ ಹಾಗೂ ಸಲಹೆಗಾರರು



**ಡಾ॥ ಮಿಶೆಲ್ ಪಿಂಬರ್ಟ್** ಅವರು ಇಂಗ್ಲೆಂಡ್ ದೇಶದ ಅಂತಾರಾಷ್ಟ್ರೀಯ ಪರಿಸರ ಮತ್ತು ಅಭಿವೃದ್ಧಿ ಸಂಸ್ಥೆಯ ಸುಸ್ಥಿರ ಕೃಷಿ, ಜೀವ ವೈವಿಧ್ಯ ಹಾಗೂ ಜೀವನೋಪಾಯ ಕಾರ್ಯಕ್ರಮ ವಿಭಾಗದ ಮುಖ್ಯಸ್ಥರು. ಈ ಹಿಂದೆ ಭಾರತದಲ್ಲಿರುವ ಅಂತಾರಾಷ್ಟ್ರೀಯ ಒಣ ಭೂಮಿ ಬೆಳೆ ಸಂಶೋಧನಾ ಕೇಂದ್ರ, ಫ್ರಾನ್ಸ್ ವಿಶ್ವವಿದ್ಯಾಲಯ ಮತ್ತು ಸ್ವಿಜರ್ಲೆಂಡ್‌ನ ವರ್ಲ್ಡ್ ವೈಲ್ಡ ನೇಚರ್ ಫಂಡ್‌ನಲ್ಲಿ ಕೆಲಸ ಮಾಡಿದವರು. ಅವರ ಸಂಶೋಧನೆಗಳು ಆಹಾರ ಸಾರ್ವಭೌಮತ್ವ, ಸುಸ್ಥಿರ ಕೃಷಿ ಮತ್ತು ನಾಗರಿಕತ್ವ ಮುಂತಾದವನ್ನು ಒಳಗೊಂಡಿದೆ. ಡಾ. ಪಿಂಬರ್ಟ ರವರು ಆಹಾರ ಸಾರ್ವಭೌಮತ್ವ, ಸುಸ್ಥಿರ ಕೃಷಿ ಮತ್ತು ಮಾನವ ಹಕ್ಕಿಗಾಗಿ ಕೆಲಸ ಮಾಡುತ್ತಿರುವ ಅನೇಕ ಅಂತಾರಾಷ್ಟ್ರೀಯ ಸರ್ಕಾರೇತರ ಸಂಸ್ಥೆಗಳ ಆಡಳಿತ ಮಂಡಲಿಯ ಸದಸ್ಯರು.

# ರೈತ ನ್ಯಾಯ ಮಂಡಲಿ

ರೈತ ನ್ಯಾಯಮಂಡಳಿಗೆ ಸದಸ್ಯರ ನಾಮಕರಣಕ್ಕೆ ವ್ಯಾಪಕ ಪ್ರಚಾರ ನೀಡಲಾಗಿತ್ತು. ಬಂದ ಅರ್ಜಿಗಳಲ್ಲಿ ನೂರು ಅರ್ಜಿಗಳನ್ನು ಕಾರ್ಯಕಾರಿ ಸಮಿತಿ ಆಯ್ಕೆ ಮಾಡಿ ಅಂತಿಮವಾಗಿ ಮೂವತ್ತು ಜನರ ನ್ಯಾಯ ಮಂಡಳಿಯನ್ನು ಆಯ್ಕೆ ಮಾಡಿತು. ಆಯ್ಕೆಗೆ ಸಂಬಂಧಿಸಿದಂತೆ ಕಾರ್ಯಕಾರಿ ಮಂಡಳಿಯು ಹಲವು ಮಾನದಂಡಗಳನ್ನು ರೂಪಿಸಿ ಕೊಂಡಿತ್ತು.

ಆಯ್ದ ನೂರು ಜನರ ಪಟ್ಟಿಯನ್ನು ಸಾಮಾಜಿಕ ಕಾರ್ಯದಲ್ಲಿ ಶಿಕ್ಷಣ ನೀಡುವ ಮಂಗಳೂರಿನ ರೋಷನಿ ನಿಲಯ ಶಿಕ್ಷಣ ಸಂಸ್ಥೆಗೆ ಕೊಡಲಾಯಿತು. ಆ ಸಂಸ್ಥೆಯವರು ಈ ನೂರು ಜನರನ್ನು ಸಂದರ್ಶಿಸಿ ಕಾರ್ಯಕಾರಿ ಮಂಡಳಿಯ ಮಾನದಂಡಗಳಿಗೆ ಸರಿ ಹೊಂದುವ ಮೂವತ್ತು ಜನರ ಪಟ್ಟಿಯನ್ನು ಸಿದ್ಧಪಡಿಸಿ ಕೊಟ್ಟರು. ಈ ಪಟ್ಟಿಯನ್ನು ಕಾರ್ಯಕಾರಿ ಸಮಿತಿ ಮತ್ತು ಮೇಲ್ವೀಕ್ಷಣಾ ಸಮಿತಿ ಸಮರ್ಥಿಸಿತು.

ರಾಜ್ಯದ ಎಲ್ಲ ಪ್ರಾಂತ್ಯ ಮತ್ತು ವರ್ಗಗಳನ್ನು ಪ್ರತಿನಿಧಿಸಿದ ಕೆಳ ಕಾಣಿಸಿದ ನ್ಯಾಯ ಮಂಡಲಿ ತನ್ನ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿತು.

# ನ್ಯಾಯ ಮಂಡಲಿಯ ಸದಸ್ಯರು



**ಶ್ರೀಮತಿ ಸಾಮವ್ವ ಸಾಯಬನ**
ಇಂಚಕಲ ಗ್ರಾಮ, ಬಿಜಾಪುರ ಜಿಲ್ಲೆ
೫೦ ವರ್ಷ
ಜಾತಿ : ಪರಿಶಿಷ್ಟ ಜಾತಿ

ಇವರು ಆರು ಎಕರೆ ಒಣ ಕೃಷಿ ಭೂಮಿಯನ್ನು ಹೊಂದಿದ್ದಾರೆ. ಮುಸುಕಿನಜೋಳ, ಸೂರ್ಯಕಾಂತಿ, ತೊಗರಿ, ಹೆಸರು, ಜೋಳ ಬೆಳೆಯುತ್ತಾರೆ. ಮಿಶ್ರ ಬೆಳೆ ಪದ್ಧತಿಯನ್ನು ಅನುಸರಿಸುತ್ತಾರೆ.



**ಶ್ರೀ ಮಾರುತಿ ಕಾಂಬ್ಳೆ**
ಬಜೆಪಲ್ಲಿ ಗ್ರಾಮ, ಬೀದರ ಜಿಲ್ಲೆ.
ವಯಸ್ಸು : ೬೦ ವರ್ಷ
ಜಾತಿ :ಪರಿಶಿಷ್ಟ ಜಾತಿ

ಎರಡು ಎಕರೆ ಭೂಮಿಯಲ್ಲಿ ಮಳೆಯಾಶ್ರಿತ ಬೇಸಾಯ. ಮುಸುಕಿನಜೋಳ, ಹೆಸರು, ತೊಗರಿ ಬೇಳೆಯುತ್ತಾರೆ.



**ಶ್ರೀಮತಿ ಶೋಭಾವತಿ, ತುಗಾವೆ**
ಔರಾದ ಗ್ರಾಮ ಬೀದರ ಜಿಲ್ಲೆ
ವಯಸ್ಸು : ೩೬ ವರ್ಷ
ಜಾತಿ : ಸಾಮಾನ್ಯ ವರ್ಗ

ಎರಡು ಎಕರೆ ಭೂಮಿ ಹೊಂದಿದ್ದಾರೆ. ಪಾರಂಪರಿಕ ಪದ್ಧತಿಯಲ್ಲಿ ನವಣೆ, ಭತ್ತ, ತೊಗರಿ, ಮುಸಕಿನಜೋಳ, ರಾಗಿ ಮತ್ತು ಹೆಸರು ಬೆಳೆಯುತ್ತಾರೆ.



**ಶ್ರೀಮತಿ ಲಕ್ಷ್ಮೀಬಾಯಿ ಕಾಂಬ್ಳೆ**
ನೆಲ್ಲೂರು, ಗುಲ್ಬರ್ಗಾ ಜಿಲ್ಲೆ
ವಯಸ್ಸು : ೩೮ ವರ್ಷ
ಜಾತಿ : ಪರಿಶಿಷ್ಟ ವರ್ಗ

ಎರಡು ಎಕರೆ ಮಳೆಯಾಶ್ರಿತ ಕೃಷಿ ಭೂಮಿಯಲ್ಲಿ ತೊಗರಿ, ಸೂರ್ಯಕಾಂತಿ ಬೆಳೆಯುತ್ತಾರೆ. ಸಾವಯವ ಕೃಷಿಯಲ್ಲಿ ಆಸಕ್ತಿ ಹೊಂದಿದ್ದಾರೆ.



**ಶ್ರೀಮತಿ ಅಜ್ಜಮ್ಮ ಇಲ್ಲೆಪ್ಪನವರ**
ಎಲ್ಲೇರಿ ಗ್ರಾಮ, ಗುಲ್ಬರ್ಗಾ ಜಿಲ್ಲೆ
ವಯಸ್ಸು : ೬೩ ವರ್ಷ
ಜಾತಿ : ಪರಿಶಿಷ್ಟ ಜಾತಿ

ಒಂಭತ್ತು ಎಕರೆ ಭೂಮಿ ಹೊಂದಿದ್ದು ಪೂರ್ತಿ ಮಳೆಯಾಧಾರಿತ ಕೃಷಿ. ತೊಗರಿ,ಸೂರ್ಯಕಾಂತಿ, ಮೆಕ್ಕೆ ಜೋಳ, ಭತ್ತ ಮತ್ತು ಶೇಂಗಾ ಬೆಳೆಗಳನ್ನು ಸಾವಯವ ಕೃಷಿಯಲ್ಲಿ ಮಾಡುತ್ತಾರೆ. ಎರೆಹುಳು ಗೊಬ್ಬರ ತಯಾರಿಸಿ ಬಳಸುತ್ತಾರೆ.



**ಶ್ರೀ ರುದ್ರಪ್ಪ ಝುಲ್ಪಿ**
ಹುಲಿಯಾಳ ಬಾಗಲಕೋಟೆ ಜಿಲ್ಲೆ
ವಯಸ್ಸು : ೩೯ ವರ್ಷ
ಜಾತಿ :ಸಾಮಾನ್ಯ ವರ್ಗ

ಐದು ಎಕರೆ ಒಣ ಭೂಮಿ, ಹತ್ತು ಎಕರೆ ನೀರಾವರಿ ಭೂಮಿ ಹೊಂದಿದ್ದಾರೆ. ಕಬ್ಬು, ಅರಿಶಿನ, ಗೋಧಿ, ತರಕಾರಿ, ವಿವಿಧ ತಳಿಗಳ ಮುಸುಕಿನಜೋಳ ಬೆಳೆಯುತ್ತಾರೆ. ಸಹಜ ಕೃಷಿ ಪದ್ಧತಿಯಲ್ಲಿ ವ್ಯವಸಾಯ ಮಾಡುತ್ತಾರೆ. ಚೀನಾ ದೇಶಕ್ಕೆ ಕೃಷಿ ಪ್ರವಾಸ ಹೋಗಿ ಬಂದಿದ್ದಾರೆ. ದೇಸಿ ಬದನೆ ಮತ್ತು ಗೋಧಿಯ ತಳಿಗಳನ್ನು ಸಂರಕ್ಷಿಸಿದ್ದಾರೆ. ಅನೇಕ ಪ್ರಶಸ್ತಿಗಳಿಗೆ ಪಾತ್ರರಾಗಿರುವ ಇವರು ಸಹಜ ಕೃಷಿಯ ಬಗೆಗೆ ಅನೇಕ ಉಪನ್ಯಾಸಗಳನ್ನು ನೀಡುತ್ತಿರುತ್ತಾರೆ.



**ಶ್ರೀ ಸದಾಶಿವಯ್ಯ**
ಮಾರಗೌಡನ ಹಳ್ಳಿ ತುಮಕೂರು ಜಿಲ್ಲೆ
ವಯಸ್ಸು : ೭೪ ವರ್ಷ
ಜಾತಿ : ಸಾಮಾನ್ಯ ವರ್ಗ

ಸಾವಯವ ಕೃಷಿ ಪದ್ಧತಿಯಲ್ಲಿ ತೆಂಗು, ಅಡಕೆ, ಆಹಾರ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಸಾವಯವ ಕೃಷಿಯ ಪ್ರತಿಪಾದಕರು ಹಾಗೂ ವಾಗ್ಮಿಗಳು



**ಶ್ರೀ ಈರಯ್ಯ ಕಿಲ್ಲೇದಾರ**
ಗೋವಿನಕೊಪ್ಪ
ಬೆಳಗಾವಿ ಜಿಲ್ಲೆ
ವಯಸ್ಸು : ೫೧ ವರ್ಷ
ಜಾತಿ : ಸಾಮಾನ್ಯ ವರ್ಗ

ತಮ್ಮ ೧.೫ ಎಕರೆ ಕೃಷಿ ಭೂಮಿಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ. ಕವನಗಳನ್ನು, ಕೃಷಿ ಸಂಬಂಧಿ ಲೇಖನಗಳನ್ನೂ ಬರೆಯುತ್ತಾರೆ. ೬೦೦ ಮಿಕ್ಕಿ ವಿವಿಧ ಸಸ್ಯಗಳನ್ನು ಬೆಳೆಸಿದ್ದಾರೆ. ಕೃಷಿಯ ಬಗ್ಗೆ ಅಪಾರ ಜ್ಞಾನ ಹೊಂದಿದ್ದಾರೆ.



**ಶ್ರೀ ಮಾರುತಿ ನಿಂಗಪ್ಪ ಹೊಸಮನಿ**
ಕಾಮನೂರು, ಕೊಪ್ಪಳ ಜಿಲ್ಲೆ
ವಯಸ್ಸು : ೨೫ ವರ್ಷ
ಜಾತಿ : ಪರಿಶಿಷ್ಟ ವರ್ಗ

ಮೂರು ಎಕರೆ ಒಣ ಭೂಮಿ ಹಾಗೂ ಮೂರು ಎಕರೆ ನೀರಾವರಿ ಭೂಮಿ ಹೊಂದಿದ್ದಾರೆ. ಮುಸುಕಿನಜೋಳ, ಜೋಳ, ನವಣೆ, ತರಕಾರಿ ಬೆಳೆಯುತ್ತಾರೆ.




**ಶ್ರೀಮತಿ ಜಯತಾನುಬಿ ನಡಪ**
ಹುಲಕೋಟಿ ಗದಗ ಜಿಲ್ಲೆ
ವಯಸ್ಸು : ೩೮ ವರ್ಷ
ಜಾತಿ : ಪರಿಶಿಷ್ಟ ವರ್ಗ

ಕೃಷಿ ಕಾರ್ಮಿಕರು. ಒಂದಿಷ್ಟು ಆಡುಗಳನ್ನು ಸಾಕಿದ್ದಾರೆ.



**ಶ್ರೀಮತಿ ಶಿವಗಂಗಮ್ಮ ಹೊಸಮನಿ**
ಹರೇಕೊಪ್ಪ ಗದಗ ಜಿಲ್ಲೆ
ವಯಸ್ಸು : ೫೨ ವರ್ಷ
ಜಾತಿ : ಹಿಂದುಳಿದ ವರ್ಗ

ಆರು ಎಕರೆ ಮಳೆಯಾಶ್ರಿತ ಕೃಷಿ ಭೂಮಿ. ಈರುಳ್ಳಿ, ತೊಗರಿ, ಹೆಸರು, ಮುಸುಕಿನಜೋಳ ಮತ್ತು ಹತ್ತಿ ಇವರು ಬೆಳೆಯುವ ಬೆಳೆಗಳು. ಇವರದೊಂದು ಮಾದರಿ ಹೊಲ. ಇತ್ತೀಚಿನ ಪ್ರವಾಹದಲ್ಲಿ ಇವರ ಕೃಷಿಗೆ ಹಾನಿಯಾಗಿದೆ.



**ಶ್ರೀ ಶಾಂತಿಮೂಲೆ ಎಂ.ಟಿ**
ಪೈಲಾರು, ದಕ್ಷಿಣ ಕನ್ನಡ
ವಯಸ್ಸು : ೬೬ ವರ್ಷ
ಜಾತಿ : ಸಾಮಾನ್ಯ ವರ್ಗ

ಸಣ್ಣ ಹಿಡುವಳಿಯ ಸಾವಯವ ಕೃಷಿಕ. ಸಂಶೋಧಕ ಗುಣದ ಶಾಂತಿಮೂಲೆ ಸತತ ಪ್ರಯೋಗ ನಿರತ. ತಮ್ಮ ತೋಟದ ಉತ್ಪನ್ನಗಳಿಗೆ ಮೌಲ್ಯ ವರ್ಧನೆ ಮಾಡುವಲ್ಲಿ ಪರಿಣಿತರು. ಜೇನು ಸಾಕಣೆಯಲ್ಲಿ ಪ್ರವೀಣರು. ಮಧು ಪ್ರಪಂಚ ಪತ್ರಿಕೆಯ ಸಂಪಾದಕರು .



**ಶ್ರೀ ಹೊಯ್ಸಳ ಅಪ್ಪಾಜಿ**
ಉಣ್ಣೇನಹಳ್ಳಿ, ಹಾಸನ ಜಿಲ್ಲೆ.
ವಯಸ್ಸು : ೩೫ ವರ್ಷ
ಜಾತಿ : ಸಾಮಾನ್ಯ ವರ್ಗ

ಎಂಟು ಎಕರೆ ನೀರಾವರಿ ಭೂಮಿಯಿದೆ. ಉತ್ತಮ ರೈತ. ಸ್ಥಳೀಯ ಭತ್ತ ತಳಿ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.



**ಶ್ರೀಮತಿ ಲಲಿತಾ ಭಟ್**
ಮಾವಿನಸರ ಶಿವಮೊಗ್ಗ ಜಿಲ್ಲೆ
ವಯಸ್ಸು : ೪೮ ವರ್ಷ
ಜಾತಿ : ಸಾಮಾನ್ಯ ವರ್ಗ

ಒಂದೂವರೆ ಎಕರೆ ಮಳೆಯಾಶ್ರಿತ ಭೂಮಿಯನ್ನು ಹೊಂದಿದ್ದಾರೆ. ಅಡಿಕೆ, ಮೆಣಸು, ಅರಶಿನ, ವೀಳ್ಯದೆಲೆ, ತರಕಾರಿ ಬೆಳೆಯುತ್ತಾರೆ. ಸಾವಯವ ಹಾಗೂ ಸಹಜ ಕೃಷಿ ತತ್ವಗಳನ್ನು ಅಳವಡಿಸಿಕೊಂಡಿದ್ದಾರೆ.



**ಶ್ರೀ ಗುರುಲಿಂಗಯ್ಯ**
ಅಜ್ಜಂಪುರ ದಾವಣಗೆರೆ
ವಯಸ್ಸು : ೩೦ ವರ್ಷ
ಜಾತಿ : ಪರಿಶಿಷ್ಟ ಜಾತಿ

ಸಣ್ಣ ಒಣಭೂಮಿ ರೈತ. ರೈತರ ಸಮಸ್ಯೆಗಳ ಬಗ್ಗೆ ತಿಳುವಳಿಕೆ ಇದೆ. ಆ ಬಗ್ಗೆ ಚೆನ್ನಾಗಿ ಮಾತನಾಡಬಲ್ಲರು.



**ಶ್ರೀ ಚಿತ್ತಪ್ಪ,**
ಗುಡ್ಡಗೊಲ್ಲರಹಳ್ಳಿ
ಚಿತ್ರದುರ್ಗ ಜಿಲ್ಲೆ
ವಯಸ್ಸು : ೫೩ ವರ್ಷ
ಜಾತಿ : ಪರಿಶಿಷ್ಟ ಜಾತಿ

ಏಳು ಎಕರೆ ಕೃಷಿ ಭೂಮಿಹೊಂದಿದ್ದಾರೆ. ಸುಮಾರು ನಾಲ್ಕು ಎಕರೆಗೆ ನೀರಾವರಿ ಇದೆ. ರಾಗಿ, ಭತ್ತ, ತರಕಾರಿ ಮುಖ್ಯ ಬೆಳೆಗಳು. ಒಣ ಭೂಮಿಯಲ್ಲಿ ಶೇಂಗಾ, ಸೂರ್ಯಕಾಂತಿ ಬೆಳೆಯುತ್ತಾರೆ. ನಿರಕ್ಷರಸ್ಥರಾದರೂ ಅನೇಕ ಕೃಷಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾಹಿತಿ ಸಂಗ್ರಹಿಸಿದ್ದಾರೆ. ರಾಸಾಯನಿಕ ಕೃಷಿಯಿಂದ ಸಾವಯವ ಕೃಷಿಗೆ ಬದಲಾಗಿದ್ದಾರೆ.



**ಶ್ರೀ ಚಿಕ್ಕಬೋರೇಗೌಡ**
ಸಾತನೂರು ಮಂಡ್ಯ ಜಿಲ್ಲೆ.
ವಯಸ್ಸು : ೫೧ ವರ್ಷ
ಜಾತಿ : ಹಿಂದುಳಿದ ವರ್ಗ

ಮೂರೂವರೆ ಎಕರೆ ಭೂಮಿಯಲ್ಲಿ ಕಬ್ಬು, ಬತ್ತ, ರಾಗಿ, ತೆಂಗು ಬೆಳೆಯುತ್ತಾರೆ. ಸಹಜ ಹಾಗೂ ಸಾವಯವ ಕೃಷಿ ತತ್ವಗಳನ್ನು ಅಳವಡಿಸಿಕೊಂಡಿದ್ದಾರೆ.



**ಶ್ರೀಮತಿ ಲಲಿತವ್ವ, ಕಲ್ಲಾಪುರ**
ಹಾವೇರಿ ಜಿಲ್ಲೆ
ವಯಸ್ಸು : ೬೧ ವರ್ಷ

ಮೂರು ಎಕರೆ ಕೃಷಿ ಭೂಮಿಯನ್ನು ಹೊಂದಿದ್ದಾರೆ. ಹತ್ತಿ, ಜೋಳ, ರಾಗಿ, ಹುರಳಿ ಬೆಳೆಯುತ್ತಾರೆ.



**ಶ್ರೀ ಹೊಂಬಯ್ಯ**
ಸೋಮನಹಳ್ಳಿ,
ಮೈಸೂರು ಜಿಲ್ಲೆ.
ವಯಸ್ಸು : ೪೫ ವರ್ಷ
ಜಾತಿ : ಪರಿಶಿಷ್ಟ ಜಾತಿ

ನಾಲ್ಕು ಎಕರೆ ಒಣ ಕೃಷಿ ಭೂಮಿ ಹೊಂದಿದ್ದಾರೆ. ಸಾವಯವ ಕೃಷಿ ತತ್ವಗಳನ್ನಾಧರಿಸಿ ರಾಗಿ, ಮೆಣಸಿನಕಾಯಿ, ತರಕಾರಿ ಬೆಳೆಯುತ್ತಾರೆ. ಅವಿಭಕ್ತ ಕುಟುಂಬ. ಒಂದಿಷ್ಟು ಕೋಳಿಗಳನ್ನು ಸಾಕಿದ್ದಾರೆ.



**ಶ್ರೀ ಅಜ್ಜಪ್ಪ ತಳ್ವಾರ**
ರಾಮನಾಯಕನಹಳ್ಳಿ, ಬಳ್ಳಾರಿ ಜಿಲ್ಲೆ.
ವಯಸ್ಸು : ೨೫ ವರ್ಷ
ಜಾತಿ : ಪರಿಶಿಷ್ಟ ವರ್ಗ

ಎರಡೂವರೆ ಎಕರೆ ಕೃಷಿ ಭೂಮಿಯಲ್ಲಿ ಒಂದೂವರೆ ಎಕರೆಗೆ ನೀರಾವರಿ ವ್ಯವಸ್ಥೆಯಿದೆ. ವಿವಿಧ ಬಗೆಯ ಮುಸುಕಿನಜೋಳ, ತೋಗರಿ ಬೆಳೆಯುತ್ತಾರೆ. ಪ್ರವಾಹ / ಬರಗಾಲದಿಂದ ಸದಾ ತೊಂದರೆಗೆ ಒಳಗಾಗುತ್ತಿದ್ದಾರೆ.



**ಶ್ರೀ ಸಿದ್ಧರಾಜಪ್ಪ**
ಕಗ್ಗಲೂರು ಮೈಸೂರು ಜಿಲ್ಲೆ
ವಯಸ್ಸು : ೪೬ ವರ್ಷ
ಜಾತಿ : ಸಾಮಾನ್ಯ ವರ್ಗ

ಮೂರು ಎಕರೆ ಮಳೆಯಾಶ್ರಿತ ಒಣ ಭೂಮಿಯಲ್ಲಿ ಹುರಳಿ, ಭತ್ತ, ತೆಂಗು, ಮಾವು, ತರಕಾರಿ ಬೆಳೆಯುತ್ತಾರೆ. ರೈತ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.



**ಶ್ರೀಮತಿ ಹೇಮವ್ವ ಲಮಾಣಿ**
ಕಾಕೋಳ ತಾಂಡ ಹಾವೇರಿ ಜಿಲ್ಲೆ
ವಯಸ್ಸು : ೫೬ ವರ್ಷ
ಜಾತಿ : ಪರಿಶಿಷ್ಟ ವರ್ಗ

ಎರಡೂವರೆ ಎಕರೆಯಲ್ಲಿ ಮುಸುಕಿನ ಜೋಳ, ಬೇಳೆ ಕಾಳುಗಳು, ಹತ್ತಿ ಬೆಳೆಯುತ್ತಾರೆ ಇತ್ತೀಚಿನ ಪ್ರವಾಹದಿಂದಾಗಿ ತೊಂದರೆಗೆ ಒಳಗಾಗಿದ್ದಾರೆ. ತಾಂಡದ ಪ್ರಗತಿಪರ ಮಹಿಳೆ.



**ಶ್ರೀಮತಿ ಕಲ್ಲವ್ವ ಹಕಲದ**
ಕಂಪ್ಲಿಕೊಪ್ಪ ಧಾರವಾಡ
ವಯಸ್ಸು : ೫೫ ವರ್ಷ
ಜಾತಿ : ಹಿಂದುಳಿದ ವರ್ಗ

ಮಳೆ ನೀರು ಹಾಗೂ ತೆರೆದ ಬಾವಿಯ ನೀರು ಬಳಸಿ ಬೆಳೆ ಬೆಳೆಯುತ್ತಾರೆ. ಜೋಳ ಅಲಸಂದೆ, ಉದ್ದು, ತರಕಾರಿ ಹಾಗೂ ಕೆಲವು ಹಣ್ಣಿನ ಮರಗಳನ್ನು ಬೆಳೆಸಿದ್ದಾರೆ.



**ಶ್ರೀಮತಿ ಶಿವಮ್ಮ**
ಆಲನಹಟ್ಟಿ ರಾಮನಗರ ಜಿಲ್ಲೆ
ವಯಸ್ಸು : ೫೦ ವರ್ಷ
ಜಾತಿ : ಪರಿಶಿಷ್ಟ ಜಾತಿ

ನಾಲ್ಕೂವರೆ ಎಕರೆ ಒಣ ಕೃಷಿ ಭೂಮಿ ಹೊಂದಿದ್ದಾರೆ. ಸ್ವಲ್ಪ ಪ್ರದೇಶಕ್ಕೆ ನೀರಾವರಿ ಇದೆ. ರಾಗಿ, ಶೇಂಗಾ, ತೆಂಗು, ತರಕಾರಿ ಬೆಳೆಯುತ್ತಾರೆ. ರೇಷ್ಮೆ ಸಾಕಾಣಿಕೆಯನ್ನೂ ಮಾಡುತ್ತಾರೆ.



**ಶ್ರೀಮತಿ ಮುನಿಯಮ್ಮ**
ಗಂಗಮ್ಮನ ಹಳ್ಳಿ, ಬಳ್ಳಾರಿ ಜಿಲ್ಲೆ
ವಯಸ್ಸು : ೫೨ ವರ್ಷ
ಜಾತಿ : ಹಿಂದುಳಿದ ವರ್ಗ

ಎರಡು ಎಕರೆ ಒಣ ಭೂಮಿ ಹಾಗೂ ಒಂದು ಎಕ-ರೆ ನೀರಾವರಿ ಭೂಮಿಯಿದೆ. ರಾಗಿ, ಭತ್ತ, ತರಕಾರಿಗಳನ್ನು ಸಾವಯವದಲ್ಲಿ ಬೆಳೆಯುತ್ತಾರೆ. ಹೈನುಗಾರಿಕೆಯೂ ಇದೆ.



**ಶ್ರೀಮತಿ ಗಂಗಮ್ಮ ಪುಟ್ಟರಸಯ್ಯ**
ಲಕ್ಕಸಂದ್ರ, ರಾಮನಗರ ಜಿಲ್ಲೆ.
ವಯಸ್ಸು : ೫೦ ವರ್ಷ
ಜಾತಿ : ಪರಿಶಿಷ್ಟ ಜಾತಿ

ಎರಡು ಎಕರೆ ಕೃಷಿ ಭೂಮಿಯಿದೆ. ಬಾಳೆ, ರಾಗಿ, ತರಕಾರಿ ಬೆಳೆಯುತ್ತಾರೆ.



**ಶ್ರೀಮತಿ ಲಕ್ಷ್ಮಿ ಸಿದ್ಧಿ**
ಶಿರಗಾಂ ಉತರ ಕನ್ನಡ
ವಯಸ್ಸು : ೪೨ ವರ್ಷ
ಜಾತಿ : ಪರಿಶಿಷ್ಟ ವರ್ಗ

ಒಂದು ಎಕರೆ ಭೂಮಿಯಲ್ಲಿ ಸಾವಯವ ಕೃಷಿಯಲ್ಲಿ ಭತ್ತ, ತೆಂಗು ಬೆಳೆಯುತ್ತಾರೆ.




**ಶ್ರೀ ಹಚ್ಚೇಗೌಡ**
ಬಿಳಿಗಿರಿ ರಂಗನ ಬೆಟ್ಟ,
ಚಾಮರಾಜ ನಗರ ಜಿಲ್ಲೆ
ವಯಸ್ಸು : ೫೦ ವರ್ಷ
ಜಾತಿ : ಪರಿಶಿಷ್ಟ ವರ್ಗ

ಮಳೆಯಾಶ್ರಿತ ಕೃಷಿ ಮಾಡುತ್ತಿದ್ದಾರೆ. ಬಾಳೆ, ಕಾಫಿ, ಬೆಳೆಯುತ್ತಾರೆ. ದೇಸೀ ತಳಿ ಬೀಜಗಳ ಸಂಗ್ರಹಣೆಯಲ್ಲಿ ತೊಡಗಿದ್ದಾರೆ.

## ನ್ಯಾಯ ಮಂಡಲಿ ಸದಸ್ಯರು ಪ್ರತಿನಿಧಿಸಿದ ಜಾತಿ ಮತ್ತು ಲಿಂಗವಾರು ಹಂಚಿಕೆಯನ್ನು ವಿವರಿಸುವ ಕೊಷ್ಟಕ

| ಜಾತಿ | ಹೆಂಗಸು | ಗಂಡಸು | ಸಂಖ್ಯೆ |
|---|---|---|---|
| ಮುಸುಲ್ಮಾನ | ೦೧ | – | ೦೧ |
| ಪರಿಶಿಷ್ಟ ಜಾತಿ/ವರ್ಗ | ೦೮ | ೦೮ | ೧೬ |
| ಹಿಂದುಳಿದ ವರ್ಗ | ೦೩ | ೦೨ | ೦೫ |
| ಸಾಮಾನ್ಯ ವರ್ಗ | ೦೩ | ೦೩ | ೦೬ |
| **ಒಟ್ಟು** | **೧೫** | **೧೩** | **೨೮** |

## ವಾದಿಗಳು /ಸಾಕ್ಷಿಗಳು








ನಾಗರಿಕ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಕೃಷಿ ಸಂಶೋಧನೆಯಲ್ಲಿ ತೊಡಗಿರುವವರು ನ್ಯಾಯ ಮಂಡಳಿಯ ಮುಂದೆ ತಮ್ಮ ವಾದವನ್ನು ಮಂಡಿಸಿದರು. ಅವರು ಸರ್ಕಾರಿ ಇಲಾಖೆಗಳ ಪ್ರತಿನಿಧಿಗಳು, ಕೃಷಿ ವಿಶ್ವವಿದ್ಯಾನಿಲಯದವರು, ರೈತ ಸಂಘಟನೆಯವರು, ಗ್ರಾಹಕ ಸಂಘಟನೆಯವರು, ಅಧಿಕಾರಿಗಳು ಆಗಿದ್ದರು. ರೈತ ನ್ಯಾಯ ಮಂಡಳಿಯ ಮುಂದೆ ಕೃಷಿ ಸಂಶೋಧನೆಗೆ ಸಂಬಂಧಿಸಿದ ವಿಚಾರಗಳನ್ನು ಮಂಡಿಸಿ ಅದರ ಪ್ರಸ್ತುತತೆಯನ್ನು ನ್ಯಾಯ ಮಂಡಳಿಗೆ ಅರಿವು ಮಾಡಿಕೊಡುವುದು ಇವರ ಪ್ರಮುಖ ಪಾತ್ರವಾಗಿತ್ತು. ಈ ವಾದಿಗಳು ಕೃಷಿ ಸಂಶೋಧನೆಯ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಗಳ ಬಗ್ಗೆ ಪರ–ವಿರೋಧ ವಿಚಾರಗಳನ್ನು ಮಂಡಿಸಿದರು.






## ಆಸಕ್ತರು

**ಕೃ**ಷಿ ಅಭಿವೃದ್ಧಿ ಪ್ರಕ್ರಿಯೆಗೆ ಆರ್ಥಿಕ ನೆರವು ನೀಡುತ್ತಿರುವ ಮತ್ತು ಕೃಷಿ ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಗಳ ಪ್ರತಿನಿಧಿಗಳಿಗೆ ಈ ತೀರ್ಮಾನದ ಪ್ರಕ್ರಿಯೆಯಲ್ಲಿ ಆಸಕ್ತಿ ಇರುವುದರಿಂದ ದೇಶ ವಿದೇಶಗಳ ಅನೇಕ ಸಂಸ್ಥೆಗಳ ಪ್ರತಿನಿಧಿಗಳು ರೈತ ತೀರ್ಪಿನ ಪ್ರಕ್ರಿಯೆಯಲ್ಲಿ ಆಸಕ್ತರಾಗಿ ಭಾಗವಹಿಸಿದ್ದರು.

## ಸ್ಥಳ

**ರೈ**ತ ತೀರ್ಪಿನ ನ್ಯಾಯಾಸ್ಥಾನದ ಪ್ರಕ್ರಿಯೆಯು ಬೆಂಗಳೂರಿನ ಬಳಿ ಕನಕಪುರ ರಸ್ತೆಯಲ್ಲಿರುವ 'ಫೈರ್ ಫ್ಲೈಸ್' ಆಶ್ರಮದಲ್ಲಿ ಮೇಲ್ವಿಕ್ಷಣಾ ಸಮಿತಿ ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ನಡೆಯಿತು.

### ರೈತ ತೀರ್ಪಿನ ಪ್ರಕ್ರಿಯೆಗೆ ಕೆಳಕಾಣಿಸಿದ ವೇಳಾ ಪಟ್ಟಿಯನ್ನು ನಿಗದಿಪಡಿಸಲಾಗಿತ್ತು

| | |
|---|---|
| ೫-೯-೨೦೦೯ ರಿಂದ ೧೫-೯-೨೦೦೯ | ನ್ಯಾಯ ಮಂಡಳಿ ಸದಸ್ಯತ್ವಕ್ಕೆ ಅರ್ಹ ವ್ಯಕ್ತಿಗಳಿಂದ ಅರ್ಜಿ ಆಹ್ವಾನ |
| ೨೫-೯-೨೦೦೯ ರಿಂದ ೫-೧೦-೨೦೦೯ | ಅರ್ಜಿ ಪರಿಷ್ಕರಣೆ ಮತ್ತು ನೂರು ಅರ್ಜಿಗಳನ್ನು ಆಯ್ಕೆ ಮಾಡಿ ಮುಂದಿನ ಕ್ರಮಕ್ಕಾಗಿ ರೊಷನಿ ನಿಲಯ ಸಂಸ್ಥೆಗೆ ಕಳುಹಿಸುವುದು. |
| ೧೨-೧೦-೨೦೦೯ ರಿಂದ ೨೫-೧೦-೨೦೦೯ | ರೋಷನಿ ನಿಲಯದವರಿಂದ ಆಸಕ್ತ ನೂರು ವ್ಯಕ್ತಿಗಳ ನೇರ ಸಂದರ್ಶನ. |
| ೨-೧೧-೨೦೦೯ | ನ್ಯಾಯ ಮಂಡಳಿಯ ಅಂತಿಮ ಪಟ್ಟಿ ಪ್ರಕಟಣೆ. |
| ೩-೧೧-೨೦೦೯ ರಿಂದ ೬-೧೧-೨೦೦೯ | ವಾದಿಗಳು / ಸಾಕ್ಷಿಗಳಿಗೆ ರೈತ ತೀರ್ಪಿನ ಪರಿಚಯ ಮಾಡಿಕೊಡುವುದು. |
| ೬-೧೧-೨೦೦೯ | ವಾದಿಗಳು / ಸಾಕ್ಷಿಗಳ ಅಂತಿಮ ಪಟ್ಟಿ ಪ್ರಕಟಣೆ. |
| ೩೦-೧೧-೨೦೦೯ | ನ್ಯಾಯ ಮಂಡಳಿಗೆ ರೈತ ತೀರ್ಪಿನ ಪರಿಚಯ. |
| ೧-೧೨-೨೦೦೯ ರಿಂದ ೩-೧೨-೨೦೦೯ | ನ್ಯಾಯ ಮಂಡಳಿಯಿಂದ ವಾದ ವಿವಾದಗಳ ಆಲಿಕೆ. |
| ೫-೧೨-೨೦೦೯ | ನ್ಯಾಯ ಮಂಡಳಿಯ ಅಂತಿಮ ತೀರ್ಪು ಪ್ರಕಟಣೆ. |

# ವಿಚಾರ ಮಂಡನೆಗಳು

***೨೦೦೯ ಡಿಸೆಂಬರ್ ಮಾಹೆಯ ೧ನೇ ತಾರೀಖಿನಿಂದ ೩ ನೇ ತಾರೀಖಿನವರಗೆ ಬೆಂಗಳೂರಿನ ಬಳಿಯ ಫೈರ್ ಫ್ಲೈಸ್ ಆಶ್ರಮದಲ್ಲಿ ರೈತ ನ್ಯಾಯ ಮಂಡಲಿಯ ಮುಂದೆ ಮಂಡಿಸಲ್ಪಟ್ಟ ವಿಷಯಗಳ ಸಂಕ್ಷಿಪ್ತ ರೂಪ.***

**೧. ಡಾ ಸರ್ವೇಶ,**
ನಿರ್ದೇಶಕರು,
ಕರ್ನಾಟಕ ರಾಜ್ಯ ಕೃಷಿ ಇಲಾಖೆ



ರೈತ ತೀರ್ಪಿನ ನ್ಯಾಯ ಮಂಡಲಿಯ ಸದಸ್ಯರಿಗೆಲ್ಲ ನಮಸ್ಕಾರಗಳು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ನಮಗೆ ನಮ್ಮ ಆತ್ಮಾವಲೋಕನ ಮಾಡಿಕೊಳ್ಳಲು ವ್ಯವಸ್ಥೆಯಾಗಿರುವಂತಹ ಕಾರ್ಯಕ್ರಮ ಇದು ಎಂದು ನಾನು ಭಾವಿಸಿದ್ದೇನೆ. ನಮ್ಮ ವ್ಯವಸ್ಥೆಯಲ್ಲಿರುವ ಲೋಪ ದೋಷಗಳು, ಒಳ್ಳೆಯದು ಹಾಗೂ ಕೆಟ್ಟದ್ದನ್ನು ಚಾಚೂ ತಪ್ಪದೆ ನಿಮ್ಮೊಂದಿಗೆ ಮುಂದಿನ ಇಪ್ಪತ್ತು ಇಪ್ಪತ್ತೈದು ನಿಮಿಷಗಳಲ್ಲಿ ನಾನು ಹಂಚಿಕೊಳ್ಳಲಿದ್ದೇನೆ. ಇಂತಹ ಒಂದು ವಿನೂತನವಾದ ಕಾರ್ಯಕ್ರಮವನ್ನು ಒಂದು ಸರ್ಕಾರೇತರ ಸಂಸ್ಥೆ ಆಯೋಜಿಸಿರುವುದು ಸಂತೋಷದ ಸಂಗತಿಯಾಗಿದೆ. ನಮ್ಮ ದೇಶದಲ್ಲಿ ಚಿಂತನೆಗೇನೂ ಕಡಿಮೆ ಇಲ್ಲ. ನಮ್ಮ ದೇಶದ ಸಮಸ್ಯೆಯಿರುವುದು ನಮ್ಮ ಚಿಂತನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಎಂದು ನಾನು ಭಾವಿಸಿದ್ದೇನೆ. ಮಹಾಭಾರತದಲ್ಲಿ ಶ್ರೀ ಕೃಷ್ಣ ಭಗವದ್ಗೀತೆಯ ಸಾರವನ್ನು ಅರ್ಜುನನಿಗೆ ಬಹಳ ಸರಳವಾಗಿ ನಿರೂಪಿಸಲು ಒಂದು ಮರದ ಉದಾಹರಣೆಯನ್ನು ಕೊಡುತ್ತಾನೆ. ಸಾರ್ಥಕವಾದ ಬದುಕು ಎಂದರೆ ಫಲ ಕೊಡುವ ಒಂದು ಮರದ್ದು. ನೀನು ನಿನ್ನ ಬದುಕಿನಲ್ಲಿ ಸಾರ್ಥಕತೆಯನ್ನು ಕಂಡು ಕೊಳ್ಳಬೇಕೆಂದರೆ ಫಲ ಕೊಡುವ ಮರದಂತೆ ಬದುಕಬೇಕು ಎಂದು ಹೇಳುತ್ತಾನೆ. ಅಂದರೆ ನನ್ನ ಬದುಕು ಅರ್ಥಪೂರ್ಣವಾಗ ಬೇಕು ಅಂದರೆ ನಾವು ಮಾಡಿದ ಕಾರ್ಯ ಹತ್ತು ಜನಕ್ಕೆ ಅನುಕೂಲವಾಗೋ ರೀತೀಲಿ ಇರಬೇಕು. ಈ ವಿಚಾರವನ್ನು ತಲೆಯಲ್ಲಿ ಇಟ್ಟುಕೊಂಡು ಯೋಚಿಸಿದಾಗ, ನಾವು ಮಾಡುತ್ತಿರುವ ಸಂಶೋಧನೆಗಳು ರೈತರಿಗಾಗಿ, ರೈತರಿಗೋಸ್ಕರ ಇವೆಯೇ ಎಂಬ ಪ್ರಶ್ನೆ ಏಳುತ್ತದೆ. ನಾನು ರೈತ ತೀರ್ಪಿಗೆ ವಾದ ಮಂಡಿಸಲು ಹೋಗುತ್ತೇನೆ ಎಂದಾಗ ನನ್ನ ಸ್ನೇಹಿತರು ವಾದ ಮಂಡಿಸಲು ಏನು ಇದೆ ಅಂದರು. ಆಗ ನಾನು ಹೇಳಿದ್ದಿಷ್ಟೆ. ರಾಜ್ಯದ ವಿವಿಧ ಭಾಗಗಳಿಂದ ಬಂದಿರುವ ೩೦ ಜನ ರೈತ ನ್ಯಾಯ ಮಂಡಲಿ ಮುಂದೆ ನಮ್ಮ ಇಲಾಖೆ, ಸರ್ಕಾರ ಮಾಡಿರುವ ನೀತಿಗಳ ಬಗ್ಗೆ ನನ್ನ ವಿಚಾರ ಮಂಡಿಸುತ್ತೇನೆ, ನಂತರ ರೈತರು ಚರ್ಚೆ ಮಾಡಿ ಕೊಡುವ ತೀರ್ಪಿನಿಂದ ನಮ್ಮಲ್ಲೂ ಸ್ವಲ್ಪ ಬದಲಾವಣೆ ಆಗ ಬೇಕಾದ ವಿಚಾರ ಬಂದು ಅದು ಹಾಗೆ ಆಗಬೇಕು ಎನಿಸಿ ಇಬ್ಬರಿಗೂ ಸಾರ್ಥಕತೆ ಸಿಗುವುದಾದರೆ ಒಳ್ಳೆಯದು ಎಂದೆ. ನಮ್ಮ ದೇಶಕ್ಕೆ ಸ್ವತಂತ್ರ ಬಂದಾಗಿನಿಂದ ಇಲ್ಲಿವರಗೆ ಬಹಳ ಬದಲಾವಣೆಯಾಗಿದೆ. ನಮಗೆ ಸ್ವತಂತ್ರ ಬಂದಾಗ ಹೊರ ದೇಶದಿಂದ ಆಹಾರವನ್ನು ಆಮದು ಮಾಡಿಕೊಂಡು ಊಟ ಮಾಡ ಬೇಕಾದ ಸ್ಥಿತಿಯಲ್ಲಿದ್ದೆವು. ಇಂದು ಹೆಚ್ಚು, ಹೆಚ್ಚು ಅಹಾರ ಬೆಳೆದು ಮಾರುಕಟ್ಟೆ ಸಿಗದಂತಹ ಪರಿಸ್ಥಿತಿಗೆ ಬಂದು ನಿಂತಿದ್ದೇವೆ. ಅಂದರೆ ಹಲವು ಒಳ್ಳೆಯದೂ, ಕೆಲವು ಕೆಟ್ಟದ್ದೂ ಆಗಿದೆ. ೧೯೬೬ ರಲ್ಲಿ ನಾರ್ಮನ್ ಬೋರ್ಲಾಗ್ ಅವರ ಸಂಶೋಧನೆಯಿಂದ ಬಂದ ಗಿಡ್ಡ ತಳಿಯ ಗೋಧಿಯಿಂದಾಗಿ ನಮ್ಮ ದೇಶದಲ್ಲಿ ಆಹಾರ ಉತ್ಪಾದನೆ ಗಣನೀಯವಾಗಿ ಏರಿದೆ. ಆದರೆ ಈ ಸಂಶೋಧನೆಯ ಲಾಭ ನೀರಾವರಿ ಇರುವ , ಸಂಪನ್ಮೂಲ ಹೊಂದಿರುವ ರೈತರಿಗೇ ಆಗಿದೆ. ದೇಶದ ಆಹಾರ ಉತ್ಪಾದನೆಯಲ್ಲಿ ನಾಲ್ಕು / ಐದು ಪಟ್ಟು ಹೆಚ್ಚಳವಾಗಿದ್ದರೂ ಇದರ ಲಾಭ ಮಾತ್ರ ನೀರಾವರಿ ಇರುವಂತಹ, ಕಬ್ಬು, ಭತ್ತ ಬೆಳೆಯುವ ರೈತರಿಗೆ ಮಾತ್ರ ಸಿಕ್ಕಿದೆ. ಮಳೆ ಆಶ್ರಿತ





ರೈತರಿಗೆ, ಅತಿವೃಷ್ಟಿ ಇಲ್ಲವೇ ಅನಾವೃಷ್ಟಿ ಪ್ರದೇಶದಲ್ಲಿರುವ ರೈತರಿಗೆ ಕೃಷಿ ಸಂಶೋಧನೆಗಳ ಲಾಭ ತಲುಪಿಲ್ಲ ಎಂಬ ಅಭಿಪ್ರಾಯ ಕೂಡ ಇದೆ. ಉದಾಹರಣೆಗೆ ಪಾವಗಡದಂತಹ ಸದಾ ಬರಗಾಲ ಪೀಡಿತ ಪ್ರದೇಶಕ್ಕೆ ನಾವು ಇನ್ನೂ ಸರಿಹೊಂದುವ ಕಡ್ಲೆಕಾಯಿ ತಳಿಯನ್ನು ಬಿಡುಗಡೆ ಮಾಡಲು ಸಾಧ್ಯವಾಗಿಲ್ಲ. ಗುಲ್ಬರ್ಗ ಜಿಲ್ಲೆಗೆ ನೀಡಿದ ಮಾರುತಿ ತಳಿ ತೊಗರಿ ಬಿಡುಗಡೆ ಮಾಡಿ ೨೦ ವರ್ಷದ ಮೇಲಾಯಿತು. ರಾಗಿ ಯಲ್ಲಿ ಲಕ್ಷ್ಮಣಯ್ಯ ನವರ ಸಂಶೋಧನೆಯ ಫಲವಾಗಿ ಉತ್ತಮವಾದ ರಾಗಿ ತಳಿಗಳು ಬಂದಿವೆ. ಉತ್ತರ ಕರ್ನಾಟಕ ರೈತರಿಗೆ ಹೋಲಿಸಿದರೆ ದಕ್ಷಿಣ ಕರ್ನಾಟಕದ ರೈತರಿಗೆ ಸಂಶೋಧನೆಯ ಲಾಭ ಹೆಚ್ಚು ಸಿಕ್ಕಿದೆ ಅನ್ನಬಹುದು. ರೈತರಿಗೆ ಸಂಶೋಧನಾ ಫಲ ನೇರವಾಗಿ ಕೃಷಿ ವಿಶ್ವವಿದ್ಯಾನಿಲಯದಿಂದ ಸಿಗದಿದ್ದರೂ ಪರೋಕ್ಷವಾಗಿ ಬೇರೆ ಕಡೆಯಿಂದ ದೊರಕಿದೆ. ಉದಾಹರಣೆಗೆ ೨ ಲಕ್ಷ ಹೆಕ್ಟೇರ್‌ನಲ್ಲಿ ಬೆಳೆಯುತ್ತಿದ್ದ ಮುಸುಕಿನ ಜೋಳ ಇಂದು ೧೨ ಲಕ್ಷ ಹೆಕ್ಟೇರಿಗೆ ತಲುಪಿದೆ. ೪೦ ಲಕ್ಷ ಟನ್ ಬೆಳೆಯಲು ಸಾಧ್ಯವಾಗಿದೆ. ಇದೂ ಕೂಡ ನಮ್ಮ ಸಂಶೋಧನೆಯ ಫಲವೇ ಆಗಿದೆ. ಮುಸುಕಿನ ಜೋಳ ಯಾರಿಗೋಸ್ಕರ ಬೆಳೆಯುತ್ತಿದ್ದೇವೆ ಎಂಬುದು ಬೇರೆ ಪ್ರಶ್ನೆ. ಮುಸುಕಿನ ಜೋಳ ಕೋಳಿಗಳಿಗೆ ಹಾಗೂ ಬೇರೆ, ಬೇರೆ ಉತ್ಪನ್ನಗಳನ್ನು ಮಾಡುವವರಿಗೆ ಬೆಳಿತಾ ಇದೀವಿ. ಹಾಗಾಗಿ ಸಂಶೋಧನೆಯ ಫಲ ಅರ್ಧ ದಕ್ಕಿದೆ, ಅರ್ಧ ದಕ್ಕಿಲ್ಲ. ಇಳುವರಿ ಹೆಚ್ಚಾಗಿದ್ದರೂ, ಬಂದ ಫಸಲನ್ನ ಸಮರ್ಪಕವಾಗಿ ಸಂಗ್ರಹಿಸಿ, ಸ್ವಚ್ಛಗೊಳಿಸಿ, ವ್ಯವಸ್ಥಿತವಾಗಿ ಮಾರುಕಟ್ಟೆಗೆ ತಲುಪಿಸುವ ವ್ಯವಸ್ಥೆಯ ಕಡೆಗಿನ ಸಂಶೋಧನೆ ಇನ್ನೂ ಸಾಕಷ್ಟು ಆಗಿಲ್ಲ. ಇನ್ನೂ ನಮ್ಮ ರೈತರು ರಸ್ತೆಯನ್ನೇ ಕಣವನ್ನಾಗಿ ಮಾಡಿ ಕೊಳ್ಳುವ ಪರಿಸ್ಥಿತಿ ದೂರವಾಗಿಲ್ಲ. ಸ್ವತಂತ್ರ ಪೂರ್ವದ ದಿನಗಳಿಗೆ ಹೋಲಿಸಿದರೆ ನಾವು ಸಾಕಷ್ಟು ಬೆಳೆದಿದ್ದೇವೆ. ಆದರೆ ವಿಶ್ವ ಬೆಳೆಯುತ್ತಿರುವ ಮಟ್ಟದಲ್ಲಿ ನಾವು ಬೆಳೆಯುತ್ತಿಲ್ಲ ಅನ್ನುವ ಕೂಗು ನನ್ನಲ್ಲಿದೆ. ನಾನು ಸರ್ಕಾರದ ಒಬ್ಬ ಅಧಿಕಾರಿಯಾಗಿ ಮಾತ್ರ ಇಲ್ಲಿ ಮಾತಾಡ್ತಾಯಿಲ್ಲ. ಮೂವತ್ತು ವರ್ಷಗಳಿಂದ ಕೆಲಸ ಮಾಡಿರುವ ಒಬ್ಬ ಕಾರ್ಯಕರ್ತನಾಗಿ ಮಾತಾಡ್ತ ಇದ್ದೇನೆ. ನನ್ನನ್ನು ಕೇಳಿದ್ರೆ ಪ್ರತಿಯೊಬ್ಬ ರೈತನೂ ವಿಜ್ಞಾನಿನೇ. ರೈತನ ಸಂಕಷ್ಟಗಳಿಗೆ ಪರಿಹಾರ ಕಂಡುಹಿಡಿಯುವ ಸವಾಲು ಸರ್ಕಾರದ ಮೇಲೆ ಏನಿದೆ ಅದು ವರ್ಷದಿಂದ ವರ್ಷಕ್ಕೆ ಜಾಸ್ತಿ ಆಗ್ತಾ ಹೋಗುತ್ತಿದೆ. ವಿಶ್ವದ ಮಟ್ಟದಲ್ಲಿ ನಡೆಯುತ್ತಿರುವ ಸಂಶೋಧನೆಗಳ ಮಟ್ಟಕ್ಕೆ ನಮ್ಮ ಸಂಶೋಧನೆಯನ್ನ ತಗೊಂಡು ಹೋಗಬೇಕು ಅಂದರೆ ನೀವು ಜೀನ್ ಮಾಡಿಫಿಕೇಶನ್ ಬಗ್ಗೆ ಮಾತಾಡ್ತಾಯಿದಿರೀ ಅಂತಹ ಸಂಶೋಧನೆಗಳು ನಮಗೆ ಅಗತ್ಯ ಇಲ್ಲ, ಪರಿಸರ ಹಾಳಾಗುತ್ತೆ ಅನ್ನುವ ಕೂಗು ಕೇಳಿ ಬರುತ್ತೆ. ಬೇರೆ ದೇಶದ ರೈತರ ಕೃಷಿ ಉತ್ಪನ್ನಗಳ ಜೊತೆ ನಮ್ಮ ರೈತರ ಉತ್ಪನ್ನಗಳು ಸ್ಪರ್ಧಿಸಬಲ್ಲವೆ? ನಾವು ನಮ್ಮ ರಾಷ್ಟ್ರದಲ್ಲಿ






ಉತ್ತಮವಾದ ಸಂಶೋಧನಾ ಕೇಂದ್ರಗಳನ್ನು ನಡೆಸುತ್ತಾ ಇದ್ದೇವೆ. ಸಾವಿರಾರು ವಿಜ್ಞಾನಿಗಳು ದುಡಿತಾಯಿದಾರೆ.

ನಮ್ಮಲ್ಲಿ ಸಂಶೋಧನೆ ನಡೆದಿಲ್ಲವೇ ಎಂದು ಕೇಳಿದರೆ, ಸಂಶೋಧನೆ ನಡೆದಿದೆ ಆದರೆ ಬರಗಾಲ ಬಂದಾಗ ಮೊನ್ನೆ ಬಂದಂತಹ ಪ್ರವಾಹ ಬಂದಾಗ ನಿಭಾಯಿಸಲು ಬೇಕಾದಂತಹ ಸಂಶೋಧನೆಗಳ ಬಗ್ಗೆ ಯೋಚಿಸಿದಾಗ, ನಾವು ಮಾಡಬೇಕಾದ್ದು ಭಾಳ ಇದೆ ಅನಿಸುತ್ತೆ.

ಸಂಶೋಧನೆಗಳಲ್ಲಿ ರೈತರನ್ನು ತೊಡಗಿಸಿಕೊಳ್ಳಬೇಕಿದೆ. ಫಾರ್ಮರ್ಸ್ ಸ್ಕೂಲ್ ನಂತಹ ಯೋಜನೆಗಳು ಹೆಚ್ಚು ದಕ್ಷತೆಯಿಂದ ಕೆಲಸ ಮಾಡಬೇಕಿದೆ.

ಮುಂದಿನ ವಿಚಾರ ರೈತರ ಫಸಲಿಗೆ ಸರಿಯಾದ ಮಾರುಕಟ್ಟೆ ಇಲ್ಲಾ ಅನ್ನೋದು. ಅನೇಕ ರೈತರು ನೀವು ಹೊಸದಾಗಿ ಏನೂ ಸಂಶೋಧನೆ ಮಾಡೋದು ಬೇಡ ಬದಲಿಗೆ ನಮ್ಮ ಬೆಳೆಗಳಿಗೆ ಸರಿಯಾದ ಧಾರಣೆ ಸಿಗುವಂತೆ ಮಾಡಿ ಸಾಕು ಎನ್ನುತ್ತಾರೆ. ಒಳ್ಳೆ ರೇಟ್ ಕೊಡೋರು ಯಾರು? ಸರ್ಕಾರ ಬೆಂಬಲ ಬೆಲೆಯನ್ನು ಕೊಟ್ಟು ಎಷ್ಟು ಉತ್ಪನ್ನಗಳನ್ನು ಖರೀದಿಸಲು ಸಾಧ್ಯ? ಬದಲಿಗೆ ರೈತರು ಸಂಘಟಿತರಾಗಿ ಸ್ವಸಹಾಯ ಸಂಘಗಳ ಮೂಲಕ ಏನಾದರೂ ಮಾಡಲು ಸಾಧ್ಯವೇ ಎಂಬುದನ್ನು ಯೋಚಿಸಬೇಕು. ರೈತರು ಮಾರುಕಟ್ಟೆಗೆ ಹೇಗೆ ಬೇಕೋ ಹಾಗೆ ತಮ್ಮ ಉತ್ಪನ್ನಗಳನ್ನು ಸಿದ್ಧ ಪಡಿಸಿ, ದಳ್ಳಾಳಿಗಳ ಹಿಡಿತ ತಪ್ಪಿಸಿಕೊಂಡು ರೈತರು ಹೇಗೆ ಮಾರಾಟ ಮಾಡಬೇಕು ಎಂಬುದರ ಬಗ್ಗೆಯೂ ಸಂಶೋಧನೆ ನಡೆಯಬೇಕಾಗಿದೆ. ಇಂದು ದೇಶ ಜಾಗತಿಕ ಮಾರುಕಟ್ಟೆಗೆ ತೆರೆದು ಕೊಂಡಿದೆ. ಅದನ್ನು ಎದುರಿಸಲು ರೈತರು ಸಂಘಟಿತರಾಗಿ ಕೆಲಸ ಮಾಡಬೇಕು. ವಿವಿಧ ಸರ್ಕಾರಿ ಇಲಾಖೆಗಳು ರೈತರೊಂದಿಗೆ ಸತತ ಸಂಪರ್ಕದಲ್ಲಿದ್ದು ಕೆಲಸ ಮಾಡಲು ಸಾಧ್ಯವಾಗುವಂತಹ ಒಂದು ವೇದಿಕೆ ನಿರ್ಮಾಣವಾಗಬೇಕು. ಪರಿಸರದ ಜ್ಞಾನ ರೈತರಿಗೆ ಗೊತ್ತಾಗಬೇಕು. ನಾವು ವಿಜ್ಞಾನಿಗಳು ರಾಸಾಯನಿಕ ಗೊಬ್ಬರ ಹಾಕಿ ಅಂದೆವು. ಆದರೆ ಸಾವಯವ ಗೊಬ್ಬರ ಬಿಟ್ಟು ಬಿಡಿ ಎಂದು ಎಲ್ಲೂ ಹೇಳಲಿಲ್ಲ. ಇವತ್ತು ನಮ್ಮ ದುರ್ದೈವ ಅಂದರೆ ಇಂದು ಹಳ್ಳಿಗಳಲ್ಲಿ ಒಂದು ರಾಸನ್ನು ನೋಡಲಾಗದಂತಹ ಪರಿಸ್ಥಿತಿಗೆ ತಲುಪಿದ್ದೇವೆ. ರೈತ ಸಮುದಾಯ, ಸರ್ಕಾರಿ ವ್ಯವಸ್ಥೆಗಳು ಎಲ್ಲರೂ ಒಗ್ಗೂಡಿ ನಿಂತರೆ ಮಾತ್ರ ಸಮಸ್ಯೆಗಳನ್ನು ಎದುರಿಸಲು ಸಾಧ್ಯ.

**೨. ಸುನಂದಾ ಜಯರಾಂ**

ರೈತ ಹೋರಾಟಗಾರರು

<u>ಮಂಡ್ಯ</u>



ಎಲ್ಲರಿಗೂ ನಮಸ್ಕಾರ. ನಾನು ಸುನಂದಾ ಜಯರಾಂ ಅಂತ. ಕರ್ನಾಟಕ ರಾಜ್ಯ ರೈತ ಸಂಘದ ಮಹಿಳಾ ಘಟಕದ ಅಧ್ಯಕ್ಷಳಾಗಿದ್ದೇನೆ. ನಾನು ಈಗ ಭಾರತದ ಕೃಷಿ ಬದುಕಿನ ಬಗ್ಗೆ ನಿಮ್ಮ ಮುಂದೆ ನನ್ನ ವಾದವನ್ನು ಮಂಡಿಸುತ್ತೇನೆ. ಕೃಷಿಯನ್ನು ಮೂರು ವಿಭಾಗಗಳಾಗಿ ನಾನು ನೋಡುತ್ತೇನೆ. ಒಂದನೆಯದು ನಮ್ಮ ಸ್ವಂತ ಅನುಭವದಿಂದ ಮಾಡುತ್ತಿದ್ದಂತಹ ಕೃಷಿ, ಎರಡನೆಯದು ಹಸಿರು ಕ್ರಾಂತಿಯ ಸಮಯದಲ್ಲಿ ಬಂದಂತಹ ಕೃಷಿ. ಮೂರನೆಯದು ೯೦ ರ ದಶಕದ ನಂತರ ಮುಕ್ತ ಆರ್ಥಿಕ ನೀತಿಯ ನಂತರ ಬಂದಂತಹ ಕೃಷಿ.

ನಮ್ಮ ಸ್ವಂತ ಅನುಭವದಿಂದ ಮಾಡುತ್ತಿದ್ದಂತಹ ಪಾರಂಪರಿಕ ಕೃಷಿಯಲ್ಲಿ ಶ್ರಮವೇ ಬಂಡವಾಳವಾಗಿತ್ತು. ಭೂಮಿ ದೇವರು ಅನ್ನೋ ಭಾವ ಇತ್ತು. ಇಂತಹ ತಿಳುವಳಿಕೆಯ ವ್ಯವಸ್ಥೆಯಲ್ಲಿ ಭೂಮಿಯ ಗುಣಮಟ್ಟ, ಭೂಸತ್ವ ಚೆನ್ನಾಗಿತ್ತು. ಇಡೀ ಕುಟುಂಬ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಳ್ಳುತ್ತಿತ್ತು. ರಾಸುಗಳು ರೈತನ ಜೀವನದ ಅವಿಭಾಜ್ಯ ಅಂಗವಾಗಿದ್ದವು. ಒಂದು ಗ್ರಾಮದ ವಾತಾವರಣದಲ್ಲಿ ರೈತರು, ರೈತ ಮಹಿಳೆಯರು, ಕೃಷಿ ಕಾರ್ಮಿಕರು, ಕೃಷಿಗೆ ಪೂರಕವಾಗಿದ್ದ ಕುಶಲ ಕರ್ಮಿಗಳು ಹೀಗೆ ಇವರೆಲ್ಲರಿಗೂ ತಮ್ಮದೇ ಆದ ಸ್ಥಾನ ಇತ್ತು. ಸಹಕಾರ ಮನೋಭಾವನೆಯಿಂದ, ನಾವೆಲ್ಲರೂ ಒಂದೇ ಅನ್ನೋ ಭಾವನೆಯಿಂದ ಇದ್ದರು. ಅವರು ಎಂದೂ ಸಾಲಗಾರರಾಗಲಿಲ್ಲ. ಭೂಮಿಯ ಸತ್ವವನ್ನು ಹಾಳುಮಾಡಲಿಲ್ಲ. ಜೊತೆಗೆ ಆಹಾರದ ಸಮತೋಲನವನ್ನ ಕಾಪಾಡುವಂತಹ ಬೆಳೆಗಳನ್ನು ಅವರು ಬೆಳೆಯುತ್ತಿದ್ದರು. ಹಾಗಾಗಿ ಅವರ ಆರೋಗ್ಯ ಕೂಡ ಚೆನ್ನಾಗಿ ಇತ್ತು.

ಅರವತ್ತರ ದಶಕದಲ್ಲಿ ಹಸಿರು ಕ್ರಾಂತಿಯ ವಿಚಾರ ಬಂತು.



ಎಲ್ಲವೂ ಶಾಂತವಾಗಿ ಸಮಾಧಾನವಾಗಿ ಇದ್ದಂತಹ ಪರಿಸ್ಥಿತಿಯಲ್ಲಿ ಇದು ಬಂತು. ಸರ್ಕಾರದ ಹಸ್ತಕ್ಷೇಪ, ವಿಜ್ಞಾನಿಗಳ ಬುದ್ಧಿ ಪ್ರವೇಶದಿಂದಾಗಿ ಪಾರಂಪರಿಕವಾಗಿ ಆಹಾರ ಒದಗಿಸುತ್ತಿದ್ದಂತಹ ಒಂದು ವ್ಯವಸ್ಥೆಗೆ ತಡೆಯುಂಟಾಯಿತು. ನಮ್ಮ ಪಾರಂಪರಿಕ ಜ್ಞಾನ ಹಿಂದೆ ಬಿತ್ತು. ಹೆಚ್ಚುತ್ತಿರುವ ಜನಸಂಖ್ಯೆಗೆ ಹೈಬ್ರೀಡ್ ಬೀಜಗಳೆ ಪರಿಹಾರ ಎಂದು ಬಿಂಬಿಸಲಾಯಿತು. ಹೈಬ್ರೀಡ್ ಬೀಜ ಬೆಳೆಯಲು ರಾಸಾಯನಿಕ ಗೊಬ್ಬರಗಳ ಬಳಕೆ, ಕ್ರಿಮಿನಾಶಕಗಳ ಬಳಕೆ, ಯಂತ್ರಗಳ ಮೂಲಕ ಉಳುಮೆ ಪ್ರಾರಂಭವಾಯಿತು. ಯಂತ್ರಗಳ ಬಳಕೆಯಿಂದಾಗಿ ನಿರುದ್ಯೋಗ ಸಮಸ್ಯೆ ಪ್ರಾರಂಭವಾಯಿತು. ಹೈಬ್ರೀಡ್ ಬೀಜಗಳಿಂದಾಗಿ ನಮ್ಮ ಕುಡಿಕೆ, ಮಡಿಕೆಗಳಲಿದ್ದ ಬೀಜಗಳು ನಾಶವಾಗಿ ಹೋದವು. ಒಂದು ಸಾಮಾಜಿಕ ವ್ಯವಸ್ಥೆ ಅಲುಗಾಡಲಿಕ್ಕೆ ಪ್ರಾರಂಭವಾಯಿತು. ಆಧುನಿಕ

ಕೃಷಿ ಸಂಶೋಧನೆಗಳೆ ನಮಗೆ ಮಾರಕವಾಗಲು ಪ್ರಾರಂಭಿಸಿದವು. ೬೦ ರ ದಶಕದಲ್ಲಿ ಪ್ರಾರಂಭವಾದ ಈ ವಿಚಾರಕ್ಕೂ ೯೦ರ ದಶಕದ ಜಾಗತೀಕರಣಕ್ಕೂ ನೇರ ಸಂಬಂಧ ಇದೆ ಅನಿಸುತ್ತೆ. ಇದರ ಭಾಗವಾಗಿ ಬಂದಂತಹ ಗ್ಯಾಟ್ ಒಪ್ಪಂದ ಮುಗ್ಧರಾಗಿದ್ದಂತಹ ಈ ದೇಶದ ರೈತ ಸಮುದಾಯವನ್ನು ಕಟ್ಟಿಹಾಕಲು ಪ್ರಾರಂಭಿಸಿತು. ನಂತರ ಬಂದ ಕುಲಾಂತರಿ ತಳಿಗಳನ್ನು ಸೃಷ್ಟಿಸುವ ವಿಜ್ಞಾನ ಅತ್ಯಂತ ಅಪಾಯಕಾರಿಯಾದ್ದು. ಇದರಿಂದ ರೈತರಿಗೆ ನೇರವಾಗಿ ಏನು ಪ್ರಯೋಜನ? ಈ ಎಲ್ಲದರ ಹಿಂದೆ ಇರುವಂತಹ ಹುನ್ನಾರವೆಂದರೆ ವ್ಯವಸಾಯ ಕ್ಷೇತ್ರಕ್ಕೆ ಕಂಪನಿಗಳು ಬರುವುದೇ ಆಗಿದೆ. ಇಡೀ ಹಳ್ಳಿ ಮಾಡುತ್ತಿದ್ದಂತಹ ಕಸುಬನ್ನ ಇಂದು ಒಂದು ಕಂಪನಿ ಮಾಡಬಹುದಾಗಿದೆ. ನಮ್ಮ ಪಾರಂಪರಿಕ ಬೆಳೆಗಳಾದ ರಾಗಿ, ಭತ್ತ, ನವಣೆ, ಸಜ್ಜೆ, ಆರ್ಕ ದಂತಹ ಬೆಳೆಗಳನ್ನು ಅವರು ಬೆಳೆಯಬೇಕೆಂದೇನೂ ಇಲ್ಲ. ಇದಕ್ಕೆ ಪೂರಕವಾಗಿ ನಮ್ಮ ಕೃಷಿ ಸಂಶೋಧನೆಗಳು ಇಂದು ನಡೆಯುತ್ತಿವೆ. ರೈತರನ್ನು ಎಲ್ಲಿಯೂ ಸಂಶೋಧನೆಯ ಭಾಗವಾಗಿ ಪರಿಗಣಿಸುತ್ತಲೇ ಇಲ್ಲ. ಇದರ ಬಗ್ಗೆ ಇಂದು ರೈತರು ಮಾತಾಡಬೇಕಾಗಿದೆ. ಹೊಸ ಸಂಶೋಧನೆಗಳಿಂದ ರೈತರ ಆರ್ಥಿಕ ಪರಿಸ್ಥಿತಿಯಲ್ಲಿ ಯಾವುದೇ ಸುಧಾರಣೆಯಾಗಲಿಲ್ಲ. ರೈತರ ಜಮೀನುಗಳಿಂದ ಹೋದ ಕಚ್ಚಾ ಸಾಮಗ್ರಿಗಳು ಪ್ಯಾಕ್ ಆಗಿ ಹಳ್ಳಿಗೆ ಬರಲು ಪ್ರಾರಂಭಿಸಿದವು. ಅವನ್ನು ರೈತರು ಹಣಕೊಟ್ಟು ಖರೀದಿಸುವಂತಹ ಪರಿಸ್ಥಿತಿ ನಿರ್ಮಾಣ ಆಯಿತು. ಒಟ್ಟಿನಲ್ಲಿ ಸಮಗ್ರ ಚಿಂತನೆಯುಳ್ಳ ಕೃಷಿ ಸಂಶೋಧನೆ ಇದುವರೆಗೂ ಆಗಿಲ್ಲ. ಇಂದು ರೈತ, ವಿಜ್ಞಾನಿ ಮತ್ತು ಸರ್ಕಾರ ಈ ಮೂವರೂ ಕಲೆತು ಮಾಡುವಂತಹ ಸಂಶೋಧನೆ ನಮಗೆ ಅಗತ್ಯವಿದೆ. ಇದುವರೆಗೆ ಆಗಿರುವ ಸಂಶೋಧನೆಗಳು ರೈತನ ಸುತ್ತ ವಿಷದ ಬಲೆಯನ್ನು ಹೆಣೆದು ಬಿಟ್ಟಿವೆ. ಈ ಸಂಶೋಧನೆಯ ಲಾಭ ನಮಗೆಲ್ಲರಿಗೂ ಚೆನ್ನಾಗಿ ತಟ್ಟಿದೆ. ಇಂದು ಭೂಮಿಯನ್ನು ಕೇಂದ್ರವಾಗಿ ಇಟ್ಟುಕೊಂಡು ಸಂಶೋಧನೆ ಆಗಬೇಕಿದೆ. ನಮ್ಮ ಕಚ್ಚಾ ವಸ್ತುಗಳು ಸ್ಥಳೀಯವಾಗಿಯೇ ಸಿದ್ಧ ವಸ್ತುಗಳಾಗುವಂತಹ ಸಂಶೋಧನೆ ಆಗಬೇಕಿದೆ. ರೈತರಿಗೆ ಒಂದು ಬದುಕನ್ನ ಕೊಡುವಂತಹ, ಘನತೆಯನ್ನ ಕೊಡುವಂತಹ ಸಂಶೋಧನೆ ಆಗಬೇಕಿದೆ. ನೀವು ರೈತ ಪ್ರತಿನಿಧಿಗಳು ನಿಮಗೆ ಯಾವ ರೀತಿಯ ಸಂಶೊಧನೆ ಬೇಕಿದೆ ಎಂಬುದನ್ನು ನಿಮ್ಮ ತೀರ್ಪಿನಲ್ಲಿ ಹೇಳಬೇಕಿದೆ.

ಇಡೀ ಸಮಾಜದ ಸ್ವಾಸ್ಥ್ಯವನ್ನ ಕಾಪಾಡುವಂತಹ, ರೈತರ ಆತ್ಮಹತ್ಯೆಯನ್ನು ತಡೆಯುವಂತಹ, ಕೃಷಿಕರ ಬದುಕನ್ನ ಪ್ರಾಪಂಚಿಕ ಮಟ್ಟದಲ್ಲಿ ಎತ್ತಿ ಹಿಡಿಯುವಂತಹ ತೀರ್ಪು ನಿಮ್ಮಿಂದ ಬರುತ್ತದೆ ಎಂಬ ಆಶಾ ಭಾವನೆಯೊಂದಿಗೆ ನನ್ನ ವಾದವನ್ನು ಮುಗಿಸುತ್ತೇನೆ.

**3. ಗಾಯತ್ರಿ,**

ಸಂಪಾದಕರು, ಸಹಜ ಸಾಗುವಳಿ ಬೆಂಗಳೂರು.



ನಾನು ಇಂದು ನಾಗರಿಕ ಸಮಾಜದ ಪ್ರತಿನಿಧಿಯಾಗಿ ನಿಮ್ಮ ಮುಂದೆ ನಿಂತಿದ್ದೇನೆ. ನಾಗರಿಕ ಸಮಾಜಗಳು ಯಾವಾಗಲೂ ಈ ವ್ಯವಸ್ಥೆಯಲ್ಲಿನ ತಪ್ಪು–ಒಪ್ಪುಗಳನ್ನ, ಅನ್ಯಾಯಗಳನ್ನ, ಅಸಮಾನತೆಯನ್ನ ಎತ್ತಿಹಿಡಿಯುವ ಕೆಲಸವನ್ನ ಮಾಡುತ್ತಾ ಬಂದಿವೆ. ನಾನು ನನ್ನ ವಿದ್ಯಾರ್ಥಿ ಜೀವನದಿಂದಲೂ ನಾಗರಿಕ

ಸಮಾಜಗಳು ನಡೆಸುತ್ತಾ ಬಂದಿರುವ ಹೋರಾಟಗಳೊಂದಿಗೆ ನನ್ನನ್ನು ನಾನು ಗುರುತಿಸಿಕೊಂಡಿದ್ದೇನೆ.

ಮೊದಲು ಮಹಿಳಾ ಚಳುವಳಿಗಳ ಜೊತೆ ಅನಂತರ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಕ್ರೌರ್ಯಗಳ ವಿರುದ್ಧದ ಹೋರಾಟದಲ್ಲಿ ನನ್ನನ್ನು ನಾನು ಗುರುತಿಸಿಕೊಂಡಿದ್ದೇನೆ. ಈ ಆಧುನಿಕ ಅಭಿವೃದ್ಧಿ ಇಡೀ ಮಾನವ ಜನಾಂಗವನ್ನೇ ನಾಶ ಮಾಡುವ ಹಂತಕ್ಕೆ ಬಂದು ನಿಂತಿದೆ. ಅಣೆಕಟ್ಟುಗಳಿರಬಹುದು, ಹೆದ್ದಾರಿಗಳಿರಬಹುದು, ರಾಷ್ಟ್ರೀಯ ಉದ್ಯಾನಗಳಿರಬಹುದು ಇವೆಲ್ಲವೂ ಇಡೀ ಒಂದು ಜನಾಂಗವನ್ನೇ ನಾಶ ಮಾಡುವ ಯೋಜನೆಗಳಾಗಿ ಕಳೆದ ಕೆಲವು ದಶಕಗಳಿಂದ ಕೆಲಸ ಮಾಡುತ್ತಿವೆ. ನಾನು ಈ ರೀತಿಯ ಅಭಿವೃದ್ಧಿ ವಿರುದ್ಧದ ಚಳುವಳಿಗಳೊಂದಿಗೆ ಕೆಲಸ ಮಾಡುತ್ತಾ ಬಂದಿದ್ದೇನೆ. ನಂತರದ ವರ್ಷಗಳಲ್ಲಿ ಸಾವಯವ ಕೃಷಿ ಆಂದೋಲನದಲ್ಲಿ ಭಾಗವಹಿಸಿದ್ದೇನೆ. ಇಷ್ಟು ವರ್ಷ ಸಾವಯವ ಕೃಷಿ ವಿಚಾರ ಜನರ ಮಧ್ಯದಲ್ಲಿ ಇತ್ತು. ಇಂದು ಸಾವಯವ ಕೃಷಿ ಕೂಡ ಸರ್ಕಾರಿ ಯೋಜನೆ ಆಗಿ ಹೋಗಿದೆ. ನಾಗರಿಕ ಸಮಾಜ ಒಂದು ಹೊಸ ವಿಚಾರವನ್ನು ಎತ್ತಿಕೊಂಡು ಜನರೊಟ್ಟಿಗೆ ಕೆಲಸ ಮಾಡಲು ಪ್ರಾರಂಭಿಸಿದ ಕೆಲವೇ ದಿನದೊಳಗೆ ಸರ್ಕಾರ ಮತ್ತು ಈ ವ್ಯವಸ್ಥೆ ಆ ವಿಚಾರವನ್ನ ತನ್ನ ಚೌಕಟ್ಟಿನೊಳಕ್ಕೆ ಸೇರಿಸಿ ಕೊಳ್ಳುತ್ತಾ ಹೋಗುತ್ತೆ. ಇದು ಬಹಳ ವಿಚಿತ್ರವಾದ ಸಂಗತಿ. ಒಂದು ಸಮುದಾಯ ಒಂದು ವಿಷಯವನ್ನು ನೋಡುವ ಪರಿಗೂ, ಸರ್ಕಾರ ಅದನ್ನು ನೋಡುವ ರೀತಿಗೂ ಬಹಳ ವ್ಯತ್ಯಾಸ ಇದೆ. ಸಮುದಾಯ ಆಧಾರಿತ ಕೃಷಿ ಎಷ್ಟೋ ತಲೆಮಾರುಗಳಿಂದ ನಡೆದುಕೊಂಡು ಬಂದಿದೆ. ಸಮುದಾಯ ಆಧಾರಿತ ಕೃಷಿ ಎಂದೂ ವ್ಯಕ್ತಿ ಕೇಂದ್ರಿತವಾಗಿರಲಿಲ್ಲ. ಅದು ಅನೇಕ ಸಾಮಾಜಿಕ, ಪ್ರಾಕೃತಿಕ ಆಯಾಮಗಳಿಂದ ಮೂಡಿ ಬಂದದ್ದು. ನಮ್ಮ ಜಾತ್ರೆಗಳಿಗೂ, ನಮ್ಮ ಕೃಷಿಗೂ ನೇರವಾದ ಸಂಬಂಧ ಇರುವುದು ನಿಮಗೆ ಗೊತ್ತಿದೆ. ತಾವು ಬೆಳೆದ ಬೀಜವನ್ನು ಜಾತ್ರೆಗೆ ಒಯ್ದು ದೇವರಿಗೆ ಅರ್ಪಿಸಿ, ಅದೇ ರೀತಿ ಬೇರೆ ರೈತರು ತಂದ ಬೀಜಗಳೊಂದಿಗೆ ತಾವು ಒಯ್ದ ಬೀಜವನ್ನ ಬೆರೆಸಿ ಹಿಂದಕ್ಕೆ ತಂದು ಬೆಳೆಯೋ ಪದ್ಧತಿ ಈಗಲೂ ಅನೇಕ ಕಡೆ ಇದೆ. ಇದರಿಂದ ಬೀಜಗಳ ವಿನಿಮಯ ಆಗುತ್ತೆ. ಇದೇ ಬೀಜ ವಿನಿಮಯನ ಸರ್ಕಾರ ಮಾಡೊದಕ್ಕೆ ಹೊರಟರೆ ಎಷ್ಟೊಂದು ದೊಡ್ಡ ವ್ಯವಸ್ಥೆ ಬೇಕು ನೋಡಿ. ಜೆಡಿ ಆಫೀಸ್ ಇರ್ಬೇಕು, ಎ ಡಿ ಆಫೀಸ್ ಇರ್ಬೇಕು, ರೈತ ಸಂಪರ್ಕ ಕೇಂದ್ರ ಇರ್ಬೇಕು ಹೀಗೆ. ಇಷ್ಟೆಲ್ಲಾ ಆದ್ರೂ ಜನರ ಪಾಲ್ಗೊಳ್ಳುವಿಕೆ ಶೂನ್ಯನೆ. ಒಂದು ಕೃಷಿ ವಿಶ್ವವಿದ್ಯಾಲಯ, ಒಂದು ಬೆಳೆಯ ಸಂಶೋಧನೆ ತಗೊಂಡ್ರೆ ಕನಿಷ್ಠ ೨ ಹಂಗಾಮಾದ್ರು ರೈತರ ಹೊಲದಲ್ಲಿ ಬೆಳೆದು, ರೈತ ಸಮುದಾಯ, ಅವರ ಭೂಮಿ ಹೊಸ ತಳಿಗೆ ಹೇಗೆ ಪ್ರತಿಕ್ರಿಯಿಸುತ್ತೆ ಅನ್ನೋದನ್ನ ನೋಡ ಬೇಕಲ್ಲವೆ? ಆದ್ರೆ ಹಾಗೆಲ್ಲಾಕ್ತಿದೆ? ಸಂಶೋಧನಾಲಯಗಳು ಪ್ರತ್ಯೇಕವಾಗಿ ನಡೆಸೋ ಸಂಶೋಧನೆ ರೈತರಿಗೆ ಹೇಗೆ ಪ್ರಸ್ತುತವಾಗುತ್ತೆ ಅನ್ನೋ ಪ್ರಶ್ನೆ ಒಬ್ಬ ನಾಗರಿಕ ಸಮಾಜದ ಸದಸ್ಯಳಾಗಿ ನನ್ನನ್ನು ಸದಾ ಕಾಡುತ್ತೆ. ನಮ್ಮ ಬೆಳೆ ಪದ್ಧತಿಗಳು ಸನ್ನಿವೇಶಾಧಾರಿತವಾಗಿ ನಡೆದು ಬಂದಿರತಕ್ಕಂತಹವು. ನಮ್ಮ ಅನುಭವದ ಪ್ರಕಾರ ವಿಶ್ವವಿದ್ಯಾಲಯದ ತಾಕು ಗಳಲ್ಲಿ



ಮಾಡಿದ ಪ್ರಯೋಗವನ್ನ ಸಾಮಾನ್ಯೀಕರಿಸಿ ಹೇಳೋದು ಅಸಾಧ್ಯವಾದದ್ದು. ಪ್ರತಿಯೊಂದು ಹಳ್ಳಿಯೂ, ಪ್ರತಿಯೊಂದು ಮಣ್ಣು ವಿಭಿನ್ನವಾಗಿರುತ್ತವೆ. ಈ ಆಧುನಿಕ ಸಂಶೋಧನಾ ವ್ಯವಸ್ಥೆ ರೈತರ, ಒಂದು ಸಮುದಾಯದ ಜ್ಞಾನ ವ್ಯವಸ್ಥೆಯನ್ನ ಹಾಳು ಮಾಡುವ ಹುನ್ನಾರವನ್ನ ಹೊಂದಿದೆ ಎಂದು ನನಗೆ ಅನಿಸುತ್ತಿದೆ. ಬದುಕಿಗೆ ಭರವಸೆ, ಮಣ್ಣಿಗೆ ಜೀವಂತಿಕೆಯನ್ನ ಒಂದು ಕೃಷಿ ವ್ಯವಸ್ಥೆ ನೀಡಬೇಕು. ಮೊದಲಿನಿಂದಲೂ ನಡ್ಕೊಂಡು ಬರ್ತಿರೋದು ಹೀಗೆ.ಇವತ್ತು ನಮ್ಮ ಸಂಶೊಧನಾಲಯಗಳು ಪ್ರಯೋಗ ನಡೆಸಿ ಇಡೀ ಕಪ್ಪು ಭೂಮಿಗೆ ಒಂದೇ ಪ್ಯಾಕೇಜ ಆಫ್ ಪ್ರ್ಯಾಕ್ಟೀಸ್ ಅಂ–ದ್ರೆ ಹೇಗೆ? ಅದು ಯಾವ ರೀತಿಯಲ್ಲೂ ಪ್ರಯೋಜನಕ್ಕೆ ಬರ್ತಾ ಇಲ್ಲ. ಆಧುನಿಕ ವಿಜ್ಞಾನದ ಅಹಂಕಾರ ಒಂದೇ ಬೀಸಿನಲ್ಲಿ ಎಲ್ಲಾ ಜ್ಞಾನ ವ್ಯವಸ್ಥೆಯನ್ನೂ ನಾಶ ಮಾಡುತ್ತೆ. ಇದು ನಮ್ಮ ದೇಶದಲ್ಲಿ ಮಾತ್ರ ಅಲ್ಲ, ಇಡೀ ಪ್ರಪಂಚದಲ್ಲಿ ಆದಿವಾಸಿ, ದಲಿತ ಮತ್ತು ಮಹಿಳಾ ಸಂಸ್ಕೃತಿಗಳು ವ್ಯವಸ್ಥಿತವಾಗಿ ನಾಶ ಮಾಡುವ ಹುನ್ನಾರ ನಡೀತಾ ಇದೆ. ಇಂದು ಅಮೇರಿಕಾದ ಮೂಲ ನಿವಾಸಿಗಳು ಹೇಳ ಹೆಸರಿಲ್ಲದೆ ಹೊರಟು ಹೋಗಿದ್ದಾರೆ. ನಮ್ಮ ರೈತ ಸಂಶೋಧನೆಗಳು ಅನುಭವ ಜನ್ಯವಾದದ್ದು. ನಾವು ಅನುಭವದ ಮೂಲದಿಂದ ಬಂದಿರುವ ಅನೇಕ ರೈತರ ಅನುಭವಗಳನ್ನು ದಾಖಲು ಮಾಡಿದ್ದೇವೆ. ಒಬ್ಬ ದಲಿತ ರೈತನ ಎರಡು ಎಕರೆ ಭೂಮಿಯ ಅನುಭವವನ್ನ ನಾವು ದಾಖಲುಮಾಡಿದ್ದೇವೆ. ಆತ ಆ ಭೂಮಿಯನ್ನ ಎಷ್ಟೊಂದು ಪ್ರೀತಿಸಿ ಕೃಷಿ ಮಾಡಿದ್ದಾನೆ ಅಂದರೆ ಹೆಜ್ಜೆ, ಹೆಜ್ಜೆಗೂ ತನ್ನ ಭೂಮಿಯನ್ನ ಸಮೃದ್ಧಗೊಳಿಸುವುದು ಹೇಗೆ ಅಂತ ಆತ ಪ್ರಯೋಗ ಮಾಡಿಕೊಂಡು ಹೋಗಿದ್ದಾನೆ. ಅದರಲ್ಲಿ ಯಶಸ್ವಿಯಾಗಿದ್ದಾನೆ. ಅವನ ಈ ಪ್ರಯೋಗದ ಅನುಭವ ಆಧುನಿಕರಿಗೆ ಯಾವ ಲೆಕ್ಕಕ್ಕೂ ಇಲ್ವಾ? ಹೈಬ್ರೀಡ್ ಬೀಜಗಳು ಬಂದ ಮೇಲೆ ನಮ್ಮ ನಾಟಿ ಬೀಜಗಳೆಲ್ಲಾ ಎಲ್ಲಿಗೆ ಹೋದವು? ಹೈಬ್ರೀಡ್ ಬೀಜ ತರಲೇ ಬೇಕು, ರಾಸಾಯನಿಕ ಗೊಬ್ಬರ ತರಲೇ ಬೇಕು, ಬೆಳೆ ಬೆಳೆಯ ಬೇಕೋಂದ್ರೆ ಇವನ್ನೆಲ್ಲಾ ಮಾಡಲೇ ಬೇಕು. ಎಲ್ಲಿಂದ ಬಂತು ಈ ಅಧಿಕಾರ? ಎಲ್ಲಿಂದ ಬಂತು ಈ ಅಹಂಕಾರ? ಇದಕ್ಕೆ ನಾವೆಷ್ಟು ಜವಾಬ್ದಾರರು? ನಿಮ್ಮ ವಿಚಾರ ಯಾವುದೂ ಸರಿಯಿಲ್ಲ. ನಿಮ್ಮ ಜ್ಞಾನ ವ್ಯವಸ್ಥೆ ವ್ಯವಸ್ಥೆಯೇ ಅಲ್ಲ ಎಂದು ಪದೇ ಪದೇ ಹೇಳಿ ನಮಗೇ ನಮ್ಮ ಬಗ್ಗೆ ಅನುಮಾನ ಬರುವ ಹಾಗೆ ಮಾಡಿ ಮಂಪರು ಬರಿಸಿ ಬಿಟ್ಟಿದ್ದಾರೆ. ಇಂದು ರೈತ ಸಮುದಾಯಕ್ಕೆ ಮಾತ್ರವಲ್ಲ ಎಲ್ಲ ಸಮುದಾಯಗಳಿಗೂ ಮಂಪರು ಕವಿದಿದೆ. ನಮಗೆ ಬಂದಿರುವ ಮಂಪರನ್ನು ಬಡಿದೋಡಿಸಿ ಮತ್ತೆ ನಮ್ಮ ಜ್ಞಾನ ವ್ಯವಸ್ಥೆಯನ್ನ ಹೊರತರಬೇಕಿದೆ. ಅನುಭವ ಮೂಲದ ಜ್ಞಾನ ವ್ಯವಸ್ಥೆ ನಮ್ಮದು. ನಮ್ಮ ಕೃಷಿ ಜ್ಞಾನ ವ್ಯವಸ್ಥೆಗೆ ಮಹಿಳೆಯರು, ದಲಿತರು ಎಲ್ಲರೂ ತಮ್ಮ ಅನುಭವದಿಂದ ಬಂದಂತಹ ಜ್ಞಾನವನ್ನ ಧಾರೆ ಎರೆದಿದ್ದಾರೆ. ಇವೆಲ್ಲವನ್ನೂ ಅರ್ಥ ಮಾಡಿಕೊಳ್ಳದೆ ಸಂಶೋಧನೆ ಮಾಡಲು ಹೋಗುವವರಿಗೆ ನಮ್ಮ ದೊಡ್ಡ ನಮಸ್ಕಾರ. ಮೊನ್ನೆ ಒಬ್ಬ ವಿಜ್ಞಾನಿ ನಮ್ಮ ಕೃಷಿ ಜ್ಞಾನ ಕಿಚನ್ ಗಾರ್ಡನ್ ಕೃಷಿ ಜ್ಞಾನ ಎಂದಿದ್ದಾರೆ. ಪಾರಂಪರಿಕ ಕೃಷಿ ಮಾಡಿ ದಾಖಲೆ ಇಳುವರಿಯನ್ನ ಪಡೆದ ರೈತರು ನಮ್ಮ ಬಳಿ ಇದ್ದಾರೆ. ಆಧುನಿಕ ಜ್ಞಾನ ವ್ಯವಸ್ಥೆಯ ಜನಕ್ಕೆ ತಮ್ಮದೇ ಪರಮ ಸತ್ಯ ಅನ್ನುವ ಅಹಂಕಾರ ಎಲ್ಲಿಂದ ಬರುತ್ತದೋ ನನಗೆ ಗೊತ್ತಿಲ್ಲ. ನಾವು ತುರ್ತಾಗಿ ನಮ್ಮ ಜ್ಞಾನ ವ್ಯವಸ್ಥೆಗೆ ಹಿಡಿದಿರುವ ಮಂಪರನ್ನ ತೆಗೆಯುವ ಕೆಲಸ ಮಾಡಬೇಕಿದೆ.



**೪. ಶೈಲಜಾ ಹಿತ್ತಲಮನಿ**
ಪ್ರಾಧ್ಯಾಪಕರು, ತಳಿ ಅಭಿವೃದ್ಧಿ
ಕೃಷಿ ವಿಶ್ವವಿದ್ಯಾಲಯ,
ಬೆಂಗಳೂರು

ಇವತ್ತು ನಾನು ನಿಮಗೆ ಕಡಿಮೆ ನೀರಿನಲ್ಲಿ ಭತ್ತ ಬೆಳೆಯಲು ನಾವು ಮಾಡಿರುವ ಸಂಶೋಧನೆ ಬಗ್ಗೆ ತಿಳಿಸಲು ಇಚ್ಛಿಸುತ್ತೇನೆ. ಭತ್ತ ವಿಪರೀತ ನೀರು ಬೇಡುವ ಬೆಳೆ. ಇತ್ತೀಚಿನ ವರ್ಷಗಳಲ್ಲಿ ನೀರು ಕಡಿಮೆಯಾಗುತ್ತಾ ಹೋಗುತ್ತಿದೆ. ಹಾಗಂತ ಭತ್ತ ಬೆಳೆಯೋದನ್ನ ನಿಲ್ಲಿಸೋಕೆ ಆಗುವುದಿಲ್ಲ. ಏಕೆಂದರೆ ಪ್ರಪಂಚದಲ್ಲಿ ಶೇಕಡಾ ೪೦ ಜನ ಅನ್ನ ಊಟ ಮಾಡುತ್ತಾರೆ. ನಾವು ಪ್ರಯೋಗ ಮಾಡಿ ಕಡಿಮೆ ನೀರಿನಲ್ಲಿ ಭತ್ತ ಬೆಳೆದು ಮಾಮೂಲಿ ಇಳುವರಿ ಪಡೆಯೋ ಹಾಗೆ ಮಾಡಿದ್ದೇವೆ. ಅದನ್ನ






ನಾನು ಈಗ ನಿಮಗೆ ತಿಳಿಸಲಿದ್ದೇನೆ. ಇದನ್ನ ಎರೋಬಿಕ್ ಪದ್ಧತಿ ಅಂತ ಕರೀತೀವಿ. ಅಂದರೆ ಒಣ ಬೇಸಾಯದಲ್ಲಿ ಭತ್ತ ಬೆಳೆಯೋ ಪದ್ಧತಿ. ಇದರಲ್ಲಿ ಭತ್ತ ಬೇರುಗಳ ಮೂಲಕ ಚೆನ್ನಾಗಿ ಗಾಳಿ ಆಡುವಂತೆ ಮಾಡಲಾಗುತ್ತದೆ. ಈ ಪದ್ಧತಿಯಲ್ಲಿ ಭತ್ತವನ್ನ ಒಟ್ಟಲು ಮಾಡಿ ನಾಟಿ ಮಾಡ ಬೇಕಿಲ್ಲ. ಬದಲಿಗೆ ನೇರವಾಗಿ ರಾಗಿ, ಜೋಳ ಬಿತ್ತುವಂತೆ ಬಿತ್ತಬಹುದು.

ಇದರಲ್ಲಿ ಭೂಮಿಯನ್ನು ಸಿದ್ಧಗೊಳಿಸುವುದೂ ಸುಲಭ. ಇದರಲ್ಲಿ ಒಂದಡಿ ಒಂದಡಿಗೆ ನಾಟಿ ಮಾಡ್ತೀವಿ. ಹೀಗೆ ಅಂತರ ಹೆಚ್ಚು ಇಡೋದರಿಂದ ತೆಂಡೆಗಳು ಜಾಸ್ತಿ ಬರುತ್ತವೆ. ೪೦ ರಿಂದ ೧೦೦ ತೆಂಡೆಗಳು ಬರುತ್ತವೆ. ನೀರು ಅರ್ಧಕರ್ಧ ಉಳಿಯುತ್ತದೆ. ಬೋರವೆಲ್‌ನಲ್ಲಿ ಭತ್ತ ಬೆಳೆಯೋರು ಈ ಕ್ರಮ ಅನುಸರಿಸಿದರೆ ನೀರು ಉಳಿಸಿ, ಉಳಿದ ನೀರಿನಲ್ಲಿ ಬೇರೆ ಬೆಳೆಯನ್ನು ಬೆಳೆಯಬಹುದು. ಈ ಪದ್ಧತಿಯನ್ನು ಬೇಸಿಗೆ ಬೆಳೆಗೂ, ಮಳೆಗಾಲದ ಬೆಳೆಗೂ ಬಳಸಬಹುದು. ಈ ಪದ್ಧತಿಯಲ್ಲಿ ನೀವು ಹೆಚ್ಚು ಕೊಟ್ಟಿಗೆ ಗೊಬ್ಬರ ಬಳಸಿದಷ್ಟೂ ಒಳ್ಳೆಯದು. ನೀವು ಸಾವಯವ ಪದ್ಧತಿಯಲ್ಲೇ ಭತ್ತ ಬೆಳೆಯೋದಾದರೆ ಒಂದು ಎಕರೆಗೆ ಹತ್ತು ಟನ್ನ ಗೊಬ್ಬರ ಬೇಕಾಗುತ್ತೆ. ಈ ಪದ್ಧತಿಯಲ್ಲಿ ರೋಗ ಕೂಡ ಕಡಿಮೆ. ಭೂಮಿಯಲ್ಲಿರುವ ಲಘು ಪೋಶಕಾಂಶಗಳ ಪರೀಕ್ಷೆ ಮಾಡಿ ಕೊರತೆಯಿರುವ ಪೋಶಕಾಂಶವನ್ನ ಕೊಡಬೇಕಾಗುತ್ತದೆ. ಬಿತ್ತಿದ ೧೫ ದಿನದ ಹೊತ್ತಿಗೆ ಸಾಕಷ್ಟು ಕಳೆ ಬಂದಿರುತ್ತದೆ. ಅದನ್ನು ಕೈಯಿಂದ ಇಲ್ಲವೇ ಕೊನೊವೀಡರ್ ಬಳಸಿ ತೆಗಿಬಹುದು. ಇದರಿಂದ ಎರಡು ಲಾಭ. ಕಳೆಯೂ ಹೋಗುತ್ತದೆ. ಹಾಗೆಯೇ ಮಣ್ಣು ಸಡಿಲವಾಗುವುದರಿಂದ ಗಾಳಿಯೂ ಚೆನ್ನಾಗಿ ಆಡುತ್ತದೆ. ಅಂತರ ಬೇಸಾಯ ಚೆನ್ನಾಗಿ ಮಾಡಿದಷ್ಟೂ ಬೆಳೆ ಚೆನ್ನಾಗಿ ಬರುತ್ತದೆ. ಈ ಬೆಳೆಗೆ ನೀರು ನಿಲ್ಲಿಸಬೇಕಿಲ್ಲ. ನೀರು ಹಾಯಿಸಿದರೆ ಸಾಕು.

ಈ ರೀತಿಯ ಬೇಸಾಯನ ಬಹಳ ಹಿಂದಿನಿಂದಲೂ ರೈತರು ಮಾಡುತ್ತಾ ಬರುತ್ತಿದ್ದಾರೆ. ಮೊದಲು ನಾಟಿ ತಳಿಗಳನ್ನು ಬೆಳೆಯುತ್ತಿದ್ದರು. ಇಳುವರಿ ತಂಬಾ ಕಡಿಮೆ ಇರುತ್ತಿತ್ತು. ನಾಟಿ ತಳಿಗಳನ್ನು ಸಂಕರಣಗೊಳಿಸಿ ಒಣ ಬೇಸಾಯಕ್ಕೆ ಹೊಂದಿಕೊಳ್ಳುವಂತಹ ತಳಿಗಳನ್ನು ನಾವು ತಯಾರಿಸಿದ್ದೇವೆ. ಈ ತಳಿಗಳನ್ನು ಅಭಿವೃದ್ಧಿಗೊಳಿಸುವ ಸಮಯದಲ್ಲಿ ಪ್ರಾರಂಭದಿಂದ ಕಡೆಯವರೆಗೂ ರೈತರನ್ನು ತಳಿ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿದ್ದೇವೆ. ನಾವು ಅಭಿವೃದ್ಧಿ ಪಡಿಸಿ ರೈತರಿಗೆ ಬಿಡುಗಡೆ ಮಾಡಿರುವ ಎಂ.ಎಸ್. ೯೪೬ ತಳಿ ೧೧೫ ರಿಂದ ೧೨೦ ದಿನಕ್ಕೆ ಕಟಾವಿಗೆ ಬಂದರೆ, ಇನ್ನೊಂದು ೨೬ ಅನ್ನೋ ತಳಿ ೧೧೫ ರಿಂದ ೧೨೫ ದಿನಕ್ಕೆ ಕಟಾವಿಗೆ ಬರುತ್ತೆ. ಈ ತಳಿಗಳನ್ನು ಎಲ್ಲ ರೀತಿಯ ಮಣ್ಣುಗಳಲ್ಲೂ ಬೆಳೆಯಬಹುದು. ಒಣ ಬೇಸಾಯದಲ್ಲಿ ಭತ್ತ ಬೆಳೆಯುವಾಗ ರೋಗ ಬಾಧೆ, ಕೀಟ ಬಾಧೆ ಕಡಿಮೆ. ಏಕೆ–ಂದರೆ ಗಿಡದ ಸುತ್ತಲೆಲ್ಲಾ ಒಣ ಹವೆ ಇರುವುದು ಇದಕ್ಕೆ ಮುಖ್ಯ ಕಾರಣ. ಈ ವಿಧಾನದಲ್ಲಿ ಭತ್ತ ಬೆಳೆಯುವುದರಿಂದ ಶೇ ೩೦ ರಿಂದ ೭೦ ರವರೆಗೂ ನೀರು ಉಳಿತಾಯ ಆಗುತ್ತೆ.

ಈ ಪದ್ಧತಿಯಿಂದ ಮಾಮೂಲಿ ಪದ್ಧತಿಗಿಂತ ಶೇ ೩೦ ರಷ್ಟು ಹೆಚ್ಚು ಲಾಭ ಆಗುತ್ತೆ. ಈ ತಳಿಯನ್ನ ಸಾಕಷ್ಟು ಪ್ರದೇಶದ ರೈತರಿಗೆ ನೀಡಿದ್ದೇವೆ. ಕೃಷಿ ಮೇಳದಲ್ಲಿ ಇದರ ಬೀಜವನ್ನ ರೈತರಿಗೆ ಹಂಚಿದ್ದೇವೆ. ನಿಜ ಹೇಳ ಬೇಕೆಂದರೆ ಬೇಡಿಕೆ ಎಷ್ಟಿದೆ ಅಂದರೆ ನಮಗೆ ಬೀಜಪೂರೈಸಲು ಸಾಧ್ಯ ಆಗಲಿಲ್ಲ.

ಸಸ್ಯ ತಳಿ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ನಮ್ಮ ಮುಖ್ಯ ಕೆಲಸ ಅಂದರೆ ಹೊಸ,ಹೊಸ ತಳಿಗಳನ್ನ ಅಭಿವೃದ್ಧಿ ಪಡಿಸುವುದು. ತಳಿಗಳಲ್ಲಿ ಇರುವಂತಹ ಸಮಸ್ಯೆಗಳನ್ನ ಬಗೆಹರಿಸುವುದು. ರೈತರು ತಮಗೆ ತಳಿಗಳಿಗೆ ಸಂಬಂಧಿಸಿದಂತೆ ಆಗುತ್ತಿರುವ ಸಮಸ್ಯೆಗಳನ್ನ ನಮಗೆ ಹೇಳಿದರೆ ನಾವು ಅದನ್ನ ಬಗೆಹರಿಸುವ ಪ್ರಯತ್ನ ಮಾಡುತ್ತೀವಿ. ಜೊತೆಗೆ ರೈತರ ಸಹಭಾಗಿತ್ವದಲ್ಲಿ ತಳಿ ಅಭಿವೃದ್ಧಿ ಮಾಡುವ ಯೋಜನೆಗಳು ಇವೆ. ರೈತರು ಹಾಗೂ ವಿಜ್ಞಾನಿಗಳು ಒಟ್ಟಿಗೆ ಸೇರಿ ಸಂಶೋಧನೆ ಮಾಡಿದರೇನೇ ಅದು ಯಶಸ್ವಿಯಾಗೋದು.

**೫. ಡಾ.ವಾಸವಿ**
ಪ್ರಾಧ್ಯಾಪಕರು
ನ್ಯಾಶನಲ್ ಇನ್ಸಟಿಟ್ಯೂಟ್
ಆಫ್ ಅಡ್ವಾನ್ಸ ಸ್ಟಡೀಸ್
<u>ಬೆಂಗಳೂರು</u>



ನಾನು ನನ್ನ ವಿಚಾರ ಮಂಡನೆಯನ್ನ ಮೂರು ಭಾಗ ಮಾಡಿಕೊಂಡಿದ್ದೇನೆ. ಮೊದಲ ಭಾಗದಲ್ಲಿ ನಾನು ೨೦ವರ್ಷಗಳಿಂದ ನನ್ನ ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರೋ ಹಳ್ಳಿ ಬಿಜಾಪುರ ಜಿಲ್ಲೆಯಲ್ಲಿರುವ ಮದಭಾವಿ ಬಗ್ಗೆ ಹೇಳುತ್ತೇನೆ. ಎರಡನೆಯ ಭಾಗದಲ್ಲಿ ನಮ್ಮ ದೇಶದಲ್ಲಿ ರೈತರ ಸ್ಥಿತಿಗತಿ ಏನು ? ಅವರ ಸಂಕಟಗಳೇನು ? ಅವರ ಕಷ್ಟಗಳೇನು ವಿವರಿಸ್ತೀನಿ. ಮೂರನೆಯ ಭಾಗದಲ್ಲಿ ಕೃಷಿ ವ್ಯವಸ್ಥೆಯನ್ನ ಪ್ರಜಾ ತಾಂತ್ರೀಕರಣಗೊಳಿಸುವುದು, ಸಮಸ್ಯೆಯನ್ನ ಅರ್ಥ ಮಾಡಿಕೊಳ್ಳುವ ಬಗೆ, ಅದರ ಪರಿಹಾರದ ಬಗ್ಗೆ ಚರ್ಚೆ ಮಾಡಲಿದ್ದೇನೆ.

೧೯೮೯ ರಲ್ಲಿ ೧ ವರ್ಷ ೬ ತಿಂಗಳ ಕಾಲ ಬಿಜಾಪುರ ಜಿಲ್ಲೆಯ ಮದಭಾವಿ ಅನ್ನೊ ಹಳ್ಳಿಗೆ ಹೋಗಿ ಇದ್ದೆ. ಅವಾಗ ಆ ಹಳ್ಳಿಯಲ್ಲಿ ೫,೫೦೦ ಕುಟುಂಬಗಳಿದ್ದವು. ಎಲ್ಲಾ ಜಾತಿಯವರು, ಎಲ್ಲಾ ವರ್ಗದವರು ಅಲ್ಲಿ ಇದ್ದರು. ಮೂರು ರೀತಿಯ ಮಣ್ಣಿನ ಹೊಲಗಳು, ಎರಡು ರೀತಿಯ ಕೃಷಿ ಪದ್ಧತಿ ಅಲ್ಲಿ ಇತ್ತು. ಸರ್ಕಾರದ ಇಲಖೆಗಳು ಆಗ ತಾನೆ ಸುಧಾರಿತ/ ಹೈಬ್ರೀಡ್ ತಳಿಯ ಬೀಜಗಳನ್ನ ರೈತರಿಗೆ ಪರಿಚಯಿಸುತ್ತಿದ್ದರು. ರೈತರು ಸುಧಾರಿತ ಜೋಳ, ಗೋಧಿ, ಸೂರ್ಯಕಾಂತಿಯನ್ನ ಆಗತಾನೆ ಅಭ್ಯಾಸ ಮಾಡಿಕೊಳ್ಳುತ್ತಿದ್ದರು. ನಾನು ಬರ್ತಾಯಿರೋ ಸರ್ಕಾರದ ಹೊಸ ಕೃಷಿ ವಿಧಾನ ರೈತರ ಮೇಲೆ ಹೇಗೆ ಪ್ರಭಾವ ಬೀರುತ್ತಿದೆ ಎಂಬುದನ್ನು ಅಧ್ಯಯನ ಮಾಡಲು ಅಲ್ಲಿ ಇದ್ದೆ.

ಒಂದು ಕಪ್ಪು ಮಣ್ಣಿನ ಎರೆ ಭೂಮಿಯಾದರೆ, ಇನ್ನೊಂದು ಕೆಂಪು ಮಣ್ಣಿನ ಮಡ್ಡಿ ಭೂಮಿ ಮತ್ತು ಇನ್ನೊಂದು ಕಲ್ಲು ಭೂಮಿ. ಮಡ್ಡಿ ಭೂಮಿ ಇರುವವರು ತೋಟ ಅಂತ ಮಾಡಿಕೊಂಡಿದ್ದರು.ನೀರಾವರಿಗೆ ಬಾವಿ ತೋಡಿದ್ದರು. ಬಹಳ ಜನ ದಲಿತರು ಇದ್ದರು. ಅವರಿಗೆ ಯಾರಿಗೂ ಕೃಷಿ ಭೂಮಿ ಇರಲಿಲ್ಲ. ಅವರು ಬೇರೆಯವರ ಹೊಲದಲ್ಲಿ ದುಡಿಯುತ್ತಿದ್ದರು. ಬರಗಾಲ ಬಿದ್ದ ವರ್ಷದಲ್ಲಿ ಕೂಲಿಕಾರರು ವಲಸೆ ಹೋಗಿ ಬೇರೆ ಕಡೆ ದುಡಿಯುತ್ತಿದ್ದರು. ಮಡ್ಡಿ ಭೂಮಿ ಹೊಂದಿದ್ದ ಹೆಚ್ಚಿನ ರೈತರು ಸಣ್ಣ ರೈತರೇ ಆಗಿದ್ದರು. ಇಡೀ ಹಳ್ಳಿಯಲ್ಲಿ ಆರು ಕುಟುಂಬಗಳಿಗೆ ಮಾತ್ರ ತೋಟ ಇತ್ತು. ಬಾವಿಗೆ ವಿದ್ಯುತ್ ಪಂಪ್ ಸೆಟ್ ಇಟ್ಟು ಹೊಸ ತಳಿಯ ಸೂರ್ಯಕಾಂತಿ, ಜೋಳ, ಗೋಧಿ, ಬಾಳೆ ಬೆಳೆಯೋಕೆ ಪ್ರಾರಂಭಿಸಿದ್ದರು. ಆ ಸಂದರ್ಭದಲ್ಲಿ ನಾನು ಅಲ್ಲಿ ಒಂದೂವರೆ ವರ್ಷ ಇದ್ದು ಎಲ್ಲವನ್ನೂ ದಾಖಲೆಗೊಳಿಸಿದೆ. ಆ ನಂತರ ಪ್ರತಿ ವರ್ಷ ಹೋಗಿ ನನ್ನ ದಾಖಲೆಗಳಿಗೆ ಹೊಸ ಮಾಹಿತಿಯನ್ನು ಸೇರಿಸುತ್ತಾ ಹೋದೆ. ನಾನು ನೋಡಿದ್ದರಲ್ಲಿ ಏನು ಬದಲಾವಣೆ ಆಯಿತು ಅಂದರೆ ಅವರಿಗೆ ಆಧುನಿಕ ಕೃಷಿಯನ್ನು ಪ್ರಾರಂಭಿಸಿದ ೬–೭ ವರ್ಷ ಮಾತ್ರ ಆದಾಯ ಚೆನ್ನಾಗಿ ಬಂತು. ಚೆನ್ನಾಗಿ ನೀರು ಬಂತು. ಬೆಳೆದದ್ದನ್ನು ಮಾರ್ಕೆಟ್ ನಲ್ಲಿ ಮಾರಿಕೊಂಡು ಚೆನ್ನಾಗಿದ್ದರು. ಮುಂದಿನ ವರ್ಷಗಳಲ್ಲಿ ನಿಧಾನವಾಗಿ ನೀರು ಕಮ್ಮಿ ಆಗ್ತಾ ಹೋಯಿತು. ಕರೆಂಟ್ ಖೋತಾ ಆಯಿತು. ಬೆಳೆದದ್ದಕ್ಕೆ ಸರಿಯಾಗಿ ಮಾರುಕಟ್ಟೆ ಇಲ್ಲ, ಹೀಗೆ ನಿಧಾನವಾಗಿ ಸಮಸ್ಯೆಗಳ ಸುಳಿಯಲ್ಲಿ ಸಿಲುಕಲು ಪ್ರಾರಂಭಿಸಿದರು. ಸಾಲದ ಸುಳಿಯಲ್ಲಿ ಸಿಲುಕತೊಡಗಿದರು. ಈ ವರ್ಷ ನಾನು ಹೋದಾಗ ಆರು ಕುಟುಂಬಗಳಲ್ಲಿ ಎರಡು ಕುಟುಂಬಗಳು ಮಾತ್ರ ತೋಟ






ಮಾಡುತ್ತಾ ಇವೆ. ಅದರಲ್ಲಿ ಒಬ್ಬರು ದ್ರಾಕ್ಷಿ ಬೆಳೆದು ಕಂಪನಿಗೆ ಕಳಿಸುತ್ತಿದ್ದಾರೆ. ಇನ್ನೊಬ್ಬರು ಬರೀ ಗೋಧಿ ಸ್ವಲ್ಪ ಸೂರ್ಯಪಾನ ಬೆಳಿತಾ ಇದ್ದಾರೆ. ಇನ್ನು ನಾಲ್ಕು ಜನ ಸಾಲ ಹೆಚ್ಚಾದ್ದರಿಂದ ತೋಟ ನಿಲ್ಲಿಸಿ ಬಿಟ್ಟಿದ್ದಾರೆ. ವ್ಯವಸಾಯದಲ್ಲಿ ಯಾವ ಲಾಭಾನೂ ಇಲ್ಲ ಅನ್ನೋ ತೀರ್ಮಾನಕ್ಕೆ ಅವರೆಲ್ಲರೂ ಬಂದಿದ್ದಾರೆ. ಇನ್ನು ಎರೆ ಭೂಮಿ ಇರುವ ಜನ. ಅವರ ಮಕ್ಕಳು ಓದಿ ಕೃಷಿಯಲ್ಲಿ ಆಸಕ್ತಿ ಕಳಕೊಂಡಿದಾರೆ. ಕೆಲಸ ಹುಡುಕುತ್ತಾ ಇದ್ದಾರೆ. ಸುಮಾರು ಜನ ಮಕ್ಕಳಿಗೆ ಕೆಲಸ ಕೊಡಿಸಲು ತಮ್ಮ ಜಮೀನನ್ನ ಮಾರಿದಾರೆ. ಇನ್ನು ಕೆಲವರು ತಮ್ಮ ಭೂಮಿಯನ್ನ ಹಾಗೇ ಪಾಳು ಬಿಟ್ಟಿದ್ದಾ–ರೆ. ತುಂಬಾ ಸಣ್ಣ ರೈತರು ಬೇಸಾಯ ಮಾಡೋಕ್ಕಿಂತ ಹೊರಗೆ ಹೋಗಿ ದುಡಿಯೋದು ಸುಲಭ ಅಂತಿದಾರೆ. ಭೂಮಿ ಇಲ್ಲದವರು ಸ್ವಲ್ಪ ಜನ ಮುಂಬೈ ಕಡೆಗೆ ಹೋಗಿದಾರೆ. ಸ್ವಲ್ಪ ದುಡ್ಡು ಮಾಡಿಕೊಂಡು ಬಂದು ಮನೆ–ಗಿನೆ ಕಟ್ಟಿದ್ದಾರೆ. ಹಳ್ಳಿಯವರೊಂದಿಗೆ ಮಾತನಾಡುವಾಗ ನನಗೆ ಅರ್ಥವಾದದ್ದು ಏನೆಂದರೆ, ರೈತರು ಇಂದು ಸುಮಾರು ಐದು ತರಹದ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ.



ಒಂದು ಬಂಡವಾಳದ ಸಮಸ್ಯೆ. ಇತ್ತೀಚಿನ ವರ್ಷಗಳಲ್ಲಿ ನಬಾರ್ಡ ಮೂಲಕ ಕೃಷಿ ಕ್ಷೇತ್ರಕ್ಕೆ ದೊರೆಯುತ್ತಿದ್ದ ಸಾಲ ಕಡಿಮೆಯಾಗಿದೆ. ಹಾಗಾಗಿ ಬ್ಯಾಂಕ್ ಗಳ ಮೂಲಕ ಸಾಲ ದೊರೆಯದ ರೈತರು ಖಾಸಗಿ ಸಾಲ ಕೊಡುವವರ ಬಳಿ ಹೆಚ್ಚಿನ ಬಡ್ಡಿಗೆ ಸಾಲ ತೆಗೆದು ಕೊಂಡು ಸಮಸ್ಯೆಯಲ್ಲಿ ಸಿಲುಕುತ್ತಾರೆ. ಇನ್ನೊಂದು ಮಾರುಕಟ್ಟೆ ಸಮಸ್ಯೆ. ಮೂರನೆಯದು ಮಾಹಿತಿ ಹಾಗೂ ತಂತ್ರಜ್ಞಾನದ ಕೊರತೆ, ನಾಲ್ಕನೆಯದು ಬದಲಾಗುತ್ತಿರುವ ವಾತಾವರಣದ ಸಮಸ್ಯೆ, ಕಡೆಯದು ಯೋಗ್ಯವಾದ ಒಳಸುರಿವುಗಳು ರೈತರಿಗೆ ಸಿಗದೇ ಇರುವುದು. ಅಂದರೆ ಅವರಿಗೆ ಸಿಗೋ ಗೊಬ್ಬರ, ಬೀಜ, ಕ್ರಿಮಿನಾಶಕ ಎಲ್ಲ ಕಳಪೆ ಗುಣ ಮಟ್ಟದ್ದು. ಜೊತೆಗೆ ಅವುಗಳ ಬೆಲೆಯಂತೂ ವಿಪರೀತ ಹೆಚ್ಚಿದೆ. ಹೀಗೆ ಇವೆಲ್ಲವೂ ರೈತರಿಗೆ ದೊಡ್ಡ ಸಮಸ್ಯೆಯಾಗಿವೆ. ನಿಮಗೆ ಗೊತ್ತಿರುವ ಹಾಗೆ ೧೯೯೭ ರಿಂದ ಬಹಳ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣ ಏನೆಂದರೆ ಕೃಷಿ ತನ್ನ ಅರ್ಥವನ್ನ ಕಳೆದು ಕೊಳ್ಳುತ್ತಿರುವುದು ಮುಖ್ಯ ಕಾರಣ. ಅನನುಭವಿಗಳಾದ ಹೊಸ ತಲೆಮಾರಿನ ರೈತರು ಕಷ್ಟದ ಜಾಲಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರ ನೀಡಿರುವ ಅಂಕಿ ಅಂಶದ ಪ್ರಕಾರವೇ ೧೯೯೭ ರಿಂದ ೨೦೦೬ರವರಗೆ ೧, ೭೭,೫೧೬ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹವಾಮಾನ ವೈಪರೀತ್ಯ ಇವಾಗ ಮಾತ್ರ ಇಲ್ಲ. ಇದು ಸತತವಾಗಿ ಕೃಷಿ ಚರಿತ್ರೆಯಲ್ಲಿ ಇದ್ದೇ ಇದೆ. ಆದರೆ ಎಲ್ಲೂ ರೈತರು ಆತ್ಮಹತ್ಯೆಗೆ ಶರಣಾಗೋದು, ಕೃಷಿಯನ್ನೇ ಬಿಟ್ಟು ಬಿಡಲು ಯೋಚಿಸೋದು ಹಿಂದೆ ಎಂದೂ ಆಗಿಲ್ಲ. ಇದರಿಂದ ಕೃಷಿ ಕಸುಬಿನಲ್ಲಿ,ಹಳ್ಳಿಬದುಕಿನಲ್ಲಿ ಏನೋ ದೊಡ್ಡ ತೊಂದರೆ ಇದೆ ಅನ್ನೋದನ್ನ ನಾವು ಅರ್ಥ ಮಾಡಿಕೊಳ್ಳಬೇಕಿದೆ. ನಮ್ಮ ಕೃಷಿಯಲ್ಲಿ ತೊಂದರೆ ಇದೆ ಅಂದರೆ ಬರೀ

ಉತ್ಪತ್ತಿ ತೆಗೆಯೋದರಲ್ಲಿ ತೊಂದರೆ ಇದೆ ಅಂತ ನಾವು ಅರ್ಥ ಮಾಡಿಕೋಬಾರದು.ಅದಕ್ಕಿರೋ ಸಾಮಾಜಿಕ ಆಯಾಮವನ್ನು ನೋಡಬೇಕು. ಈ ದೇಶದ ಹೆಚ್ಚಿನ ದಲಿತರಿಗೆ ಭೂಮಿ ಇಲ್ಲ. ಬುಡಕಟ್ಟು ಜನಕ್ಕೆ ಭೂಮಿ ಇಲ್ಲ. ಶೇ ೬೯ ಜನ ರೈತರ ಬಳಿ ಸರಾಸರಿ ಒಂದೂವರೆ ಹೆಕ್ಟೇರಿನಷ್ಟು ಭೂಮಿ ಇದೆ. ಇದೂ ಕೂಡ ಬೆಳೆ ತೆಗೆಯಲು ಸಮಸ್ಯೆಯಾಗಿದೆ. ಸರ್ಕಾರದ ಇನ್ನೊಂದು ಮಾಹಿತಿ ಪ್ರಕಾರ ಹಳ್ಳಿಗಾಡಿನಲ್ಲಿರುವ ಶೇ ೪೦ ಜನಕ್ಕೆ ಇಂದು ವ್ಯವಸಾಯ ಮಾಡಲು ಇಷ್ಟ ಇಲ್ಲವಂತೆ. ಅವರೆಲ್ಲರೂ ತಮ್ಮ ಮಕ್ಕಳನ್ನು ಓದಿಸಿ ಬೇರೆ ವೃತ್ತಿಗೆ ಕಳುಹಿಸಲು ನೋಡುತ್ತಿದ್ದಾರೆ. ಇನ್ನು ದೊಡ್ಡ ಸಮಸ್ಯೆ ಅಂದರೆ ಕೃಷಿ ಭೂಮಿ ರಿಯಲ್ ಎಸ್ಟೇಟ್ ಆಗಿ ಬದಲಾಗುತ್ತಿರುವುದು. ನಮ್ಮ ಯೋಜನ ಆಯೋಗ ಕೂಡ ಶೇ ೨೦ – ೩೦ ಜನ ಕೃಷಿಯಲ್ಲಿ ಇರಲಿ, ಬೇರೆಯವರು ಬೇರೆ ಉದ್ಯೋಗ ಹುಡುಕಲಿ ಅಂತಾ ಇದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕೃಷಿಯ ಸ್ಥಿತಿಗತಿ ಏನು ಅಂತ ಕೂಡ ನೋಡಬೇಕು. ಕೃಷಿ ಸಂಶೋಧನೆ ಒಂದೇ ಅಲ್ಲ, ಕೃಷಿ ಉಳಿಸಲು ಹೊಸ ದಾರಿಗಳನ್ನೂ ಹುಡುಕಬೇಕಿದೆ. ಒಕ್ಕಲುತನ ಅಂದರೆ ಭೂಮಿಯಿಂದ ಉತ್ಪನ್ನ ತೆಗೆಯೋದು ಅನ್ನೋ ವಿಚಾರಕ್ಕೆ ನಾವು ಬಂದು ನಿಂತಿದ್ದೇವೆ. ಆದರೆ ಇಂದು ನಾವು ಅದಕ್ಕೆ ವ್ಯಾಪಕವಾದ ಅರ್ಥ ಹುಡುಕಬೇಕಿದೆ. ಸಾಮಾಜಿಕ ಜವಾಬ್ದಾರಿಗಳನ್ನು ಚರ್ಚಿಸಬೇಕಿದೆ. ಕೃಷಿ ಪದ್ಧತಿಯ ಮೂಲಕ ದೇಶದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನೂ ನಾವು ನೋಡುವ ರೀತಿ ಕಲಿಯಬೇಕಿದೆ. ನಾವು ಮಾದರಿಯಾಗಿ ತೆಗೆದುಕೊಂಡ ಹಸಿರು ಕ್ರಾಂತಿ ವಿಚಾರ ಪಶ್ಚಿಮದಿಂದ ಬಂದದ್ದು. ಅದು ಯಶಸ್ವಿಯಾದ ಕಡೆ ಜನಸಂಖ್ಯೆ ಕಡಿಮೆ ಇದೆ. ಬಂಡವಾಳ ಹೆಚ್ಚು ಇದೆ. ನಮ್ಮ ದೇಶದಲ್ಲಿ ಜನಸಂಖ್ಯೆ ಜಾಸ್ತಿಯಿದೆ, ಬಂಡವಾಳ ಕಡಿಮೆ ಇದೆ, ತಂತ್ರಜ್ಞಾನ ಕಡಿಮೆ ಇದೆ ಹಾಗಾಗಿ ಈ ಮಾದರಿಯಲ್ಲೇ ದೊಡ್ಡ ಸಮಸ್ಯೆಯಿದೆ. ಇಲ್ಲಿಯ ಪರಿಸರಕ್ಕೆ, ಸ್ಥಳೀಯ ಪರಿಸರಕ್ಕೆ ಹೊಂದಿಕೊಳ್ಳುವ ಯುಕ್ತ ತಂತ್ರಜ್ಞಾನಗಳ ಬಗ್ಗೆ ಯೋಚಿಸಬೇಕಿದೆ. ನಾವು ಹೊಸ ತಂತ್ರಜ್ಞಾನಗಳನ್ನು ತರುವಾಗ ಈ ತಂತ್ರಜ್ಞಾನ ಪರಿಸರದ ಮೇಲೆ ಏನು ಪ್ರಭಾವ ಬೀರುತ್ತೆ, ನಮ್ಮ ಮತ್ತು ನಮ್ಮ ರಾಸುಗಳ ಮೇಲೆ ಏನು ಪರಿಣಾಮ ಬೀರುತ್ತೆ ಮತ್ತು ಈ ತಂತ್ರಜ್ಞಾನದಿಂದ ಫಾಯಿದೆ ಯಾರಿಗೆ ಅನ್ನೋದನ್ನ ನೋಡಬೇಕು. ಸಮುದಾಯದ ಅಗತ್ಯ ಮತ್ತು ಬೇಡಿಕೆಗಳನ್ನು ನೋಡಿ ತಂತ್ರಜ್ಞಾನದ ಬಗ್ಗೆ ತೀರ್ಮಾನಿಸ ಬೇಕು. ನಮ್ಮ ಯೋಜನೆಗಳು ಸಮುದಾಯದಿಂದ ದೆಹಲಿಗೆ ಹೋಗಬೇಕು. ದೆಹಲಿಯಿಂದ ಸಮುದಾಯಕ್ಕೆ ಅಲ್ಲ. ಕೃಷಿಯನ್ನ ಕೇವಲ ಉತ್ಪನ್ನದ ಸಮಸ್ಯೆ ಎಂದು ನೋಡದೆ ಸಮಗ್ರವಾಗಿ ನೋಡೋದು ಸಾಧ್ಯವಾಗಬೇಕು. ಆಗ ಏನಾದರೂ ಉತ್ತರ ಹೊಳಿಯಬಹುದು.

**೬. ಡಾ॥ ಶರಣಬಸವೇಶ್ವರ ಅಂಗಡಿ**

ಸಂಶೋಧನಾ ಮುಖ್ಯಸ್ಥರು
ಟ್ರಾಪಿಕಲ್ ಏಷ್ಯಾ ಪೆಸಿಫಿಕ್
ನನ್ಹೆಮ್ಸ್ ಇಂಡಿಯಾ ಲಿ.,
<u>ಬೆಂಗಳೂರು</u>



ನಾನೊಂದು ಖಾಸಗಿ ಬೀಜದ ಕಂಪನಿಗೆ ಕೆಲಸ ಮಾಡುತ್ತಿದ್ದೇನೆ. ಇದಕ್ಕೆ ಮೊದಲು ಭಾರತೀಯ ತೋಟಗಾರಿಕಾ ಸಂಶೋಧನಾ ಕೇಂದ್ರದಲ್ಲಿ ವಿಜ್ಞಾನಿಯಾಗಿದ್ದೆ. ನಾವು ರೈತರ ಅಗತ್ಯಗಳನ್ನು ನೋಡಿ ಸಂಶೋಧನೆ ಮಾಡುತ್ತೀವಿ. ಬೀಜಗಳನ್ನ ಸಂಶೋಧನೆ ಮಾಡಿ, ಹೊಸ ಗುಣಗಳನ್ನು ಅದರಲ್ಲಿ ಸೇರಿಸಿ, ಅದನ್ನು ರೈತರಿಂದಲೇ ಉತ್ಪಾದಿಸಿ ಮತ್ತೆ ರೈತರಿಗೆ ಮಾರಾಟ ಮಾಡುತ್ತೇವೆ. ನಾನು ಬಹಳ ವರ್ಷಗಳ ಕಾಲ ಸರ್ಕಾರಿ ಸಂಶೋಧನ ಕೇಂದ್ರಗಳಲ್ಲಿ ಕೆಲಸ ಮಾಡಿದವನು. ಆನಂತರ ಖಾಸಗಿ ಕಂಪನಿಗಳು ಹೇಗೆ ಕೆಲಸ ಮಾಡುತ್ತವೆ ನೋಡೋಣ ಎಂದು ಖಾಸಗಿ ಕಂಪನಿ ಸೇರಿದವನು. ನಾನು ಕೂಡ ರೈತ ಕುಟುಂಬದಿಂದ ಬಂದವನು. ಈಗ ಏನಾಗಿದೆ ಅಂದರೆ ಬಹಳ ಜನ ಖಾಸಗಿ ಅಂದರೆ ಅನುಮಾನದಿಂದ ನೋಡೋ ಸ್ಥಿತಿ ನಿರ್ಮಾಣ ಆಗಿ ಹೋಗಿದೆ. ಖಾಸಗಿಯವರು






ಏನೇ ಮಾಡಿದರು ಲಾಭಕ್ಕಾಗಿ ಮಾಡೋದು ಅವರಿಗೆ ರೈತರ ಹಿತದಲ್ಲಿ ಆಸಕ್ತಿಯಿಲ್ಲ ಅನ್ನೋ ಮಾತು ಕೂಡ ಇದೆ. ವಾಸ್ತವದಲ್ಲಿ ಏನೆಂದರೆ ನಮಗೆ ಖಾಸಗಿ ಸಂಸ್ಥೆಯವರಿಗೆ ಸರ್ಕಾರದಿಂದ ಯಾವುದೇ ಧನ ಸಹಾಯ ಇರುವುದಿಲ್ಲ. ನಾವು ಹೊಸ ತಳಿಯನ್ನ ತಯಾರು ಮಾಡಿ ಅದನ್ನ ಮಾರಿ ಅದರಿಂದ ಕಂಪನಿ ನಡೆಸುತ್ತೇವೆ. ನಾನು ೧೬ ವರ್ಷದಿಂದ ಕೆಲಸ ಮಾಡುತ್ತಿರುವ ಈ ಕಂಪನಿ ಬಹು ರಾಷ್ಟ್ರೀಯ ಕಂಪನಿ. ಆದರೆ ಈ ಕಂಪನಿಯಲ್ಲಿ ಕೆಲಸ ಮಾಡುತ್ತಿರುವವರೆಲ್ಲರೂ ಭಾರತೀಯರೆ. ನಮ್ಮ ಕಂಪನಿಯ ಸಂಶೋಧನಾ ಕೆಲಸ ಬೇರೆ ದೇಶಗಳಲ್ಲೂ ನಡೆಯುತ್ತಾಯಿದೆ. ದಕ್ಷಿಣ ಅಮೇರಿಕಾ, ಬ್ರೆಜಿಲ್, ಚಿಲಿ, ಮೆಕ್ಸಿಕೊ, ಕ್ಯಾಲಿಫೋರ್ನಿಯಾದಲ್ಲಿ ನಮ್ಮ ಕೇಂದ್ರಗಳಿವೆ. ಇದರಿಂದ ಏನಾಗುತ್ತಿದೆ ಎಂದರೆ ನಮ್ಮ ದೇಶದಲ್ಲಿ ಮುಖ್ಯವಾಗಿ ನಾವು ಕರ್ನಾಟಕದಲ್ಲಿರುವುದರಿಂದ ಕರ್ನಾಟಕದ ರೈತರಿಗೆ ಅನುಕೂಲ ಆಗುವ ಹಾಗೆ ಬೀಜಕ್ಕೆ ಬೇಕಾದ ಒಳ್ಳೆಯ ಗುಣಗಳನ್ನ ಹುಡುಕಿ ಅದಕ್ಕೆ ಸೇರಿಸಲು ಅನುಕೂಲವಾಗಿದೆ. ನಾವು ತಳಿ ಅಭಿವೃದ್ಧಿಗೊಳಿಸಿ, ಪರೀಕ್ಷೆ ಮಾಡಿ ಅದು ಈ ನೆಲದಲ್ಲಿ ಚೆನ್ನಾಗಿ ಬೆಳೆಯುತ್ತದೆ ಎಂಬುದನ್ನು ಖಾತ್ರಿ ಮಾಡಿ ಕೊಂಡು ಆ ನಂತರ ರೈತರಿಗೆ ಬೆಳೆಸಲು ಕೊಡುತ್ತೇವೆ. ಕೆಲವು ಸಲ ರೈತರು ತಮಗೆ ಬೇಕಾದ ಗುಣದ ತಳಿಯ ಬಗ್ಗೆ ಹೇಳುತ್ತಾರೆ. ನಾವು ಸಂಶೋಧನೆ ಮಾಡಿ ಅವರ ಅಗತ್ಯಕ್ಕೆ ತಕ್ಕ ತಳಿ ಅಭಿವೃದ್ಧಿಗೊಳಿಸಿ ಕೊಡುತ್ತೇವೆ.

ನಮ್ಮ ಕಂಪನಿಯವರು 'ಮೋಹಿನಿ' ಅಂತ ಒಂದು ಬದನೆ ತಳಿಯನ್ನು ಅಭಿವೃದ್ಧಿಗೊಳಿಸಿದ್ದೇವೆ. ಹಾಗೆಯೇ 'ಲಕ್ಷ್ಮಿ' ಅನ್ನೋ ತಳಿಕೂಡ ಅಭಿವೃದ್ಧಿಗೊಳಿಸಿದ್ದೇವೆ. ಇದನ್ನ ಬಹಳ ಜನ ರೈತರು ಬೆಳೆದು ಲಾಭ ಪಡೆದುಕೊಂಡಿದ್ದಾರೆ. ನಾವು ಎಲ್ಲಿಂದಲೋ ಬೀಜ ತಂದು ರೈತರಿಗೆ ಕೊಡುವುದಕ್ಕಿಂತ ಅವರು ಬೆಳೆಯುತ್ತಿರುವ ತಳಿಯನ್ನೆ ಅಭಿವೃದ್ಧಿಗೊಳಿಸುವುದು ಸೂಕ್ತ ಅಂತ ನಾವು ಅರ್ಥಮಾಡಿಕೊಂಡಿದ್ದೇವೆ, ರೋಗಗಳಿಂದ ಒದ್ದಾಡುತ್ತಿರುವ ಬ್ಯಾಡಗಿ ಮೆಣಸಿನಕಾಯಿ ಮೇಲೆ ಸಂಶೋಧನೆ ಮಾಡಿ ರೋಗ ನಿರೋಧಕ ಶಕ್ತಿಯುಳ್ಳ 'ದೇವನೂರು ಡಿಲಕ್ಸ' ಅನ್ನೋ ತಳಿ ವೃದ್ಧಿಗೊಳಿಸಿ ಕೊಟ್ವಿ. ಬಹಳ ಜನ ರೈತರು ಇದನ್ನು ಬೆಳೆದು ತುಂಬಾ ಲಾಭ ಮಾಡಿಕೊಂಡಿದ್ದಾರೆ. ಅದರ ಸ್ಮರಣಾರ್ಥ ತಾವು ಕಟ್ಟಿದ ಮನೆಗೆ 'ದೇವನೂರು ಡಿಲಕ್ಸ್' ಅಂತ ಹೆಸರಿಟ್ಟಿದ್ದಾರೆ. ಇನ್ನೊಂದು ಹೆಚ್ಚು ಹುಳಿಯಿರುವ ಲಕ್ಷ್ಮಿ ಅನ್ನೋ ಟೊಮೇಟೋ ತಳಿ ಅಭಿವೃದ್ಧಿ ಮಾಡಿದೆವು. ನಾವು ಎಲ್ಲೋ ದಂತ ಗೋಪುರದಲ್ಲಿ ಕೂತು ಸಂಶೋಧನೆ ಮಾಡ್ತಾ ಇಲ್ಲ. ಹಾಗೆನೆ ರೈತರಿಗೆ ಏನು ಅಗತ್ಯ ಇದೆಯೋ ಅದನ್ನ ಮಾಡೋದಿಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ, ಅಂತ ಹೇಳೋದಕ್ಕೆ ಇದೆಲ್ಲವನ್ನೂ ಹೇಳಿದೆ. ಇನ್ನೊಂದು



ಉದಾಹರಣೆ ಅಂದ್ರೆ, ಕಲ್ಲಂಗಡಿ ಗಿಡಗಳಿಗೆ ವೈರಸ್ ರೋಗದ ಸಮಸ್ಯೆ ಹೆಚ್ಚು. ಅದನ್ನ ಎದುರಿಸಿ ನಿಲ್ಲುವಂತಹ 'ಮಧು ಬಾಲ' ಅನ್ನೋ ತಳಿಯನ್ನು ಅಭಿವೃದ್ಧಿ ಮಾಡಿದೆವು. ಇದನ್ನು ರೈತರು ಇಂದು ಯಶಸ್ವಿಯಾಗಿ ಬೆಳೀತಿದ್ದಾರೆ. ಸಂಶೋಧನೆಯಲ್ಲಿ ಸದಾ ಹುಡುಕಾಟ ಬೇಕು. ರೈತರು ಎದುರಿಸುತ್ತಿರುವ ಸಮಸ್ಯೆಯನ್ನು ಗುರುತಿಸಿ ಪರಿಹಾರ ಹುಡುಕಬೇಕು. ರೈತರಿಗೆ ಬೇಡವಾದದ್ದನ್ನ ಸಂಶೋಧನೆ ಮಾಡೋ ರಿಸ್ಕನ ಯಾವ ಕಂಪನಿಯೂ ತೆಗೆದುಕೊಳ್ಳೋದಿಲ್ಲ. ನಾವು ಸಂಶೋಧನೆ ಮಾಡಿ ಬಿಡುಗಡೆ ಮಾಡಿರುವ ತಳಿಯಲ್ಲಿ ರೈತರಿಗೆ ವಿಶ್ವಾಸ ಮೂಡಬೇಕು. ಅವರಿಗೆ ಲಾಭ ಆಗಬೇಕು. ಆಗಷ್ಟೇ ರೈತರು ನಮ್ಮ ಬೀಜ ಕೊಳ್ಳುತ್ತಾರೆ. ಬೀಜ ಮಾರಿದ ಹಣದಿಂದ ನಾವು ಕಂಪನಿ ನಡೆಸ ಬೇಕು. ರೈತರ ಅಗತ್ಯಗಳನ್ನ ಗಮನದಲ್ಲಿ ಇಟ್ಟುಕೊಂಡು ಅವರು ಬೆಳೆಯುತ್ತಿರುವ ತಳಿ ಲಾಭದಾಯಕವಾಗಿ ಬೆಳೆಯೋದಕ್ಕೆ, ಭಾಳ ದಿವಸ ಕೆಡದ ಹಾಗೆ ಇರೋಹಾಗೆ ಮಾಡೋದಕ್ಕೆ, ದೂರದ ಮಾರುಕಟ್ಟೆಗೆ ತೊಗೊಂಡು ಹೋಗೋದಕ್ಕೆ ಅನುಕೂಲ ಆಗೋದಕ್ಕೆ ಬರ ನಿರೋಧಕ ಶಕ್ತಿ ಪಡೆಯೋದಕ್ಕೆ ನಮ್ಮ ಸಂಶೋಧನೆಯನ್ನ ಮಾಡುತ್ತಾ ಇದ್ದೇವೆ. ಹೀಗೆ ಮಾಡುತ್ತಾ, ಮಾಡುತ್ತಾ ಇಂದು ಒಂದು ಯಶಸ್ವಿ ಕಂಪನಿಯಾಗಿ ಬೆಳೆದಿದ್ದೇವೆ. ನಾವು ಇಂದು ಯಶಸ್ವಿ ಯಾಗಿದ್ದರೆ ಅದು ರೈತರು ಕೊಟ್ಟ ತೀರ್ಪಿನಿಂದಾಗಿನೇ. ಅವರ ಅವಶ್ಯಕತೆಗಳಿಗೆ ಅನುಗುಣವಾಗಿ ತಳಿ ಇಲ್ಲ ಅಂದರೆ ಯಾವ ರೈತನೂ ಅದನ್ನ ಬೆಳೆಯೋದಿಲ್ಲ. ಯಾವ ರೈತರೂ ನಮಗೆ ಉಪಕಾರ ಮಾಡೋಕೆ ಇರಲ್ಲ. ನಮ್ಮ ಕೆಲಸವನ್ನ ನಾವು ಜವಾಬ್ದಾರಿಯಿಂದ ಮಾಡ್ತೀವೆ. ಅದು ರೈತರಿಗೆ ಇಷ್ಟ ಆದರೆ ಮೇಲಿಂದ ಮೇಲೆ ಬಂದು ಬೀಜ ಕೊಳ್ಳುತ್ತಾರೆ. ಒಂದು ಸಾರಿ ಬೀಜ ಮಾರೋದರಿಂದ ಯಾವ ಕಂಪನಿಯೂ ಲಾಭ ಮಾಡೋದಿಲ್ಲ. ಮೇಲೆ ಹೇಳಿದ, ದೇವನೂರು ಡಿಲಕ್ಸ, ಮೋಹಿನಿ,ಲಕ್ಷ್ಮಿ ಬೆಳಿತೀವಿ ಅಂತಾರೆ ರೈತರು. ಅವರಿಗೆ ಕಂಪನಿ ಯಾವುದು ಅಂತ ಗೊತ್ತೇ ಇರೊಲ್ಲ. ಇದು ಖಾಸಗಿ ಸಂಸ್ಥೆಯಲ್ಲಿನ ನನ್ನ ೧೫ ವರ್ಷಗಳ ಅನುಭವ. ಅದಕ್ಕೆ ಮುಂಚೆ ನಾನು ಸರ್ಕಾರಿ ವಲಯದಲ್ಲಿ ಕೆಲಸ ಮಾಡುತ್ತಾ ಇದ್ದೆ. ಅಲ್ಲಿ ಬಹಳ ಇತಿ ಮಿತಿ ಇದೆ. ಅಲ್ಲಿ ಪ್ರೊಜೆಕ್ಟ ಪ್ರಕಾರ ಕೆಲಸ ಮಾಡಬೇಕು. ಸರಿಯಾದ ಸಮಯಕ್ಕೆ ಹಣ ಬಿಡುಗಡೆ ಆಗೊಲ್ಲ. ನಾನು ಯಾರಿಗೂ ಉಪಯೋಗ ಮಾಡ್ತಿಲ್ಲ ಅನ್ನುಸ್ತು ಇಲ್ಲೇನಾದ್ರೂ ಆಗಬಹುದಾ ಅಂತ ಖಾಸಗಿ ಕ್ಷೇತ್ರಕ್ಕೆ ಬಂದೆ. ನಿಜ ಹೇಳಬೇಕಂದ್ರೆ ಇಲ್ಲಿ ಬಂದಾಗಿನಿಂದ ನನಗೆ ಸಮಾಧಾನ ಇದೆ. ನಾನು ರೈತರಿಗೆ ಅನುಕೂಲ ಆಗೋ ರೀತಿಯಲ್ಲಿ ಕೆಲಸ ಮಾಡುತ್ತಾ ಇದ್ದೇನೆ ಅನಿಸುತ್ತಿದೆ. ಲಾಭ ಅನ್ನೋ ಪ್ರಶ್ನೆ ಬಂದಾಗ ಲಾಭಾಂಶ ಇಲ್ಲದೆ ಯಾರೂ ಏನೂ ಮಾಡೋಕೆ ಆಗೊಲ್ಲ. ರೈತರು ನೀವು ಸುಮ್ಮನೆ ಬೆಳೆ ಬೆಳೆದು ಕೊಡುತ್ತಿರಾ? ನಿಮಗೂ ಲಾಭ ಬೇಕು. ಕೆಲವರು ಹೇಳುತ್ತಾರೆ ನೀವು ರೈತರು ಉತ್ಪಾದಿಸಿದ ಬೀಜ ಕ್ಕೆ ೩೦೦೦ ರೂ ಕೊಟ್ಟು ನೀವು ೧೨,೦೦೦ ಕ್ಕೆ ಮಾರುತ್ತೀರಿ ಅಂತ. ಯಾವುದೇ ತಳಿ ಅಭಿವೃದ್ಧಿ ಮಾಡಬೇಕು ಅಂದರೆ ಅದು ಒಂದೆರಡು ವರ್ಷದಲ್ಲಿ ಆಗೊಲ್ಲ. ೧೦-೧೨ ವರ್ಷ ಸಂಶೋಧನೆ ಮಾಡಬೇಕು ಅದಕ್ಕೆ ಸಾಕಷ್ಟು ಹಣ ಖರ್ಚಾಗುತ್ತದೆ. ಒಂದು ಹೈಬ್ರೀಡ್ ಮಾಡೋಕೆ ಸಮಾರು ೨೦೦ ಜನ ಕೆಲಸ ಮಾಡ್ತೀವಿ. ನಮ್ಮ ಸಂಶೋಧನಾ ಕೇಂದ್ರ ನಡೆಸೋಕೆ ಕೊಟ್ಯಾಂತರ ರೂಪಾಯಿ ಖರ್ಚಾಗುತ್ತೆ. ಅದನ್ನೆಲ್ಲಾ ತಡಕೊಳ್ಳೋಕೆ ಲಾಭ ಬೇಕೇ ಬೇಕು. ಬರೀ ನನ್ನ ಲಾಭ ಮಾತ್ರ ಯೋಚನೆ ಮಾಡಿದ್ರೆ ಕೊಳ್ಳೋ ರೈತರು ಏನು ಹುಚ್ಚರಲ್ಲ. ಇಲ್ಲಿ ಯಾರೂ ಯಾರಿಗೂ ಸೇವೆ ಮಾಡೊಲ್ಲ. ಇಷ್ಟು ದಿನದಿಂದ ರೈತರು ಈ ಹೈಬ್ರೀಡ್ ಬೀಜಗಳನ್ನ ಕೊಳ್ಳುತ್ತಾರೆ ಅಂದರೆ ಇದರಲ್ಲಿ ಏನೋ ಕ್ವಾಲಿಟಿ ಇರಲೇ ಬೇಕು. ಖಾಸಗಿ ಕ್ಷೇತ್ರ ಅಂದರೆ ಜನ ಸಾಮಾನ್ಯರಲ್ಲಿ ಏನೋ ಅನ್ನೋ ಅಭಿಪ್ರಾಯ ಇದೆ. ನನಗೂ ಮೊದಲು ಹಾಗೆನೇ ಇತ್ತು. ಆದರೆ ಅದು ಹಾಗಿಲ್ಲ. ಕೊನೆಗೂ ಎಲ್ಲರಿಗೂ ಅನುಕೂಲ ಅಗೋದು ಮುಖ್ಯ. ನಮ್ಮ ಇತಿಮಿತಿಯಲ್ಲಿ ನಮ್ಮ ಕೆಲಸವನ್ನ ನಾವು ಅಚ್ಚುಕಟ್ಟಾಗಿ ಮಾಡಿಕೊಂಡು ಹೋಗುತ್ತಿದ್ದೇವೆ. ಅಷ್ಟೆ. ಇಷ್ಟು ವಿಷಯ ನಿಮಗೆ ಹೇಳಬೇಕಿತ್ತು ಅಷ್ಟನ್ನು ನಾನು ಹೇಳಿದ್ದೇನೆ.





**೭. ಡಾ॥ ಪ್ರಸಾದ**
ಸಂಪಾದಕರು
ಲೀಸಾ ಇಂಡಿಯಾ
<u>ಬೆಂಗಳೂರು</u>

ನಮ್ಮದು ಒಂದು ಸರ್ಕಾರೇತರ ಸಂಸ್ಥೆ. ನಾವು ನೇರವಾಗಿ ರೈತರೊಟ್ಟಿಗೆ ಕೆಲಸ ಮಾಡುತ್ತಾ ಇದ್ದೇವೆ. ರೈತರು ತಮ್ಮ ಪರಿಸರದಲ್ಲಿ ಕೆಲಸ ಮಾಡುತ್ತಾ ಅವರು ಹೇಗೆ ಸಂಶೋಧನೆ ಮಾಡುತ್ತಾ ಇದ್ದಾರೆ ಅನ್ನೋದನ್ನ ನಾವು ನೋಡುತ್ತಾ ಇದ್ದೇವೆ. ನಮ್ಮ ದೃಢವಾದ ನಂಬಿಕೆ ಏನೆಂದರೆ ಜ್ಞಾನ ಮೊದಲು ರೈತರ ಬಳಿ ಇದೆ, ನಂತರ ಅದು ಬೇರೆಯವರ ಬಳಿಯಿದೆ. ೨೫ ವರ್ಷಗಳಿಂದ ಕೆಲಸ ಮಾಡಿರೋ ನಮ್ಮ ಸಂಸ್ಥೆಗೆ ಇನ್ನೂ ಒಂದು ವಿಷಯ ಅರ್ಥವಾಗಿದೆ. ಅದೇಂದರೆ ರೈತರಿಗೆ ಜ್ಞಾನ ಅನುಭವದಿಂದ ಬಂದಿದೆ. ಸಂಶೋಧಕರರಿಗೆ ಓದಿನಿಂದ ಬಂದಿದೆ. ಇಬ್ಬರ ಬಳಿಯೂ ಜ್ಞಾನ ಇದೆ. ಇವರಿಬ್ಬರ ಮಧ್ಯೆ ಒಂದು ಸೇತುವೆಯನ್ನು ನಿರ್ಮಿಸುವ ಕೆಲಸವನ್ನ ನಮ್ಮ ಸಂಸ್ಥೆ ಮಾಡುತ್ತಾ ಇದೆ. ನಾವು ರೈತರೊಟ್ಟಿಗೆ ಕೆಲಸ ಮಾಡುತ್ತಾ ಅವರ ಜ್ಞಾನವನ್ನು ದಾಖಲು ಮಾಡುತ್ತಾ, ಅವರ ತಿಳುವಳಿಕೆ ಮಟ್ಟ ಹೆಚ್ಚಿಸುವ ಪ್ರಯತ್ನ ಮಾಡುತ್ತಾ ಅವರಿಗೆ ಹೊರಗಿನಿಂದ ಸಿಗುವ ಜ್ಞಾನವನ್ನು ಕೊಡುವ ಕೆಲಸವನ್ನೂ ಮಾಡುತ್ತಾ ಇದ್ದೇವೆ. ಕನ್ನಡದಲ್ಲಿ ಒಂದು ಪತ್ರಿಕೆಯನ್ನು ಕೂಡಾ ಹೊರ ತರುತ್ತಿದ್ದೇವೆ. ನಮಗೆ ಗೊತ್ತಿರೋ ಹಾಗೆ ಎಲ್ಲ ಕ್ಷೇತ್ರದಲ್ಲೂ ಒಳ್ಳೆಯವರಿದ್ದಾರೆ, ಸರ್ಕಾರಿ ಕ್ಷೇತ್ರದಲ್ಲೂ ಇದ್ದಾರೆ, ಖಾಸಗೀ ಕ್ಷೇತ್ರದಲ್ಲೂ ಇದ್ದಾರೆ. ಈ ಹಿಂದಿನ ಅಧಿವೇಶನದಲ್ಲಿ ಕೇಳಿ ಬಂದ ಎಲ್ಲರನ್ನೂ ಒಟ್ಟಿಗೆ ತಂದು ಕೆಲಸ ಮಾಡೋದು ಹೇಗೆ ಅನ್ನುವ ವಿಚಾರವನ್ನು ಇಟ್ಟು ಕೊಂಡು ನಾವು ಕೆಲಸ ಮಾಡುತ್ತಾ ಇದ್ದೇವೆ. ಅವರೆಲ್ಲರನೂ ಒಟ್ಟಿಗೆ ಸೇರಿಸುವ ಕೆಲಸ ಮಾಡುತ್ತಾ ಇದ್ದೇವೆ. ನಮಗೆ ಪದೇ,ಪದೇ ಅನ್ನಿಸುವುದು ಏನೆಂದರೆ ಏಕಿಷ್ಟು ಸಂಶೋಧನೆ? ಏಕಿಷ್ಟು ದೊಡ್ಡ ಸಂಶೋಧನಾಲಯಗಳು? ಇದೆಲ್ಲ ಲಾಭಕ್ಕಾಗ? ಹೆಸರಿಗಾಗ? ಸೇವೆಗಾಗ? ಇವು ನಮ್ಮನ್ನು ಪದೇ ಪದೇ ಕಾಡುತ್ತಿವೆ. ನಿಮಗೆಲ್ಲರಿಗೂ ಗೊತ್ತಿದೆ, ರೈತ, ಒಂದು ವಿಷಯವನ್ನ ಸಮಗ್ರವಾಗಿ ನೋಡಿದರೆ, ವಿಜ್ಞಾನಿ ಬಹಳ ಸೀಮಿತ ದೃಷ್ಟಿ ಕೋನದಿಂದ ನೋಡುತ್ತಾನೆ. ಉದಾಹರಣೆಗೆ ಒಂದು ಸಸ್ಯವನ್ನು ಒಬ್ಬ ರೈತನಿಗೆ ಕೊಟ್ಟರೆ ಅವನು ಸಸ್ಯದ ಬೆಳವಣಿಗೆ, ಅದರ ಫಲ, ಅದರ ರುಚಿ ಹೀಗೆಲ್ಲ ಯೋಚಿಸುತ್ತಾನೆ. ಆದರೆ ಒಬ್ಬ ವಿಜ್ಞಾನಿ ತನ್ನ ತಿಳುವಳಿಕೆಯನ್ನು ಸೀಮಿತಗೊಳಿಸಿಕೊಂಡು ಅದರ ಇಳುವರಿಯನ್ನಷ್ಟೇ ಗಮನಿಸ ಬಹುದು. ಯಾವಾಗಲೂ ಸಂಶೋಧನೆಯಿಂದ ಕೆಲಸ ಅಂತಿಲ್ಲ. ನಮ್ಮ ಅನುಭವದಿಂದಲೂ ಸಂಶೋಧನೆ ಸಾಧ್ಯವಾಗಬಹುದು. ಉದಾಹರಣೆಗೆ ರೈತರು ಬೇವು ಒಳ್ಳೇದು ಅಂತ ತಮ್ಮ ಅನುಭವದಿಂದ ಕಂಡು ಕೊಂಡಿದ್ದಾರೆ. ಅದನ್ನ ಸಂಶೋಧಕರು ಪ್ರಯೋಗ ನಡೆಸಿ ಅದು ಸರಿ ಅಂತ ಒಪ್ಪಿದ್ದಾರೆ. ಹಾಗಲಕಾಯಿ ಆರೋಗ್ಯಕ್ಕೆ ಒಳ್ಳೇದು ಅಂತ ಸಾಮಾನ್ಯ ಜನ ಅನುಭವದಿಂದ ಕಂಡು ಕೊಂಡಿದ್ದಾರೆ. ವಿಜ್ಞಾನಿಗಳು ಅದನ್ನ ಸಂಶೋಧನೆಯಿಂದ ಕಂಡು ಕೊಂಡಿದಾರೆ. ಶ್ರೀ ಪದ್ಧತಿಯಲ್ಲಿ ಭತ್ತ ಬೆಳೆಯುವುದು ರೈತರ ಅನುಭವದಿಂದ ಬಂದದ್ದು. ಅದನ್ನ ಸಂಶೋಧಕರು ಸರಿಯಾದ ಪದ್ಧತಿ ಅಂತ ಒಪ್ಪಿದ್ದಾರೆ. ವಿಜ್ಞಾನಿಗಳು ನಮ್ಮ ಸಂಶೋಧನಾಲಯದಲ್ಲಿ ಒಂದು ಸಂಶೋಧನೆ ಚೆನ್ನಾಗಿ ಆಗಿದೆ ಅದನ್ನ ಹೊಲದಲ್ಲಿ ಬೆಳೆಯಿರಿ ಅಂತಾರೆ. ಹಾಗೇನೆ ರೈತರು ನಮ್ಮ ಹೊಲದಲ್ಲಿ ಚೆನ್ನಾಗಿ ಆಗಿದೆ ನಿಮ್ಮ ಸಂಶೋಧನಾಲಯದಲ್ಲಿ ಬೆಳೆದು ನೋಡಿ ಅನ್ನುವ ಸ್ಥಿತಿ ನಿರ್ಮಾಣ ಆಗಬೇಕು. ರೈತರು ಹೊಲದಲ್ಲಿ ಕೆಲಸ ಮಾಡುತ್ತಾ ಮಾಡುತ್ತಾ ಸತತವಾಗಿ ಸಂಶೋಧನೆ ಮಾಡುತ್ತಲೇ ಇರುತ್ತಾರೆ. ನಮ್ಮ ಸಂಸ್ಥೆಯ ನಿಲುವು ಏನೆಂದರೆ ಯಾರ ಯಾರ ಬಳಿ ಜ್ಞಾನ ಇದೆಯೋ ಅವರೆಲ್ಲರೂ ಒಟ್ಟಿಗೆ ಸೇರಿ ಸಮಸ್ಯೆಗೆ ಪರಿಹಾರ ಹುಡುಕುವಂತಾಗ ಬೇಕು. ನಾವು ಹೊರಡಿಸುವ ಪತ್ರಿಕೆ ಯಲ್ಲಿ ಯಾವುದೇ ತತ್ವ ಇಲ್ಲ, ಸಿದ್ಧಾಂತ




ಇಲ್ಲ. ಕೇವಲ ರೈತರ ಪ್ರತ್ಯಕ್ಷ ಅನುಭವ ಮಾತ್ರ ಅದರಲ್ಲಿ ಇರುತ್ತೆ. ನಾವು ಮಾಡ ಬಹುದಾದ ಕೆಲಸ ಅಂದರೆ ರೈತರ ಮಾತನ್ನ ಕಿವಿ ಕೊಟ್ಟು ಕೇಳೋದು. ಆ ಮಾತು ಅವರ ಅನುಭವದಿಂದ ಬಂದಿರಬಹುದು ಇಲ್ಲವೆ ಪರಂಪರೆಯಿಂದ ಬಂದಿರಬಹುದು. ನಾವು ಇದನ್ನ ಎರಡು ರೀತಿಯಲ್ಲಿ ಮಾಡುತ್ತಾ ಇದ್ದೇವೆ. ಒಂದು ರೈತರ ಸಹಭಾಗಿತ್ವದಲ್ಲಿ ಶೋಧನೆಗಳನ್ನ ಮಾಡೋ ಕೆಲಸ, ಮತ್ತೊಂದು ರೈತರ ಶಾಲೆಗಳನ್ನ ನಡೆಸೋ ಕೆಲಸ. ನಮ್ಮ ಸಂಶೋಧನೆಯ ಕಾರ್ಯಕ್ರಮಗಳು ಹೇಗಿವೆ ಅಂದರೆ ರೈತರು ನಮ್ಮ ಸಂಶೋಧನೆಯ ಹಾಸು ಹೊಕ್ಕಾಗಿ ಇರುತ್ತಾರೆ. ಅದು ಕೇವಲ ನೆಪ ಮಾತ್ರ ಪಾಲ್ಗೊಳ್ಳುವಿಕೆ ಅಲ್ಲ. ಉದಾಹರಣೆಗೆ ನಾವು ರೈತರ ಗುಂಪಿನಲ್ಲಿ ಕುಳಿತು ಚರ್ಚೆ ಮಾಡುವಾಗ ಯಾವುದೋ ಒಂದು ಸಮಸ್ಯೆ ಚರ್ಚೆಗೆ ಬರುತ್ತೆ. ಮೂಲೆಯಲ್ಲಿ ಕುಳಿತಿರುವ ಒಬ್ಬ ವೃದ್ಧ ರೈತ ಈ ಸಮಸ್ಯೆ ಬಹಳ ವರ್ಷದಿಂದ ಇದೆ ಅದಕ್ಕೆ ಉತ್ತರ ನಮ್ಮ ಬಳಿ ಇದೆ ಅಂದರೆ ನಾವು ಅವನಿಗೆ ಕಿವಿಕೊಟ್ಟು ಕೇಳುತ್ತೀವಿ. ಅದೇ ಹಂತದಲ್ಲಿ ಅಲ್ಲಿರುವ ವಿಜ್ಞಾನಿಯೊಬ್ಬ ಏನಾದರು ಹೇಳಿದರೆ ಅದನ್ನೂ ಕೇಳುತ್ತೀವಿ. ನಂತರ ನಮ್ಮ ಹಳೇ ರೈತರು ಅನುಭವದಿಂದ ಈ ಪರಿಹಾರ ಸೂಚಿಸುತ್ತಿದ್ದಾರೆ, ನಮ್ಮ ವಿಜ್ಞಾನಿಗಳೂ ಓದಿನಿಂದ ಇನ್ನೊಂದು ಪರಿಹಾರ ಸೂಚಿಸುತ್ತಿದ್ದಾರೆ. ದಯವಿಟ್ಟು ಇವೆರಡೂ ಪ್ರಯೋಗಗಳನ್ನ ಹೊಲದಲ್ಲಿ ಮಾಡಿ ಅಂತ ರೈತರಿಗೆ ಪ್ರೋತ್ಸಾಹಿಸುತ್ತೀವಿ. ನಿಜವಾದ ಪ್ರಜಾತಾಂತ್ರೀಕರಣದಲ್ಲಿ ಏನಾಗಬೇಕು ಅಂದರೆ ಸಮಸ್ಯೆಗಳನ್ನ ಗುರುತಿಸುವುದು, ಪರಿಹಾರ ಹುಡುಕುವುದು, ಪ್ರಯೋಗ ಮಾಡಿ ನೋಡೋದು ತೀರ್ಮಾನ ಮಾಡೋದು ಎಲ್ಲವೂ ರೈತರ ಮಟ್ಟದಲ್ಲಿ ಆಗಬೇಕು. ಇದನ್ನ ನಾವು ನಮ್ಮ ಸಂಸ್ಥೆಯ ಮೂಲಕ ಮಾಡುತ್ತಾ ಇದ್ದೇವೆ. ಇದನ್ನ ನಾವೊಬ್ಬರೇ ಮಾಡುತ್ತಾ ಇದ್ದೇವೆ ಅಂತ ಜಂಬ ಕೊಚ್ಚಿಕೊಳ್ಳುತ್ತಿಲ್ಲ. ಈ ವಿಧಾನನ ಅನೇಕ ಸಂಸ್ಥೆಗಳು ಅನುಸರಿಸುತ್ತಿವೆ. ಒಟ್ಟಿನಲ್ಲಿ ಎಲ್ಲರೂ ಕೈ ಜೋಡಿಸಿ ನಡೆಯುವಂತಹ ಸಂಶೋಧನಾ ರೀತಿಗಳು ಬೇಕು. ರೈತನೇ ಅದರ ಪ್ರಮುಖ ಪಾತ್ರಧಾರಿ ಆಗಿರಬೇಕು ಎಂಬುದು ನಮ್ಮ ಉದ್ದೇಶ. ರೈತ ಇಲ್ಲದೆ ಆಹಾರ ಇಲ್ಲ. ರೈತ ಇಲ್ಲದೆ ಸಂಶೋಧನೆ ಇಲ್ಲ. ರೈತ ಇಲ್ಲದೆ ಯಾರಿಗೂ ಭವಿಷ್ಯ ಇಲ್ಲ.

**೮. ಪ್ರೊ॥ ಪೀಟರ್ ರೆಸನ್**

ಪ್ರಾಧ್ಯಾಪಕರು

ಬಾಶ್ ವಿಶ್ವವಿದ್ಯಾಲಯ ಯು.ಕೆ



ನಿಮ್ಮ ಮುಂದೆ ನಿಂತು ಮಾತನಾಡಲಿಕ್ಕೆ ನನಗೆ ಅವಕಾಶ ಸಿಕ್ಕಿರೋದು ದೊಡ್ಡ ಗೌರವ ಎಂದು ನಾನು ಭಾವಿಸಿದ್ದೇನೆ. ನಾನು ರೈತ ಅಲ್ಲ. ನಾನು ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತ ಇದ್ದೇನೆ. ಸಹಭಾಗಿತ್ವದಲ್ಲಿ ಸಂಶೋಧನೆ ಮಾಡುವ ವಿಷಯದ ಬಗ್ಗೆ ನಾನು ಕೆಲಸ ಮಾಡಿದ್ದೇನೆ. ರೈತರ ಜೊತೆ, ಕಾರ್ಮಿಕರ ಜೊತೆ, ನಾಗರಿಕರ ಜೊತೆ ಕೆಲಸ ಮಾಡಿದ್ದೇನೆ. ಈಗ ನಿಮ್ಮೊಟ್ಟಿಗೆ ನನ್ನ ಅನುಭವವನ್ನ ಹಂಚಿಕೊಳ್ಳುತ್ತಿದ್ದೇನೆ. ನಾವು ಇಂದು ಸೇರಿರುವುದು ಯಾವ ತರಹದ ಸಂಶೋಧನೆ ರೈತರಿಗೆ ಅಗತ್ಯ ಅನ್ನೋದನ್ನ ಚರ್ಚಿಸುವುದಕ್ಕೆ. ಸಮಾಜಕ್ಕೆ ಯಾವುದು ಒಳ್ಳೆಯದು ಅಂತ ಚರ್ಚೆ ಮಾಡೋದಕ್ಕೆ. ಇಲ್ಲಿ ಒಂದು ಪ್ರಶ್ನೆ ಉದ್ಭವ ಆಗುತ್ತದೆ. ಯಾರ ಅನುಭವ, ಯಾರ ಜ್ಞಾನ ಹೆಚ್ಚು ಅಂತ. ಅಂದರೆ ಆದಿವಾಸಗಳ ಜ್ಞಾನ ಹೆಚ್ಚೋ ಅಥವಾ ಒಬ್ಬ ವಿಜ್ಞಾನಿಯದೋ? ಇದನ್ನ ಚರ್ಚಿಸುವ ಮುಂಚೆ ತಿಳುವಳಿಕೆ ಯಾವ ರೀತಿ ಹುಟ್ಟುತ್ತೆ? ಜ್ಞಾನ ಅಂದರೆ ಏನು ಅನ್ನುವುದನ್ನ ಮೊದಲು ಅರ್ಥ ಮಾಡಿಕೊಳ್ಳಬೇಕಿದೆ. ಈಗ ನಾವು ನೋಡುತ್ತಿರುವ ಆಧುನಿಕ ವಿಜ್ಞಾನ ಹೇಗೆ ಹುಟ್ಟಿತು ಅನ್ನೋದನ್ನ






ಮೊದಲು ತಿಳಿಯ ಬೇಕಿದೆ. ಇಡೀ ಯುರೋಪು ಸತ್ಯದ ಹುಡುಕಾಟದಲ್ಲಿದ್ದಾಗ ಹುಡುಕಾಟದ ಒಂದು ಸಾಧನವಾಗಿ ಮೂಡಿ ಬಂದದ್ದು ಆಧುನಿಕ ವಿಜ್ಞಾನ. ಆದರೆ ಸತ್ಯದ ಹುಡುಕಾಟದಲ್ಲಿದ್ದ ಯುರೋಪಿಗೆ ಕೆಲವು ಸತ್ಯಗಳು ಅರಿವಿಗೆ ಬರದೇ ಹೋದದ್ದು ದುರಂತ. ಯುರೋಪಿಯನ್ನರು ಮನುಷ್ಯ ಮಾತ್ರ ಯೋಚಿಸ ಬಲ್ಲ, ಬೇರೆ ಯಾವ ಪ್ರಾಣಿಗಳಿಗೂ ಅದು ಸಾಧ್ಯವಿಲ್ಲ ಅಂತ ತೀರ್ಮಾನಕ್ಕೆ ಬಂದು ಬಿಟ್ಟರು. ಈ ತೀರ್ಮಾನನ ಇನ್ನೊಂದಿಷ್ಟು ಹಿಗ್ಗಿಸಿ ನೋಡಿದರೆ ಮೇಲ್ವರ್ಗದ ಜನ ಏನಿದಾರೆ ಅವರಿಗೆ ಮಾತ್ರ ಯೋಚನೆ ಮಾಡಲು ಬರತ್ತೆ ಮಿಕ್ಕವರಿಗೆ ಇಲ್ಲಾ ಅಂತಾನು ಅರ್ಥ ಮಾಡಿಕೊಳ್ಳಬಹುದು. ಈ ವಿಚಾರಗಳು ಬರೋವಾಗಲೇ ಇನ್ನೂ ಕೆಲವು ವಿಚಾರಗಳು ಇದಕ್ಕೆ ಸೇರಿ ಕೊಂಡವು. ಮೊದಲನೆಯದು ನಾವು ಯಾವುದರ ಬಗ್ಗೆ ಯೋಚಿಸುತ್ತಿದ್ದೇವೋ ಅದರ ಭಾಗ ನಾವು ಆಗಬಾರದು ಅನ್ನೋದು. ಉದಾಹರಣೆಗೆ ನೀವು ವ್ಯವಸಾಯದ ಸಮಸ್ಯೆಗಳನ್ನ ಬಿಡಿಸೋದಕ್ಕೆ ಯೋಚಿಸುತ್ತಿದ್ದೀರಿ ಅಂತ ಇಟ್ಟು ಕೊಳ್ಳಿ. ನೀವು ರೈತರ ಮಧ್ಯೆ ಇರಬಾರದು, ನೀವು ಹೊರಗಿನಿಂದ ಸಮಸ್ಯೆಯನ್ನ ಅರ್ಥ ಮಾಡಿಕೊಳ್ಳಬೇಕು. ಆಗ ಕಂಡುಕೊಂಡ ಸತ್ಯಗಳು ಭಾಳ ಪವಿತ್ರವಾಗಿರುತ್ತವೆ ಎನ್ನುವುದು ಒಂದು. ಇನ್ನೊಂದು ಏನಪ್ಪಾ ಅಂದರೆ ಎಲ್ಲ ವಿಷಯಗಳನ್ನು ಖಂಡ,ಖಂಡಗಳಾಗಿ ಮಾಡಿ ನೋಡೋದು. ಇದರಿಂದ ಸತ್ಯದ ಅರಿವಾಗುತ್ತೆ ಎಂದು ಭಾವಿಸಿದರು.ಯಾವುದನ್ನೂ ಅಖಂಡವಾಗಿ ನೋಡಬಾರದು ಅನ್ನೋದು ಈ ವಿಚಾರ. ಕಡೆಗೆ ಏನಾಯಿತು ಅಂದರೆ ವಿಜ್ಞಾನದ ತರ್ಕಕ್ಕೆ ಸಿಕ್ಕಿದ್ದಷ್ಟೇ ಸತ್ಯ. ಮಿಕ್ಕಿದ್ದೆಲ್ಲವೂ ಮಿಥ್ಯ ಅನ್ನೋ ಕಡೆಗೆ ವಿಚಾರ ಬೆಳಿತಾ ಹೋಯಿತು. ವಿಜ್ಞಾನದಿಂದ ಬಹಳಷ್ಟು ಪ್ರಯೋಜನ ಆಗಿದೆ ನಿಜ. ಹಾಗೆಯೇ ಅದು ಅನೇಕ ಸಮಸ್ಯೆಗಳನ್ನ ತಂದು ಒಡ್ಡಿತು. ವಿಜ್ಞಾನದ ಇನ್ನೊಂದು ಗುಣ ಅಂದರೆ ಎಲ್ಲವನ್ನೂ ನಿಯಂತ್ರಿಸುವ ಗುಣ. ವಿಜ್ಞಾನ ಎಷ್ಟೊಂದು ದೊಡ್ಡದಾಗಿ ಬೆಳೀತು ಅಂದರೆ ಅದರ ಬೆಂಬಲಕ್ಕೆ ದೊಡ್ಡ, ದೊಡ್ಡ ಸಂಸ್ಥೆಗಳು, ಸರ್ಕಾರಗಳು ನಿಲ್ಲತೊಡಗಿದವು. ಎಲ್ಲವೂ ಬೃಹತ್ ಆಗಿ ಇರಬೇಕಾಯಿತು. ಅದರಲ್ಲಿ ಸಣ್ಣದ್ದಕ್ಕೆ ಸ್ಥಾನವೇ ಇಲ್ಲ ಅನ್ನೋ ಪರಿಸ್ಥಿತಿ ನಿರ್ಮಾಣ ಆಯಿತು. ಇದ–ರಿಂದ ಶಕ್ತಿ ಒಂದು ಕಡೆಗೆ ಕೇಂದ್ರಿಕೃತವಾಗಿ ಹೋಯಿತು. ಕೆಲವೇ ಜನ ಅದನ್ನ ನಿಯಂತ್ರಿಸುವುದಕ್ಕೆ ಪ್ರಾರಂಭಿಸಿದರು. ಹಣ, ಶಕ್ತಿ ಮತ್ತು ಜ್ಞಾನ ಒಂದೇ ಕಡೆ ಸೇರಿದವು. ವಿಜ್ಞಾನಕ್ಕೆ ಒಂದೊಂದೆ ಅಂಶವನ್ನ ನೋಡೋದಕ್ಕೆ ಸಾಧ್ಯ. ಅದಕ್ಕೆ ಎಲ್ಲವನ್ನೂ ಸಮಗ್ರವಾಗಿ ನೋಡೋದಕ್ಕೆ ಸಾಧ್ಯವಾಗುತ್ತಾ ಇಲ್ಲ. ಇಳುವರಿ ಬಗ್ಗೆ ಮಾತ್ರ ಮಾತನಾಡುತ್ತಾರೆ, ಇಲ್ಲವೆ ಬೀಜದ ಬಗ್ಗೆ ಮಾತ್ರ ಮಾತನಾಡುತ್ತಾರೆ, ಇಲ್ಲವೆ ಗೊಬ್ಬರದ ಬಗ್ಗೆ ಮಾತ್ರ ಮಾತನಾಡುತ್ತಾರೆ. ಕೃಷಿ ಅನ್ನೋದು ಒಂದು ಸಮಗ್ರವಾದ ಕ್ರಿಯೆ ಅನ್ನೋದು ಆಧುನಿಕ ಕೃಷಿ ವಿಜ್ಞಾನದ ಅರಿವಿಗೆ ಬರುವುದಿಲ್ಲ. ಆಧುನಿಕ ವಿಜ್ಞಾನ ಯಾವುದರ ಜೊತೆ ಕೆಲಸ ಮಾಡಲು ಸುಲಭವೋ ಅದನ್ನ ಮಾತ್ರ ಆರಿಸಿಕೊಳ್ಳುತ್ತೆ. ವ್ಯವಸಾಯದ ಸಮಸ್ಯೆಗಳಿಗೆ ಬಯೋ ಟೆಕ್ನಾಲಜಿಲಿ ಉತ್ತರ ಇದೆ ಅನ್ನುತ್ತೆ. ವಿದ್ಯುತ್ ಸಮಸ್ಯೆಗಳಿಗೆ ನ್ಯೂಕ್ಲಿಯರ್ ಪವರ್ ನಲ್ಲಿ ಉತ್ತರ ಇದೆ ಅಂತ ಭಾವಿಸುತ್ತೆ. ಸರ್ಕಾರಗಳಿಗೂ ಇದೇ ಇಷ್ಟ. ಏಕೆಂದರೆ ನಾನು ಪ್ರಪಂಚದಲ್ಲಿ ದೊಡ್ಡ ಶಕ್ತಿ ಅಂತ ಬೀಗೋದಿಕ್ಕೆ ಅದಕ್ಕೆ ಇಷ್ಟ. ಪ್ರಪಂಚ ಅನ್ನೋದು ಸಣ್ಣ, ಸಣ್ಣ ಬಿಡಿಭಾಗ ಅಲ್ಲ. ಅದೊಂದು ಸಮಗ್ರವಾಗಿರುವಂತಹ ವ್ಯವಸ್ಥೆ. ಅದರಲ್ಲಿ ಯಾವುದನ್ನೂ ಬೇರೆ ಮಾಡೋದಕ್ಕೆ ಆಗೋದಿಲ್ಲ. ಅದು ಮೂರ್ಖತನ. ವ್ಯವಸಾಯ ಸಂಶೋಧನೆಯನ್ನ ವ್ಯವಸಾಯ ಸಮುದಾಯದಿಂದ ದೂರ ತೆಗೆದು ಇದಕ್ಕೂ ಅದಕ್ಕೂ ಸಂಬಂಧ ಇಲ್ಲ ಅನ್ನೋದು ಭಾಳ ಅಪಾಯಕಾರಿ. ರೈತರ ಆತ್ಮಹತ್ಯೆಗೂ ಸಂಶೋಧನೆಗೂ ಏನು ಸಂಬಂಧ ಇಲ್ಲ ಅಂತ ನಿನ್ನೆ ಒಬ್ಬರು ಹೇಳಿದರು. ಇದು ಬಹಳ ಖೇದ ತರುವ ಅಭಿಪ್ರಾಯ. ಕೃಷಿ ಕ್ಷೇತ್ರದಲ್ಲಿ ಆಗಿರುವ ಸಂಶೋಧನೆ ಎಲ್ಲಾ ವ್ಯರ್ಥ ಅಂತ ನಾನು ಹೇಳುತ್ತಾ ಇಲ್ಲ. ಆದರೆ ಅದು ಜನರ ಸಂಶೋಧನಾ ವ್ಯವಸ್ಥೆ ಜೊತೆಗೆ ಸೇರಿಕೊಂಡು ಮಾಡುವಂತಹ ಕೆಲಸ ಆಗಬೇಕು. ನಾನು ದೂರ ಇದ್ದು ಕೆಲಸ ಮಾಡ್ತೀನಿ ಅನ್ನೋದು ಮೂರ್ಖತನದ ಮಾತಾಗುತ್ತದೆ.

ಸಹಭಾಗಿತ್ವದಲ್ಲಿ ಸಂಶೋಧನೆ ವೈಜ್ಞಾನಿಕ ಸಂಶೋಧನೆಗಿಂತ ಒಂದು ಹೆಜ್ಜೆ ಮುಂದೆ ಹೋಗುತ್ತದೆ. ಇದಕ್ಕೆ ರಾಯಕೀಯ ಆಯಾಮ ಕೂಡ ಇದೆ. ಇದು ಮನುಷ್ಯರ ಅಧಿಕಾರ ಸಂಬಂಧಗಳ ಬಗ್ಗೆಯೂ ಕೆಲಸ ಮಾಡುತ್ತದೆ. ಎಲ್ಲರನ್ನೂ ಒಂದೇ ಮಟ್ಟದಲ್ಲಿ ಕೂರಿಸುತ್ತೆ. ಅದೊಂದು ಸಾಮಾಜಿಕ, ರಾಜಕೀಯ ಸಂಬಂಧಗಳನ್ನೂ ಗುರುತಿಸುತ್ತದೆ. ಸಹಭಾಗಿತ್ವದ ಸಂಶೋಧನೆಯ

ಕ್ಷೇತ್ರದಲ್ಲಿ ಸಂಶೋಧನೆ ಯಾವುದರ ಬಗ್ಗೆ ಆಗಬೇಕು ಅನ್ನುವುದು ಯಾರು ನಿರ್ಣಯಿಸುತ್ತಾರೆ? ಹೇಗೆ ನಿರ್ಣಯಿಸುತ್ತಾರೆ? ಅನ್ನೋದರಿಂದ ಸಂಶೋಧನೆಯ ಕೆಲಸ ಪ್ರಾರಂಭ ಆಗುತ್ತದೆ. ತಿಳುವಳಿಕೆ ಇದ್ದೋರಷ್ಟೆ ಸೇರಿ ಸಹಭಾಗಿತ್ವದ ಸಂಶೋಧನೆ ನಡೀತಿದೆ ಅಂದರೆ ಆಗೊಲ್ಲ. ಯಾರು ಕೆಳ ಸ್ತರದಲ್ಲಿದ್ದಾರೆ, ಯಾರು ಸಂಶೋಧನೆಯಿಂದ ಹೊರಗೆ ಉಳಿದಿದ್ದಾರೆ ಅವರೆಲ್ಲರನ್ನೂ ಸೇರಿಸಿಕೊಳ್ಳುವುದೂ ಕೂಡ ಮುಖ್ಯ ಆಗುತ್ತೆ. ಸಹಭಾಗಿತ್ವ ಅನ್ನೋದು ಜನರನ್ನ ಚೈತನ್ಯ ಶೀಲರನ್ನಾಗಿ ಮಾಡೋ ಪ್ರಕ್ರಿಯೆ ಕೂಡ ಆಗಿದೆ. ಎಲ್ಲರೂ ಮೇಲೆ ಬರುವ ಅವಕಾಶಗಳಿವೆ. ಇಂಥ ಒಂದು ಸಂಶೋಧನೆ ನಡೆದಾಗ ಒಂದು ಹೊಸ ಸಮಾಜ ನಿರ್ಮಾಣ ಆಗುತ್ತೆ. ಪ್ರತಿಯೊಬ್ಬರಿಗೂ ಆತ್ಮ ಗೌರವ ಹೆಚ್ಚುತ್ತದೆ. ಆತ್ಮ ವಿಶ್ವಾಸ ಹೆಚ್ಚುತ್ತದೆ. ಆದರೆ ದುರ್ದೈವ ಅಂದರೆ ಬಹಳ ವಿಜ್ಞಾನಿಗಳು ಹೀಗೆ ಯೋಚನೆ ಮಾಡೋದಿಲ್ಲ ಸಹಭಾಗಿತ್ವದ ಸಂಶೋಧನೆ ಬಹಳ ವಿಶಿಷ್ಟವಾದುದು. ಒಂದು ವಿಷಯವನ್ನ ಹಲವಾರು ಕೋನಗಳಿಂದ ನೋಡೋದು ಈ ವಿಧಾನಕ್ಕೆ ಸಾಧ್ಯ. ಬುಡಕಟ್ಟು ಜನರು ಸಮಸ್ಯೆಯನ್ನ ನೋಡಿ ಉತ್ತರ ಹುಡುಕುವ ಬಗೆ ಒಂದಾದರೆ, ಸಾಮಾನ್ಯ ರೈತರದು ಇನ್ನೊಂದು ಬಗೆ, ವಿಜ್ಞಾನಿಗಳದು ಇನ್ನೊಂದು ಬಗೆ. ಆದರೆ ಅವರದು ಬಹಳ ಸಣ್ಣದಾದ, ಸೀಮಿತವಾದ ದೃಷ್ಟಿ ಕೋನ. ನಾವು ಸಹಭಾಗಿತ್ವದ ಸಂಶೋಧನೆಯ ಬಗ್ಗೆ ಮಾತನಾಡಿದಾಕ್ಷಣ ಈಗ ನಡೆಯುತ್ತಿರುವ ಪದ್ಧತಿ ನಿಂತು ಹೋಗುತ್ತದೆ ಎಂದೇನು ಇಲ್ಲ. ಚಾಲ್ತಿಯಲ್ಲಿರುವ ಸಂಶೋಧನೆಯ ಹಿಂದೆ ಬಹಳ ದೊಡ್ಡ ಶಕ್ತಿ ಇದೆ. ನಮ್ಮ ಮಧ್ಯದಲ್ಲಿ ಅದು ಹಾಗೇ ಇರತ್ತೆ. ಆದರೆ ಸತತವಾಗಿ ಅದರ ರೂಪ ಬದಲಾಯಿಸುವ ಪ್ರಯತ್ನವನ್ನ ನಾವು ಒಗ್ಗಟ್ಟಾಗಿ ಮಾಡುತ್ತಲೇ ಇರಬೇಕು. ಅದಕ್ಕೆ ಬೇರೆ, ಬೇರೆ ಸವಾಲುಗಳನ್ನ ಹಾಕಿ ನಮ್ಮ ದಾರಿಗೆ ಬರೋ ಹಾಗೆ ಮಾಡಬೇಕಾದ್ದು ನಮ್ಮ ಜವಾಬ್ದಾರಿಯಾಗಿದೆ.

**೯. ನೀಲಕಂಠ ಕುರುಬರ**

ದನಗಾಹಿಗಳ ಸಂಘಟನೆ

ಬೆಳಗಾವಿ



ನ್ಯಾಯ ಮಂಡಳಿಯಲ್ಲಿರುವ ಹಿರಿಯರೇ, ಅಣ್ಣತಮ್ಮಂದಿರೇ, ಅಕ್ಕ ತಂಗಿಯರೇ, ಪದಾಧಿಕಾರಿಗಳೇ, ವಿಜ್ಞಾನಿಗಳೇ, ಸಂಶೋಧಕರೇ ಎಲ್ಲರಿಗೂ ನನ್ನ ನಮಸ್ಕಾರ. ನಾನು ಸಂಶೋಧಕನೂ ಅಲ್ಲ ವಿಜ್ಞಾನಿನೂ ಅಲ್ಲ. ನಾನು ಒಬ್ಬ ಕುರುಬ. ಕುರುಬನಾಗಿ ರೈತ ಮತ್ತು ಕುರುಬನ ಸಂಬಂಧ ಏನಿತ್ತು ಅನ್ನೋದನ್ನ ವಿವರಿಸ್ತೀನಿ. ಮನುಷ್ಯ ಮೊದಲು ಮಂಗ್ಯ ಇದ್ದ. ಮನುಷ್ಯ ಆದಮ್ಯಾಲ ಹೊಟ್ಟಿಗ ಅನ್ನ ಉಣಬೇಕು ಅನ್ನೋ ವಿಚಾರ ಬಂತು. ಆಗ ಬಸವಣ್ಣನ ಮೊರಿ ಹೋದ. ತಂತ್ರಜ್ಞಾನಕ್ಕ ಬಸವಣ್ಣನ ಮೂಲಕಾರಣ ಅಂತ ನಾನು ಭಾವಿಸೀನಿ. ಬಸವಣ್ಣನ ನೆರವು ಪಡೆದು ಮನುಷ್ಯ ಭೂಮಿ ಹರಗಲಿಕ್ಕೆ ಸುರು ಮಾಡಿದ. ಗುಡ್ಡ-ಗಂಟಿನ ಕಡಿದು ಹೊಲ ಮಾಡಾಕ ಹತ್ತದ. ರೈತನ ನೇಗಿಲು ಒಂದು ಗುತ್ತಿಗೆ ಹತ್ತದಾಗ ಕುರಿ ಹುಟ್ಟಿದ್ವು ಅಂತ ನಮ್ಮ ಪುರಾಣ ಹೇಳ್ತಾವು. ಆ ಕುರಿ ಪಾಲನಿ ಮಾಡೋಕ ನಾವು ಕುರುಬರ ಆದ್ವಿ. ಸಾಕಷ್ಟು ಮೇವು, ಸಾಕಷ್ಟು ಹುಲ್ಲುಗಾವಲ, ಇದ್ವು. ಸಾಕಷ್ಟು ಅನುಕೂಲ ಇದ್ವು. ಕುರಿ ಮೇಯಿಸ್ತ ಮೇಯಿಸ್ತ ಅವುಗಳ ಸಂಖ್ಯಿ ಹೆಚ್ಚುದುವು. ರೈತರ ಹೊಲದಾಗ ಕುರಿ ತುರುಬಲಿಕ್ಕೆ ಶುರು ಮಾಡದವಿ. ಆ ಗೊಬ್ರದಿಂದ ಒಳ್ಳೆ ಗುಣಮಟ್ಟದ ಅನ್ನ ಬೆಳೆಲಿಕ್ಕೆ ರೈತರಗ ಸಾಧ್ಯ ಆತು. ಒಳ್ಳೆ ಹಾಲು, ಬೆಣ್ಣಿ, ತುಪ್ಪ ಸಿಗಾಕ ಹತ್ತತ್ತು. ನಮ್ಮ ಭಾಗದಾಗ ಸಾಧಾರಣ ಜೂನ ತಿಂಗಳಲ್ಲಿ ಮಳಿ ಹಿಡಿದ್ರ ಅಕ್ಟೋಬರತನಕ ಹೊಯ್ತಿತ್ತು. ಮಳೀ ಅಂದ್ರ ಮಳೀ. ನಿಸರ್ಗದ ನಿಯಮ ಛಲೋ ಇತ್ತು. ಭೂಮಿ, ರೈತ, ಕುರುಬ, ಕುರಿ,





ದನ, ಎಲ್ಲಾ ಸರಿಯಿತ್ತು. ೧೯೫೦ರಲ್ಲೆ ನಾವು ಕುರಿಕಾಯೋವಾಗ ನಮಗೆ ಹೊತ್ತು ತಿಳಿತಿದ್ದಿಲ್ಲ. ನಾವು ನೆಲ್ಲಿ ಮರದ ಎಲಿ ಸಂಜಿ ಮುಂದ ಮುದುರದಾಗ ಮನಿ ಕಡಿ ಹೊಂಡತಿದ್ವಿ. ನಾವು ನಿಸರ್ಗದ ನಿಯಮದಲ್ಲೇ ಬದುಕುತಿದ್ವಿ. ರೈತರು ನೇಗಿಲಿನಿಂದ ಭೂಮಿ ಹರಗತಿದ್ದರು. ಬೀಜ ಬಿತ್ತಿದ್ರು. ಅದ್ರಾಗೆ ರೋಗ ಬರದಂಥ ಶಕ್ತಿಯಿತ್ತು. ಅದರಿಂದ ಎಲ್ಲಾ ಬಾಳತಿದ್ರು. ಆದರೆ ಒಂದು ರೋಗ ಬರ್ತಿತ್ತು. ಅದು ಕಾಲರಾ ರೋಗ. ಮೂರು–ನಾಲ್ಕು ವರ್ಷಕ್ಕೊಮ್ಮೆ ಬರ್ತಿತ್ತು. ಅದ್ರಿಂದ ಸ್ವಲ್ಪ ಮಂದಿ ಸಾಯ್ತಿದ್ರು. ಉಳಿದ ಜನ ಒಳ್ಳೆ ರೀತಿಯಿಂದ ಬದುಕುತ್ತಿದ್ರು. ದೇವರ ಮ್ಯಾಲ ವಿಶ್ವಾಸ ಇಟ್ಟು ಬದುಕತಿದ್ರು. ವರ್ಷದ ಸಾಕಷ್ಟು ಕಾಲ ಹಳ್ಳ ಹರೀತಿದ್ವು, ಹುಲ್ಲು ಇರ್ತಿತ್ತು. ಕೆರಿಗಳಲ್ಲಿ ನೀರು ಇರ್ತಿತ್ತು. ರೈತರು ವ್ಯಾಪರಕ್ಕೇಂತ ಹೊಲ ಮಾಡ್ತಿರಲಿಲ್ಲ. ಹೊಟ್ಟಿಗ ಅನ್ನ ಬೇಕು ಅಂತ ಮಾಡ್ತಿದ್ದರು. ಹಸುಗಳನ್ನ ತಮಗ ಮಜ್ಜಿಗಿ, ಬೆಣ್ಣಿ ಬೇಕು ಅಂತ ಸಾಕಾತ್ತಿದ್ದರು. ನಾವು ಕುರಿ ಕಾಯೋ ಮಂದಿ ವ್ಯಾಪಾರಕ್ಕೇಂತ ಕುರಿ ಜ್ವಾಪಾನ ಮಾಡ್ತಿದ್ದಿಲ್ಲ.ನನ್ನ ಧರ್ಮವಾಗಿ, ನನ್ನ ಭೂಮಿಯಲ್ಲಿ ಹುಟ್ಟಿದ ಕುರಿ, ನಾನು ರೈತರಿಗೆ ಸಂಬಂಧಿಸಿದವ ಅಂತ ಕುರಿ ಕಾಯ್ತಾ ಇದ್ದವಿ.

ನಂತರ ತಂತ್ರಜ್ಞಾನ ಅಂಬೋದು ಬಂತು. ದೊಡ್ಡ,ದೊಡ್ಡ ಧರಣಗಳನ್ನು ಕಟ್ಟಿ ನೀರು ಬಿಡ್ಲಿಕ್ಕೆ ಶುರು ಮಾಡಿದ್ರು. ಅದರಿಂದ ಧರಣದೊಳಗೆ ೬೦–೭೦ ಊರುಗೊಳು ಮುಳುಗಿ ಹೋದ್ವು. ಆದಿ ಕಾಲದಿಂದ ವಸ್ತಿ ಮಾಡತ್ತಿದ್ದಂತಹ ಜಾಗ ಬಿಟ್ಟು ಜನ ಗುಡ್ಡಗಳನ್ನ ಸೇರಿದ್ರು. ಸರ್ಕಾರದೋರು ಅವರಿಗೆ ದೊಡ್ಡ, ದೊಡ್ಡ ಗುಡ್ಡಗಳಲ್ಲಿ ಜಾಗ ಕೊಟ್ಟರು. ಆ ಮಂದಿ ಗುಡ್ಡ ಕಡದು ಹೊಲ ಮಾಡಾಕ ಹತ್ರು. ದೊಡ್ಡ, ದೊಡ್ಡ ಟ್ರಾಕ್ಟರ್ ಬಂದವು, ರಸಾಯನ ಗೊಬ್ಬರ ಬಂತು, ಗೊಬ್ರದಿಂದ ವ್ಯಾಪರೀಕರಣ ಆಗಿ ಭೂಮಿಮ್ಯಾಲೆ ಸಾಕಷ್ಟು ಕಾಳು ಬೆಳಸಲಿಕ್ಕೆ ಶುರು ಮಾಡಿದ್ರು. ನಮ್ಮ ಭೂಮಿಯಲ್ಲಿದ್ದ ಮೇವುಗಳು ಸತ್ಯನಾಶ ಆದವು. ನಮ್ಮ ಕುರಿಗೊಳಗೆ ಆಹಾರ ಸಿಗದಂತ ಸ್ಥಿತಿ ನಿರ್ಮಾಣ ಆತು.

ನಮ್ಮ ಕುರಿಗೊಳಗು ರೋಗ ಬರಲಿಕ್ಕೆ ಶುರುವಾತು. ಇದರಿಂದ ಮನಿ ಮಂದಿ ಎದಿ, ಎದಿ ಬಡಕೊಂಡು ಸಾಯ್ಲಿಕ್ಕ ಹೊಂಟ್ರು. ತಂತ್ರಜ್ಞಾನದ ಮಂದಿ ಬಂದರು . ಕುರಿಗಳಿಗೆ ಲಸಕಿ ಹಾಕಿ ಅಂದ್ರು. ಭೂಮಿಯಾಗ ಸಿಗತಿದ್ದ ಮೇವಿನ ಗುಣಮಟ್ಟ ಹೋತು ಅದಕ್ಕೆ ಕುರಿ ಸಾಯಾಕ ಹತ್ತಾವೆ ಅಂಬೋದು ಯಾರಿಗೂ ತಿಳಿಲೇ ಇಲ್ಲ. ಔಷಧ ತಿಂದ ಕುರಿಯಲ್ಲಿನ ಗುಣ ಮಟ್ಟ ಹೋತು. ರೈತರ ಹೊಲದಾಗಿನ ಮೇವಿನ ಗುಣ ಮಟ್ಟ ಕೂಡ ಹೋತು. ರೈತರ ಪರಿಸ್ಥಿತಿ ಕಠಿಣ ಆತು. ಹಾಂಗ ಕುರುಬರ ಸ್ಥಿತಿನೂ ಕಠಿಣ ಆತು. ರೈತರ ಸ್ಥಿತಿ ಯಾವಾಗ ಹಸನು ಆಗತ್ತೈತೋ ಆಗ ಕುರುಬನ ಸ್ಥಿತಿಯೂ ಛಲೋ ಅಗ್ತದ. ಬೆಳಗಾವಿದಾಗ ವೆಟರ್ನರಿಯವರು ನಮ್ಮ ಮಂದಿನೆಲ್ಲ ಕರಸಿ ನಮ್ಮ ಹತ್ರ ಸುಧಾರಿತ ತಳಿ ಕುರಿ ಅದಾವು ನಿಮ್ ಕಡೀಗಿರೋ ಕುರಿ ಮಾರಿ ಈ ಸುಧಾರಿತ ತಳಿ ಸಾಕ್ರಿ ಅಂದರು. ನಮ್ಮ ಜವಾರಿ ಕುರಿ ಡಕಣಿ ಭಾಳ ಛಲೊ ಅದಾವ್ರಿ. ನೀವು ಅ ನಮ್ಮ ಹಿಂದಿನ ತಳೀ ನ ಕಳಿರಿ ಅಂದ್ರ ನಾವು ಇಲ್ಲ ಕೂಂದ್ರ ಹಂಗಿಲ್ಲ ಅಂದ್ವಿ. ನಮ್ಮ ನಾಟಿ ಕುರಿ ಡಕಣಿ ತಳಿಗ ಉಣ್ಣಿ ಭಾಳ ಅದಾವು. ಅನಾದಿ ಕಾಲದಿಂದಲೂ ಅದರಿಂದ ನೂಲು ತೆಗೆದು ಕಂಬಳಿ ಮಾಡ್ತಾ ಇದ್ದಾರೆ. ಆದಿ ಕಾಲದಿಂದ ರೈತರಿಗೆ ಅದು ಒಳ್ಳೇದಿದೆ. ರೈತರಿಗೆ ಹೊತ್ಕೋಳ್ಳಕ್ಕ, ರಾಶಿ ಮಾಡಲಿಕ್ಕ, ಕೂರಿಗೆ ಮ್ಯಾಲ ಹೊಚ್ಚಲಾಕ, ಕುರುಬಗ ಹೊಚ್ಕೊಂಡು ಹಗಲಿ ರಾತ್ರಿ ಕುರಿ ಕಾಯಲಾಕ ಈ ತಳಿ ಛಲೋ ಅದ. ಅದಕ್ಕಾಗಿ ತಂತ್ರಜ್ಞಾನದ ಹಿಂದ ಹೋಗಿ ಸುಧಾರಿತ ತಳಿತಂದು ನಮಗ ಕ್ಯಾನ್ಸರ್ ಬರೋದು ಬ್ಯಾಡ, ನಮ್ಮ ಜೀವನ ಹಾಳಾಗೋದು ಬ್ಯಾಡ, ನಮಗ ಹಿಂದಿಂದು ಏನೈತಿ ಆ ಪದ್ಧತಿಯಿಂದ ಥೋಡೆ ಭಾಳ ದಿವಸ ಉಳಿತೀವಿ. ಹಾಗಾಗಿ ನಾವು ಬೆಳಗಾವಿ ಜಿಲ್ಲೆದಾಗ ಕುರುಬರ ಸಂಘಟನೆ ಮಾಡಿ ಬೆಳಗಾವಿ ತಾಲೂಕದಾಗ ಇದ್ದ ನಲವತ್ತು ಸಾವಿರ ಡಕಣಿ ಕುರಿನ ತಾಳಿಸಿ ಇಟ್ಟೇವಿ. ನಾವೇನು ಕಲಿತವರಲ್ಲ. ಪುಸ್ತಕ ಅಭ್ಯಾಸ ಮಾಡಿದೋನು ಅಲ್ಲ. ಹಿಂದಿನಿಂದ ನೋಡ್ಕೋತ ಬಂದು ಮುಂದ

ಏನಾಗತ್ತದ ಅನ್ನೋದನ್ನ ನೋಡಾಕಹತ್ತೀನಿ. ನಾವು ಕಲ್ಲು ಮಣ್ಣು , ಹಳ್ಳದಾಗಿನ ನೀರು ಕುಡಿದು ಬದುಕಿದ್ವಿ. ತಂತ್ರಜ್ಞಾನ ಬಂತು ರಸಾಯನ ಎಲ್ಲದಕ್ಕೂ ತಾಕಲಿಕ್ಕ ಶುರು ಆತು. ನಮಗ ಕ್ಯಾನ್ಸರ್ ಆಗ್ತದ, ಹಾರ್ಟ ಅಟ್ಯಾಕ್ ಆಗ್ತದ  ಅನ್ನೋ ಅಂಜಿಕೆ ಬಂದು ಹೋಗ್ಯಾದ.  ಇನ್ನ ಮುಂದ ಬದುಕೋದು ಭಾಳ ಕಷ್ಟ ಅದರಿ. ನನಗೆ ಇಲ್ಲಿ ಇಷ್ಟ ಮಾತಾಡಲಿಕ್ಕ ಅವಕಾಶ ಮಾಡಿದಕ್ಕ ನಿಮಗೆಲ್ಲರಿಗೂ ಪ್ರಣಾಮಗಳು.

**೧೦. ಡಾ॥ ನೂತನ್**

ಸಹ ನಿರ್ದೇಶಕರು

ಸಂಶೋಧನೆ

<u>ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು</u>



ಇವತ್ತು ಈ ನ್ಯಾಯ ಮಂಡಲಿಯಲ್ಲಿ ಗಂಡಸರು ಮತ್ತು ಹೆಂಗಸರು ಸಮಾನ ಸಂಖ್ಯೆಯಲ್ಲಿ ಇರೋದು ನನಗೆ ಬಹಳ ಸಂತಸ ತಂದಿದೆ. ಏಕೆಂದರೆ ಈ ರಾಷ್ಟ್ರದಲ್ಲಿ ಕೃಷಿ ನಡಿಯುತ್ತಿರುವುದು ಮಹಿಳೆಯರಿಂದ. ಶೇ. ೬೦ ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿ ಕೃಷಿಯಲ್ಲಿ ತೊಡಗಿಕೊಂಡಿರುವುದರಿಂದ ನಾವು ಇವತ್ತು ಊಟ ಮಾಡತಾ ಇದೀವಿ.  ತಾವು ಹಲವಾರು ಜಿಲ್ಲೆಗಳಿಂದ ಬಂದಿದ್ದೀರಿ. ಸಮಗ್ರ ಕರ್ನಾಟಕ ರಾಜ್ಯ ಇಂದು ನನ್ನ ಮುಂದೆ ಇರುವ ಭಾಸ ನನಗೆ ಆಗ್ತಿದೆ. ನಾನು ಕೃಷಿ ವಿಶ್ವವಿದ್ಯಾಲಯದಲ್ಲಿ ಸಹ ಸಂಶೋಧನಾ ನಿರ್ದೇಶಕನಾಗಿ ಕೆಲಸ ಮಾಡ್ತಾ ಇದ್ದೀನಿ.  ನಾವು ಕೃಷಿ ಸಂಶೋಧನೆ ಹ್ಯಾಗೆ ಮಾಡ್ತೀವಿ, ಕೃಷಿ ವಿಶ್ವವಿದ್ಯಾಲಯಗಳ ಪಾತ್ರ ಏನು, ರೈತರನ್ನು ನಮ್ಮ ಕಾರ್ಯಕ್ರಮದಲ್ಲಿ ಹೇಗೆ ಸೇರಿಸಿಕೊಂಡಿದ್ದೀವೆ ಅನ್ನೋದನ್ನ ನಿಮ್ಮ ಮುಂದೆ ಇಡೋದಕ್ಕೆ ಬಂದಿದ್ದೇನೆ. ನಮ್ಮ ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ಕಾರ್ಯಕ್ಷೇತ್ರ ರಾಜ್ಯದ ೧೫ ಜಿಲ್ಲೆಗಳಿಗೆ ಆವರಿಸಿದೆ. ನಮ್ಮಲ್ಲಿ ಹಲವಾರು ರೀತಿಯ ಕೆಲಸಗಳು ನಡೆಯುತ್ತಾ ಇವೆ. ಆರು ಕಾಲೇಜು ಇದೆ. ಸ್ಥಳದ ಹವಾಮಾನ, ಮಳೆ, ಮಣ್ಣಿನ ಗುಣಗಳನ್ನ ಆಧರಿಸಿ ಆರು ಕೃಷಿ ವಲಯಗಳನ್ನಾಗಿ ವಿಂಗಡಿಸಲಾಗಿದೆ. ಒಟ್ಟು ೨೦ ಕೃಷಿ ಸಂಶೋಧನಾ ಕೇಂದ್ರಗಳು ಕೆಲಸ ಮಾಡುತ್ತಾ ಇವೆ. ನಮ್ಮ ಮುಖ್ಯ ಕೆಲಸ ಅಂದರೆ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ.  ವಿಸ್ತರಣೆ ಅಂದರೆ ನಮ್ಮ ಸಂಶೋಧನೆಯಿಂದ ಏನು ಫಲಿತಾಂಶ ಬರತ್ತೆ ಅದನ್ನ ರೈತರಿಗೆ ತಲುಪಿಸೋದು. ಪದವಿ  ಸ್ನಾತಕ ಪದವಿ ತರಬೇತಿಗಳು, ಡಿಪ್ಲೋಮಾ ಕಾರ್ಯಕ್ರಮಗಳು, ಪಿ ಎಚ್ ಡಿ ಕಾರ್ಯಕ್ರಮಗಳು ನಡೆಯುತ್ತವೆ. ವಿದೇಶಿ ವಿದ್ಯಾರ್ಥಿಗಳೂ ಕೂಡ ನಮ್ಮ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಾ ಇದ್ದಾರೆ.  ಯಾವುದೇ ವಿಷಯದ ಬಗ್ಗೆ ಸಂಶೋಧನೆ ಪ್ರಾರಂಭಿಸ ಬೇಕಾದರೆ ಹಲವು ವಿಚಾರಗಳನ್ನ ಪರಿಗಣಿಸಬೇಕಾಗುತ್ತೆ. ಮೊದಲನೆಯದು ನಮ್ಮ ಸಂಶೋಧನೆಯಲ್ಲಿ ಇರುವ ತೊಡಕುಗಳೇನು? ಅದರಲ್ಲಿ ಏನಾದರು ಗ್ಯಾಪ್ ಇದೆಯಾ? ನಾವು ಎಲ್ಲಾದರು ತಪ್ಪು ಗ್ರಹಿಸುತ್ತಿದ್ದೀವಾ ಅನ್ನೋದನ್ನ ಗುರುತಿಸುತ್ತೀವಿ. ಎರಡನೆಯದು ಒಂದು ಬೆಳೆಯನ್ನು ಹಿಡಿದು ಅದರ ಅಭಿವೃದ್ಧಿ ನೀತಿಯನ್ನ ರೂಪಿಸುತ್ತೇವೆ. ಉದಾಹರಣೆಗೆ ಕೋಲಾರ ಜಿಲ್ಲೆಯಲ್ಲಿ ಟೊಮ್ಯಟೋ ಬೆಳೆ ಇಟ್ಟುಕೊಂಡು ಆ ಬೆಳೆಯ ಮೂಲಕ ರೈತರ ಅಭಿವೃದ್ಧಿಯನ್ನ ಹೇಗೆ ಸಮಗ್ರವಾಗಿ ಮಾಡಬಹುದು ಅನ್ನೋದನ್ನ ನೋಡ್ತಾಯಿದ್ದೇವೆ. ನಮ್ಮ ಜೊತೆಗೆ ಇತರ  ಹಲವಾರು ಸಂಸ್ಥೆಗಳು ಕೈ ಜೋಡಿಸುತ್ತಾ ಇದ್ದಾರೆ. ಉದಾಹರಣೆಗೆ ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ವಾಟರ್ ಶೆಡ್ ಡಿಪಾರ್ಟಮೆಂಟ್,  ಜೊತೆಗೆ ಕೆಲವು ವಿದೇಶಿ ಸಂಸ್ಥೆಗಳು ನಮ್ಮ ಸಂಶೋಧನೆಗೆ ಹಣವನ್ನ ಕೂಡ ಕೊಡತಾಯಿವೆ. ಒಟ್ಟಾರೆ ಸಹಕಾರ ಮತ್ತು ಸಹಯೋಗ ಎರಡನ್ನೂ ಒಗ್ಗೂಡಿಸಿ






ಕೊಂಡು ನಮ್ಮ ಸಂಶೋಧನೆಯನ್ನ ಕೈಗೊಳ್ತಾಯಿದ್ದೇವೆ. ಇಷ್ಟೆಲ್ಲ ಚಟುವಚಟಿಕೆಗಳನ್ನ ನಡೆಸಲು ನಮಗೆ ಹಣ ಹೇಗೆ ಬರುತ್ತದೆ ಅನ್ನೋದನ್ನ ನಿಮಗೆ ತಿಳಿಸಬೇಕು ಅಂತ ಅನ್ನಿಸುತ್ತಿದೆ. ಶೇ.೨೨ ಹಣ ನಮಗೆ ಯೋಜನೇತರ ಅನುದಾನದಿಂದ ಬರುತ್ತದೆ. ಶೇ.೩೬ ಭಾಗ ಯೋಜನೆಗಳ ಮೂಲಕ ಬರುತ್ತದೆ. ಕೆಲವು ಭಾಗ ತಾತ್ಕಾಲಿಕ ಯೋಜನೆಗಳಿಂದ ಬರುತ್ತದೆ. ಐ.ಸಿ.ಎ.ಆರ್ ನಿಂದ ಸ್ವಲ್ಪ ಪ್ರಮಾಣದ ಧನ ಸಹಾಯ ಬರುತ್ತೆ. ನಮ್ಮ ಸಂಶೋಧನೆಗಳಲ್ಲಿ ಕೋ–ಆರ್ಡಿನೇಟೆಡ್ ರಿಸರ್ಚ್ ಪ್ರೊಜೆಕ್ಟ್ ಅಂತ ಒಂದಿದೆ. ಇದು ರಾಷ್ಟ್ರ ಮಟ್ಟದಲ್ಲಿ ನಡೆಯುವ ಒಂದು ಕಾರ್ಯಕ್ರಮ.ಉದಾಹರಣೆಗೆ ಜೋಳದ ಬೆಳೆಯನ್ನ ತೊಗೋಳೋಣ. ನಮ್ಮ ದೇಶದಲ್ಲಿ ಜೋಳ ಎಲ್ಲೆಲ್ಲಿ ಚೆನ್ನಾಗಿ ಆಗುತ್ತದೋ ಅಲ್ಲೆಲ್ಲಾ ಜೋಳದ ಸಂಶೋಧನೆ ಮಾಡೋದಕ್ಕೆ ಒಂದೊಂದು ಕೇಂದ್ರ ಇದೆ. ಪ್ರತಿಯೊಂದು ಸಂಶೋಧನಾ ಕೇಂದ್ರದ ನಡುವೆ ಮಾಹಿತಿ ಹಂಚಿಕೆ ಆಗುತ್ತಿರುತ್ತೆ. ಇದರಿಂದ ಉತ್ತಮ ತಳಿಗಳ ಅಭಿವೃದ್ಧಿಗೆ ಬಹಳ ಸಹಾಯ ಆಗುತ್ತೆ. ಭಾರತದಲ್ಲಿ ನಡೆಯುತ್ತಿರುವ ಇಂತಹ ಬೃಹತ್ ಯೋಜನೆ ಪ್ರಪಂಚದಲ್ಲಿ ಇನ್ನೆಲ್ಲೂ ಇಲ್ಲ. ನಮ್ಮ ರಾಷ್ಟ್ರದಲ್ಲಿ ಆರು ಸಾವಿರ ಕೃಷಿ ವಿಜ್ಞಾನಿಗಳು ಇದ್ದಾರೆ. ಇಷ್ಟು ದೊಡ್ಡ ವಿಜ್ಞಾನಿಗಳ ತಂಡ ಇನ್ನೆಲ್ಲೂ ಇಲ್ಲ. ಇದಲ್ಲದೆ ರಾಷ್ಟ್ರೀಯ ಕೃಷಿ ಸಂಶೋಧನ ಕಾರ್ಯಕ್ರಮ ನಡಿತಾಯಿದೆ. ವಿಶ್ವವಿದ್ಯಾಲಯ ಉದ್ಯಮಿಗಳೊಂದಿಗೆ ಸೇರಿ ಯಾವುದೇ ಬೆಳೆಗೆ ಮೌಲ್ಯವರ್ಧನೆಗೆ ಸಂಶೋಧನೆ ನಡೆಸುವಂತಹ ಕೆಲಸ ಇದಾಗಿದೆ. ಒಟ್ಟಾರೆ ಈ ವರ್ಷ ೧೮೫ ಕೋಟಿ ಹಣದಲ್ಲಿ ೧೫ ಜಿಲ್ಲೆಗಳು ಹಾಗೂ ೬ ಕೃಷಿ ವಲಯಗಳಲ್ಲಿ ನಾವು ರೈತರನ್ನ ಮುಟ್ಟುವಂತಹ ಕೆಲಸ ಮಾಡುತ್ತಾ ಇದ್ದೀವಿ. ನಮ್ಮ ವಿಸ್ತರಣಾ ವಿಭಾಗದ ಮೂಲಕ ರೈತರನ್ನ ತಲುಪುವ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಪ್ರತಿ ಎರಡು ತಿಂಗಳಿಗೊಮ್ಮೆ ವಿಶ್ವವಿದ್ಯಾಲಯದ ವಿಜ್ಞಾನಿಗಳು, ಕೃಷಿ ಇಲಾಖೆಯವರು, ಇತರ ಅಭಿವೃದ್ಧಿ ಇಲಾಖೆಯವರು ಸೇರಿ ವಿಸ್ತರಣಾ ಕಾರ್ಯದ ಬಗ್ಗೆ ಚರ್ಚೆಮಾಡಿ ಕಾರ್ಯಯೋಜನೆ ಸಿದ್ಧ ಮಾಡುತ್ತೇವೆ. ವೈಜ್ಞಾನಿಕ ಸಲಹಾ ಸಮಿತಿಗಳು ವರ್ಷಕ್ಕೆ ಎರಡು ಸಾರಿ ಭೇಟಿ ಮಾಡುತ್ತವೆ. ಇಷ್ಟೆಲ್ಲಾ ಅಗ್ತಾ ಇದ್ದರೂ ಕೂಡ ರೈತರು ಮಾತ್ರ ಹಲವು ಕಾರಣಗಳಿಂದಾಗಿ ಕೃಷಿಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ತಮ್ಮ ಮಕ್ಕಳಿಗೆ ನಗರದಲ್ಲಿ ಯಾವುದಾದರೂ ಒಂದು ಚಿಕ್ಕ ಸರ್ಕಾರಿ ಕೆಲಸ ಸಿಕ್ಕರೂ ಸಾಕು ಅಂತ ಪ್ರಾರ್ಥನೆ ಮಾಡುತ್ತಾರೆ. ಹಳ್ಳಿ ಯುವಕರು ದಿನಾ ಪಕ್ಕದ ನಗರಕ್ಕೆ ಹೋಗುತ್ತಾರೆ. ದೇಶದ ಶೇಕಡಾ ೪೦ ರೈತರು ಇಂದು ವ್ಯವಸಾಯ ಬಿಟ್ಟುಬಿಡಲು ತಯಾರಾಗಿದ್ದಾರೆ. ನನಗೆ ಎಲ್ಲಾದರೂ ಒಂದು ಕೆಲಸ ಕೊಡಿಸ್ಬಿಡಿ ನನ್ನ ಕೈಲಿ ಕೃಷಿಯನ್ನ ಲಾಭದಾಯಕವಾಗಿ ಮಾಡೋಕೆ ಆಗೊಲ್ಲ ಅಂತಿದ್ದಾರೆ. ಇದು ಅತ್ಯಂತ ಶೋಚನೀಯ ಸ್ಥಿತಿ. ನಾವು ಗಂಭೀರವಾಗಿ ಕೂತು ಚರ್ಚೆ ಮಾಡಿ ರೈತರನ್ನ ಅವರ ಸಮಸ್ಯೆಯಿಂದ ಬಿಡುಗಡೆ ಮಾಡದಿದ್ದರೆ ನಾವು ಬಹಳ ಕಷ್ಟಕ್ಕೆ ಸಿಲುಕಬೇಕಾಗುತ್ತೆ.

ರೈತರು ಸರ್ಕಾರದ ಬೊಕ್ಕಸಕ್ಕೆ ೨೭ ಪೈಸೆ ನೀಡುತ್ತಿದ್ದಾರೆ. ಆದರೆ ಸರ್ಕಾರ ಅವರಿಗೆ ೪ ಪೈಸೆ ಮಾತ್ರ ಖರ್ಚು ಮಾಡ್ತಾಯಿದೆ. ಇದು ನ್ಯಾಯಾನಾ?

ರಾಷ್ಟ್ರದ ಬೇರೆ ಯಾವುದೇ ರಾಜ್ಯ ಮಾಡದಿದ್ದ ಒಂದು ಕೆಲಸವನ್ನ ನಮ್ಮ ರಾಜ್ಯ ಸರ್ಕಾರ ಮಾಡಿದೆ. ನಮ್ಮ ಸರ್ಕಾರ ಒಂದು ಕೃಷಿ ನೀತಿಯನ್ನ ಮಾಡಿದೆ. ಬೈರೇಗೌಡರು ಕೃಷಿ ಸಚಿವರಾಗಿದ್ದಾಗ ಇದನ್ನ ತಯಾರು ಮಾಡಲಾಯಿತು. ಇದನ್ನ ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳು, ರೈತರು ಎಲ್ಲಾ ಕೂತು ತಯಾರಿಸಿದ್ದು. ಇದರಲ್ಲಿ ರಾಜ್ಯದ ಕೃಷಿ ಯಾವ ದಿಕ್ಕಿನಲ್ಲಿ ಹೋಗಬೇಕು ಅಂತ ಇದೆ. ಶೇ ೭೦ ಜನ ಕೃಷಿಯನ್ನೆ ಅವಲಂಬಿಸಿರುವ ಕೃಷಿ ದೇಶದಲ್ಲಿ ಕೃಷಿ ಪ್ರತ್ಯೇಕ ಬಜೆಟ್ ಇಲ್ಲ. ದೇಶದಲ್ಲಿ ಎಂದು ರೈಲ್ವೇ ಬಜೆಟ್ ಗೆ ಮುಂಚೆ ಕೃಷಿ ಬಜೆಟ್ ಸಾಧ್ಯ ಆಗುತ್ತೋ ಅಂದು ನಾವು ನೀವು ಧನ್ಯರಾಗುತ್ತೇವೆ.

**೧೧. ಮೇ|| ಜ|| ಒಂಬತ್ಕೆರೆ**

ಅಧ್ಯಕ್ಷರು
ಮೈಸೂರು ಗ್ರಾಹಕ ಪರಿಷತ್
<u>ಮೈಸೂರು</u>



ಎಲ್ಲರಿಗೂ ನಮಸ್ಕಾರ. ನಾನು ಇಂದು ನಿಮ್ಮ ಮುಂದೆ ಕೃಷಿ ಸಂಶೋಧನೆಯಲ್ಲಿ ರೈತರು ಮತ್ತು ಗ್ರಾಹಕರ ಪಾತ್ರ ಏನು ಅನ್ನೋದನ್ನ ಮಾತನಾಡಲಿದ್ದೇನೆ. ಇವತ್ತಿನ ನಮ್ಮ ಕೃಷಿ ನೀತಿ ವ್ಯವಸಾಯಕ್ಕೆ ಬೇಕಾದ ಕೈಗಾರಿಕಾ ಉತ್ಪನ್ನ ಗಳನ್ನ ಹೆಚ್ಚು ಮಾಡೋದರ ಕಡೆಗೆ ಯೋಚನೆ ಮಾಡುತ್ತಾ ಇದೆ. ಉದಾಹರಣೆಗೆ ಕೃಷಿಗೆ ಬೇಕಾದ ಬೀಜ, ಗೊಬ್ಬರ, ನೀರು, ಕ್ರಿಮಿನಾಶಕ ಎಲ್ಲವೂ ಒಂದು ರೀತಿಯಲ್ಲಿ ಕೈಗಾರಿಕಾ ಉತ್ಪನ್ನವೇ ಆಗಿದೆ. ಬೇರೆ, ಬೇರೆ ಕಂಪನಿಗಳು,ಕೈಗಾರಿಕೆಗಳು ಇದನ್ನ ತಯಾರು ಮಾಡುತ್ತಾ ಇವೆ. ಕೃಷಿ ಹೆಚ್ಚು, ಹೆಚ್ಚು ಕೈಗಾರಿಕೆಗಳ ಮೇಲೆ ಅವಲಂಬಿಸಿದಷ್ಟೂ




ಕೈಗಾರಿಕೆಗೆ ಅನುಕೂಲವಾಗುತ್ತಾ ಹೋಗುತ್ತದೆ. ಆದದ್ದರಿಂದ ಇಂದಿನ ಕೃಷಿ ನೀತಿ ಆಳದಲ್ಲಿ ಕೈಗಾರಿಕೆಗಳನ್ನ ಬೆಳೆಸೋ ಉದ್ದೇಶವನ್ನ ಹೊಂದಿದೆ ಅಂತ ಹೇಳಬಹುದು. ಆಧುನಿಕ ಕೃಷಿ ನೀತಿಯಲ್ಲಿ ರೈತರು ಉತ್ಪಾದಕರು, ಮಿಕ್ಕವರೆಲ್ಲ ಗ್ರಾಹಕರು. ರೈತರ ಉತ್ಪಾದನೆಯಾದ ಆಹಾರ ಅನ್ನೋದು ಒಂದು ಸರಕು, ಒಂದು ಮಾರುಕಟ್ಟೆಯ ವಸ್ತು. ರೈತರು ಮನುಷ್ಯರು ಅವರಿಗೆ ಒಂದು ವಿಚಾರ ಇದೆ. ಹಾಗೆಯೇ ಗ್ರಾಹಕರೂ ಮನುಷ್ಯರು ಅವರಿಗೂ ಒಂದು ವಿಚಾರ ಇದೆ ಅನ್ನೋದನ್ನ ಅದು ಪರಿಗಣಿಸೋದಿಲ್ಲ. ಆಹಾರ ಅನ್ನೋದು ಬರೀ ಮಾರುಕಟ್ಟೆಯಲ್ಲಿ ಮಾರುವ ವಸ್ತು ಅಲ್ಲ ಅದಕ್ಕೆ ಬೇರೆ, ಬೇರೆ ಆಯಾಮಗಳಿವೆ ಅನ್ನೋದನ್ನ ಅದು ಮರೆತು ಬಿಟ್ಟಿದೆ. ಇಂದು ಕೃಷಿ ಕೃಷಿಯಾಗಿ ಉಳಿದಿಲ್ಲ ಅದು ಉದ್ಯಮ ಆಗುತ್ತಾಯಿದೆ. ಈ ಕೃಷಿಕೋದ್ಯಮದಲ್ಲಿ ಎಲ್ಲದಕ್ಕೂ ಬೆಲೆ.ಬೀಜಕ್ಕೆ ಬೆಲೆ, ಕೃಷಿ ಸಂಶೋಧನಾಲಯಕ್ಕೆ ಬೆಲೆ, ಅಲ್ಲಿ ಕೆಲಸ ಮಾಡುತ್ತಿರುವವರಿಗೆ ಬೆಲೆ, ಅವರ ಜ್ಞಾನಕ್ಕೆ ಬೆಲೆ. ಹೀಗೆ ಈ ಎಲ್ಲಾ ಬೆಲೆಗಳು ಮಾರುಕಟ್ಟೆಯಲ್ಲಿ ಸಿಗುವ ಉತ್ಪನ್ನಕ್ಕೆ ಸೇರಿರುತ್ತೆ. ಈ ಕೃಷಿಕೋದ್ಯಮದಲ್ಲಿ ರೈತರ ಜ್ಞಾನಕ್ಕೆ ಯಾವುದೇ ಬೆಲೆ ಇಲ್ಲ. ರೈತನಿಗೆ ನಾವು ಎಲ್ಲವನ್ನೂ ಕಲಿಸಬೇಕು ಅನ್ನೋ ಮೇಲರಿಮೆ ಈ ಕೃಷಿಕೋದ್ಯಮಕ್ಕೆ ಇದೆ. ಆಧುನಿಕ ಅರ್ಥಶಾಸ್ತ್ರದಲ್ಲಿ ಮಾರುಕಟ್ಟೆ, ಲಾಭ ಅನ್ನೋದು ಮನುಷ್ಯನಿಗಿಂತ ಮುಖ್ಯ ಆಗಿದೆ. ಆಹಾರ ಉತ್ಪಾದನೆ ಮನುಷ್ಯರಿಗೋಸ್ಕರನಾ ಅಥವಾ ಲಾಭ ಮಾಡೋದಕ್ಕ ಅನ್ನೋ ಪ್ರಶ್ನೆ ಎದ್ದರೆ ಅದು ಲಾಭ ಮಾಡೋದಕ್ಕೆ ಅಂತ ತೀರ್ಮಾನ ಆಗಿಬಿಟ್ಟಿದೆ. ಲಾಭ ಅನ್ನೋ ಮಾತು ನಮ್ಮ ಎಲ್ಲ ವ್ಯವಸ್ಥೆಯನ್ನ ನಾಶ ಮಾಡುತ್ತಾ ಇದೆ. ಇದರಲ್ಲಿ ಬಹಳ ಮುಖ್ಯವಾದ್ದು ಸಾರ್ವಜನಿಕ ವಿತರಣಾ ವ್ಯವಸ್ಥೆ. ಅದನ್ನ ನಿರ್ನಾಮ ಮಾಡೋ ಒಂದು ಕೆಲಸ ನಮ್ಮ ಮುಂದೆಯೇ ಆಗುತ್ತಾ ಇದೆ. ನಮ್ಮ ಈ ಒಂದು ವ್ಯವಸ್ಥೆಯಲ್ಲಿ ರಾಗಿ, ಜೋಳ, ನವಣೆ ಮುಂತಾದ ಬೆಳೆಗಳಿಗೆ ಮಾನ್ಯತೆಯೇ ಇಲ್ಲ. ಈ ವ್ಯವಸ್ಥೆ ಪ್ರೋತ್ಸಾಹ ಕೊಡುತಾಯಿರೋದು ಕೇವಲ ಅಕ್ಕಿ ಮತ್ತು ಗೋಧಿ ಬೆಳೆಗೆ ಮಾತ್ರ. ಹಾಗಾಗಿ ಹೆಚ್ಚಿನ ಬೆಳೆಗಳ ಉತ್ಪಾದನೆ ಲಾಭದಾಯಕವಾಗಿ ಕಾಣದೆ ಕಂಪನಿಗಳ ಗುತ್ತಿಗೆ ಕೃಷಿಗೆ ಹೋಗ್ತಾಯಿವೆ. ಕಂಪನಿಗಳು ನಮ್ಮ ರೈತರ ಕೈಯಲ್ಲಿ ವಿಚಿತ್ರವಾದ ಹಣ್ಣುಗಳು, ಚಿತ್ರವಿಚಿತ್ರ ಹೂಗಳನ್ನು ಆ ಭೂಮಿಲಿ ಬೆಳೆಸಿಸುತ್ತಾರೆ. ಇದನ್ನ ಉತ್ಪಾದನೆ ಮಾಡಿ ಹೊರ ದೇಶಗಳಿಗೆ ರಫ್ತು ಮಾಡಲು ಸರ್ಕಾರ ಪ್ರೋತ್ಸಾಹ ಕೊಡುತ್ತೆ. ಈ ರೀತಿಯ ಕೃಷಿಗೆ ವಿಜ್ಞಾನದ ಕುಮ್ಮಕ್ಕೂ ಇದೆ. ವಿಜ್ಞಾನ ನಾವು ತಿನ್ನುವ ಆಹಾರವನ್ನ ಅದನ್ನ ಬೆಳೆಯೋ ರೀತಿಯನ್ನ ಸಂಪೂರ್ಣವಾಗಿ ಬದಲಿಸುತ್ತಾ ಇದೆ. ಉದಾಹರಣೆಗೆ ಜನರು ತಿನ್ನುವ ಚಿಪ್ಸ್ ಒಂದೇ ಅಳತೆಯಲ್ಲಿ ಇರಬೇಕು ಅಂತ ಕಂಪನಿಯವರು ಯೋಚಿಸುತ್ತಾರೆ. ಅದಕ್ಕೆ ಬೇಕಾದ ಒಂದೇ ಅಳತೆಯ ಆಲೂಗೆಡ್ಡೆಯನ್ನ ವಿಜ್ಞಾನಿಗಳು ನಾವು ಬೆಳೆಸುತ್ತೀವಿ ಅಂತ ಹೊರಡುತ್ತಾರೆ. ರೆಫ್ರಿಜರೇಟರ್ ನಲ್ಲಿ ಇಡಲು ಕಲ್ಲಂಗಡಿ ಹಣ್ಣು ಗುಂಡಗಿದ್ದರೆ ಬಹಳ ಜಾಗ ಹಿಡಿಯುತ್ತೆ ಅಂತ ಚೌಕಾಕಾರದ ಕಲ್ಲಂಗಡಿಯನ್ನು ವಿಜ್ಞಾನಿಗಳು ಮಾಡಲು ಹೊರಟಿದ್ದಾರೆ. ಒಟ್ಟಿನಲ್ಲಿ ನಮ್ಮ ಕೃಷಿ ಸಂಶೋಧನೆ ಯಾವ ರೀತಿ ಪ್ಯಾಕ್ ಮಾಡಲು ಅನುಕೂಲವಾಗಬೇಕು, ಹೇಗೆ ಸಾಗಾಣಿಕೆಗೆ ಅನುಕೂಲ ಆಗಬೇಕು ಅನ್ನೋದರ ಕಡೆಗೆ ಇದೆ. ಆಹಾರದ ಗುಣಮಟ್ಟ ಸುಧಾರಣೆ ಮಾಡೋ ಕಡೆಗೆ ಸಂಶೋಧನೆಗಳು ಆಗ್ತಾಯಿಲ್ಲ. ಒಟ್ಟಿನಲ್ಲಿ ಲಾಭ ಹೇಗೆ ಮಾಡಬೇಕು ಅನ್ನೋದರ ಕಡೆಗೆ ಇದೆ. ಇಂತಹ ಸಂಶೋಧನೆಗಳು ಬಹುರಾಷ್ಟ್ರೀಯ ಕಂಪನಿಗಳ ಕೈಯಲ್ಲಿ ಇದೆ. ಈ ಎಲ್ಲಾ ಸಂಶೋಧನೆಗಳೆಲ್ಲವೂ ಬಹಳ ಗೌಪ್ಯವಾಗಿ ನಡಿತವೆ. ಆ ಸಂಶೋಧನೆ ಸಾರ್ವಜನಿಕ ಬಳಕೆಗೆ ಬಳಸಲು ಒಪ್ಪಿಗೆ ಕೊಡ ಬೇಕಾದಂತಹ ವೈಜ್ಞಾನಿಕ ಸಂಸ್ಥೆಗಳ ಮೇಲೆ ಅವು ಒತ್ತಡ ತರುತ್ತವೆ, ಆಮಿಶ ತೋರುತ್ತವೆ. ಅನೇಕ ಬಾರಿ ಹೀಗೆ ವಾಮಮಾರ್ಗವನ್ನು ಹಿಡಿದು ಸಾರ್ವಜನಿಕ ಬಳಕೆಗೆ ಬಿಡುಗಡೆ ಮಾಡುತ್ತವೆ. ಇಡೀ ಸಂಶೋಧನ ರಂಗ ಇಂದು ತಲೆಕೆಳಗಾಗಿ ನಡಿತಾಯಿದೆ. ನಮ್ಮ ಅಗತ್ಯ ಅಥವಾ ನಮ್ಮ ಸಮಸ್ಯೆ




ಬಗೆಹರಿಸಿಕೊಳ್ಳಲು ಸಂಶೋಧನೆ ಅಲ್ಲ. ನಮಗೆ ಏನು ಬೇಕೋ ಅದನ್ನು ಸಂಶೋಧನೆ ಮಾಡಿ ಅದನ್ನ ಬಳಕೆಗೆ ಬಿಡೋದು ಕಾಲ ನಿಯಮ ಆಗಿ ಹೋಗಿದೆ. ಇನ್ನು ಗ್ರಾಹಕರ ಬಗ್ಗೆ ಮಾತಡೋದಾದ್ರೆ ಕೆಲವು ಜನ ತಿನ್ನಲಿಕ್ಕೇ ಹುಟ್ಟಿರೋ ಹಾಗೆ ಸದಾ ಕಾಲ ತಿಂತಾನೇ ಇರ್‍ತಾರೆ. ಮತ್ತೆ ಹಲವು ಜನ ಬದುಕಿ ಉಳಿಯುವುದಕ್ಕಾಗಿ ತಿನ್ನಲು ಕಷ್ಟ ಪಡುತ್ತಲೇ ಇದ್ದಾರೆ. ಇನ್ನೊಂದು ಕಡೆ ಪಟ್ಟಣದ ಜನ ಇದಾರೆ. ಅವರಿಗೆ ಆಹಾರ ಹೇಗೆ ಬೆಳಿತಾರೆ ಅಂತ ಗೊತ್ತಿಲ್ಲ. ಅವರಿಗೆ ದೊಡ್ಡ ದೊಡ್ಡ ಮಾಲ್ ಗಳಿಗೆ ಹೋಗಿ ಡಬ್ಬಗಳಲ್ಲಿರುವ ಆಹಾರವನ್ನು ತಿನ್ನುವುದೇ ಅಭ್ಯಾಸ ಆಗಿ ಹೋಗಿದೆ. ಹೀಗಾಗಿ ಹಳ್ಳಿ ಮತ್ತು ನಗರದ ಜನರ ಮಧ್ಯೆ ದೊಡ್ಡ ಕಂದರ ಬೆಳೀತಿದೆ. ಇನ್ನು ಆಹಾರದ ಭದ್ರತೆ ಬಗ್ಗೆ ಮಾತನಾಡೋವಾಗ ಇಂಧನ ಭದ್ರತೆಯ ಬಗ್ಗೆಯೂ ನಾವು ಯೋಚನೆ ಮಾಡಬೇಕಾದ್ದು ಇಂದು ಅನಿವಾರ್ಯ ಆಗಿದೆ. ಇನ್ನು ಗ್ರಾಹಕರ ಹಕ್ಕಿನ ವಿಷಯಕ್ಕೆ ಬಂದರೆ ಗ್ರಾಹಕರಿಗೆ ತಾನು ಏನು ತಿನ್ನಬೇಕೋ ಅದನ್ನ ಆಯ್ಕೆ ಮಾಡಿಕೊಳ್ಳಲು ಅವನಿಗೆ ಅವಕಾಶ ಇರಬೇಕು. ಹಳ್ಳಿಯಲ್ಲಿರೋ ಜನಕ್ಕೆ ಅಲ್ಲೆ ಸಿಗೋದನ್ನ ತಿನ್ನೊದಕ್ಕೆ ಇಂದು ಸಾಧ್ಯವಾಗಲ್ಲ. ನನಗೆ ಇದೇ ಬೇಕು ಅಂತ ಹೋಗಿ ತಿನ್ನೋ ಶಕ್ತಿಯಿಲ್ಲ. ಅದನ್ನ ಕೊಳ್ಳುವಂತಹ ಶಕ್ತಿ ಮೊದಲೇ ಇಲ್ಲ. ಪಟ್ಟಣದಲ್ಲಿರುವ ಜನ ತಮಗೆ ಏನು ಬೇಕೋ ಅದನ್ನ ದೊಡ್ಡ ದೊಡ್ಡ ಅಂಗಡಿಗಳಿಗೆ ಹೋಗಿ ಕೊಂಡು ತಿಂತಾರೆ. ಆ ಹಕ್ಕಿನಲ್ಲಿ ನಾನು ಏನು ಕೊಳ್ಳುತ್ತಿದ್ದೇನೆ ಅದಕ್ಕೆ ಸಂಬಂಧಿಸಿದ ಪೂರ್ಣ ಮಾಹಿತಿ ನನಗೆ ಅರ್ಥವಾಗೋ ರೀತೀಲಿ ಇರಬೇಕು. ಆಹಾರ ಪದಾರ್ಥಗಳು ಗ್ರಾಹಕನಿಗೆ ಎಟಕು ಬೆಲೆಯಲ್ಲಿ ಇರಬೇಕು. ಈ ದೇಶದಲ್ಲಿ ಶೇ ೭೦ ಜನ ಬಡವರಿದ್ದಾರೆ. ದಿನಕ್ಕೆ ೨೦ ರೂ ಗಿಂತ ಹೆಚ್ಚಿನ ಸಂಪಾದನೆಯಿಲ್ಲದ ಕೋಟ್ಯಾಂತರ ಜನರಿದ್ದಾರೆ. ಅವರಿಗೆ ಎಟಕುವಂತಹ ಬೆಲೆಯನ್ನ ಆಹಾರ ಪದಾರ್ಥಗಳು ಹೊಂದಿರಬೇಕು. ನಾವು ಮಾತನಾಡುತ್ತಿರುವ ಗ್ರಾಹಕರು ಅಂದರೆ ಈ ದೇಶದ ಶೇ೭೦ ಜನ ಬಡ ಜನ. ಕೋಟ್ಯಾಂತರ ಸಂಪಾದನೆ ಮಾಡುವ ಈ ದೇಶದ ಶ್ರೀಮಂತ ವರ್ಗ ಅಲ್ಲ. ಯಾರಿಗೆ ಕೊಳ್ಳುವ ಶಕ್ತಿ ಕಡಿಮೆ ಇದೆ ಅವರಿಗೆ ಕೊಳ್ಳಲು ಸಾಧ್ಯವಾಗಬೇಕು. ನಾವು ಕೊಳ್ಳುವ ಆಹಾರದ ಬಗ್ಗೆ ಸ್ಪಷ್ಟ ಮಾಹಿತಿ ಇರಬೇಕು ಎಂದು ಯಾಕೆ ಕೇಳಬೇಕೆಂದರೆ ನಾವು ತಿನ್ನುವ ಆಹಾರ ಕುಲಾಂತರಿ ತಳಿಯದ್ದಾಗಿದ್ರೆ ಅದು ನಮಗೆ ಗೊತ್ತಾಗಬೇಕು. ಆ ಕಂಪನಿಗಳು ಅಮೇರಿಕಾದಲ್ಲಿ ಬಹಳ ವರ್ಷಗಳಿಂದ ಕುಲಾಂತರಿ ತಳಿ ಆಹಾರವನ್ನ ತಿನ್ನುತ್ತಾ ಇದ್ದಾರೆ ಅವರಿಗೆ ಏನೂ ಆಗಿಲ್ಲ, ಹಾಗಾಗಿ ನಿಮಗೂ ಏನೂ ಆಗಲ್ಲ ಅಂತಾರೆ. ಅಮೇರಿಕನ್ನರಿಗೆ ಕ್ಷೇಮವಾಗಿದೆ ಅಂದ ಮಾತ್ರಕ್ಕೆ ನಮಗೂ ಕ್ಷೇಮವಾಗಿದೆ ಅಂತಲ್ಲ. ಆಹಾರದ ಕಂಪನಿಗಳು ಎಷ್ಟು ಬಲಶಾಲಿಗಳಾಗಿವೆ ಅಂದರೆ ಅವರು ತಯಾರು ಮಾಡಿ ಮಾರುತ್ತಿರುವ ಆಹಾರ ಬಹಳ ಕ್ಷೇಮವಾಗಿದೆ ಅಂತ ಪ್ರಚಾರ ಮಾಡಬಲ್ಲ ಶಕ್ತಿ ಅವರಲ್ಲಿ ಅಗಾಧವಾಗಿದೆ. ಮಾಧ್ಯಮಗಳೆಲ್ಲಾ ಅವರದೇ ಆಗಿದೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಜಾಹಿರಾತು ಹಾಕುತ್ತಾರೆ. ತಪ್ಪನ್ನ ಕೂಡ ಸರಿ ಅಂತ ಬಿಂಬಿಸುತ್ತಾರೆ. ನಮ್ಮ ದೇಶದ ಕೃಷಿ ನೀತಿ ಕೂಡ ಇಂತಹ ದೊಡ್ಡ ಕಂಪನಿಗಳ ಹಿತ ಕಾಯೋದಕ್ಕೆ ರೂಪಗೊಳ್ಳುತ್ತಿವೆ. ನಮ್ಮ ಸರ್ಕಾರಗಳು ಒಂದು ರೀತಿಯಲ್ಲಿ ಕಾರ್ಪೊರೇಟ್ ಕಂಪನಿಗಳಿಗೆ ಭೂಮಿ ಒದಗಿಸುವ ಬ್ಯಾಂಕ್‌ಗಳಾಗಿ ಕೆಲಸ ನಿರ್ವಹಿಸುತ್ತಿವೆ. ಸರ್ಕಾರ ಜನಪರ ಕೆಲಸಕ್ಕಾಗಿ ಅಂತ ರೈತರ ಬಳಿ ಇರುವ ಜಮೀನನ್ನ ಸ್ವಾಧೀನ ಪಡಿಸಿಕೊಳ್ಳೋದು ನಂತರ ಅದನ್ನ ಖಾಸಗಿ ಬಹುರಾಷ್ಟ್ರೀಯ ಕಂಪನಿಗೆ ಕೊಡೋದು ಮಾಡ್ತಾ ಒಬ್ಬ ಬ್ಯಾಂಕರ್ ಮಾಡೋ ಕೆಲಸನ ಮಾಡ್ತಾ ಇವೆ. ಕಂಪನಿಯವರು ಯಾವುದು ಲಾಭವೋ ಅದನ್ನ ಮಾಡಲು ಶುರು ಮಾಡ್ತಾರೆ. ರೈತರ ಭೂಮಿಯಲ್ಲಿ ಜೈವಿಕ ಇಂಧನ ಕೊಡೊ ಸಸ್ಯ ಬೆಳಿತಾರೆ, ಇನ್ನೇನನ್ನೋ ಬೆಳಿತಾರೆ. ಆ ಭೂಮಿಯ ರೈತರು ಪಟ್ಟಣಗಳಿಗೆ ಬಂದು ಕೊಳಗೇರಿಗಳಲ್ಲಿ ವಾಸಿಸಲು ಪ್ರಾರಂಭಿಸುತ್ತಾರೆ. ನಮ್ಮ ದೇಶದ ಯೋಜನಾ ಆಯೋಗದವರು ಹಿಂದಿನ ಪಂಚವಾರ್ಷಿಕ ಯೋಜನೆಯ ಸಂದರ್ಭದಲ್ಲಿ ಕೃಷಿ

ಸಂಶೋಧನೆ ಆಹಾರದ ಇಳುವರಿ ಹೆಚ್ಚಿಸಲು ಬೇಕು ಅಂದಿದ್ದರು, ಈ ಪಂಚವಾರ್ಷಿಕ ಯೋಜನೆಯ ಸಂದರ್ಭದಲ್ಲಿ ವ್ಯವಸಾಯದ ಜ್ಞಾನ ಉನ್ನತಿಗೆ ಕೃಷಿ ಸಂಶೋಧನೆ ಬೇಕು ಅಂತ ಮಾತಾಡ್ತಾ ಇದ್ದಾರೆ. ಕೃಷಿ ಜ್ಞಾನ ಉನ್ನತಿಯನ್ನ ನಾವು ಅಮೇರಿಕಾದವರ ಸಹಯೋಗದಲ್ಲಿ ನಡೆಸಬೇಕು ಅಂತಾ ಇದ್ದಾರೆ. ಈ ಸಂಶೋಧನೆಗೆ ಒಂದು ಆಡಳಿತ ಮಂಡಲಿ ಇರುತ್ತೆ. ಆ ಆಡಳಿತ ಮಂಡಲಿಯಲ್ಲಿ ಯಾರ್‍ಯಾರು ಇದ್ದಾರೆ? ಅಮೇರಿಕಾದ ಮೂರು ದೊಡ್ಡ ಕಂಪನಿಗಳ ಪ್ರತಿನಿಧಿಗಳು ಇದರಲ್ಲಿದಾರೆ. ಮೊನ್ಸಾಂಟೋ, ವಾಲ್ಮಾರ್ಟ್,ಆರ್ಚರ್ಡ ಡೇನಿಯಲ್ ಮಿಡ್‌ಲ್ಯಾಂಡ್ಸ ನವರು ಇದ್ದಾರೆ. ಇವರೆಲ್ಲ ಈ ದೇಶದ ಕೃಷಿಯನ್ನ ಎತ್ತ ಒಯ್ಯುತ್ತಾರೆ ಅನ್ನೋದನ್ನ ಎಂತಹವರೂ ಊಹಿಸ ಬಹುದು. ಎಲ್ಲ ಸರ್ಕಾರಗಳು ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸಲು ಆಹಾರ ಉತ್ಪಾದನೆ ಜಾಸ್ತಿಯಾಗ ಬೇಕು ಅದಕ್ಕಾಗಿ ಏನು ಮಾಡಬೇಕು? ನೀರು ಒದಗಿಸಬೇಕು. ಬರೀ ನೀರು ಸಾಕೆ? ರಾಸಾಯನಿಕ ಗೊಬ್ಬರ ಬೇಕು. ಮೇಲೆ ಕ್ರಿಮಿನಾಶಕ ಬೇಕು. ಕೊಳವೆ ಬಾವಿಯಂದ ನೀರು ಎತ್ತಲು ವಿದ್ಯುತ್ ಬೇಕು. ಇದನ್ನ ಮಾಡಲು ದೊಡ್ಡ ಅಣೆಕಟ್ಟು ಕಟ್ಟ ಬೇಕು, ರಸ ಗೊಬ್ಬರದ ಕಾರ್ಖಾನೆ ತೆಗಿಬೇಕು, ವಿದ್ಯುತ್ ಸ್ಥಾವರಗಳನ್ನ ಪ್ರಾರಂಭಿಸಬೇಕು. ಆದರೆ ಸತ್ಯವನ್ನ ಯಾರೂ ಹೇಳ್ತಾ ಇಲ್ಲ. ನಮ್ಮ ದೇಶದ ಹಸಿವಿನ ಸಮಸ್ಯೆಗೆ ಆಹಾರದ ಕೊರತೆ ಕಾರಣ ಅಲ್ಲ. ಆಹಾರದ ಸರಿಯಾದ ವಿತರಣಾ ವ್ಯವಸ್ಥೆಯ ಸಮಸ್ಯೆ. ಸರ್ಕಾರದ ಉಗ್ರಾಣಗಳಲ್ಲಿ ಆಹಾರ ಕೊಳಿತಾಯಿದೆ. ಇಲಿಗಳು ತಿಂತಾಯಿವೆ. ಆದರೆ ಆಹಾರ ಮಾತ್ರ ಜನರಿಗೆ ತಲುಪಲ್ಲ. ಭಾರತ ದೇಶದ ರೈತರು ತಮ್ಮ ಭೂಮಿಯನ್ನ ತಾಯಿ ಅಂತ ತಿಳಿದಿದ್ದಾರೆ. ತಮ್ಮ ಭೂಮಿಯನ್ನ ತಮ್ಮ ಮಕ್ಕಳನ್ನು ಪೋಶಿಸುವಂತೆ ಪೋಶಿಸುತ್ತಾರೆ. ಅವರದು ಅತ್ಯಂತ ಸಣ್ಣ ಹಿಡುವಳಿ. ಆದರೆ ಅಮೇರಿಕಾದಲ್ಲಿ ಚಿಕ್ಕ ಹಿಡುವಳಿ ಅಂದರೆ ೨೦೦ ಎಕರೆ. ದೊಡ್ಡ ಹಿಡುವಳಿ ಅಂದರೆ ಲಕ್ಷ ಎಕರೆ. ಅಮೇರಿಕಾದಲ್ಲಿ ಕೃಷಿ ಅಂದರೆ ಅದು ಕೈಗಾರಿಕೆ. ಪೆಟ್ರೋಲಿಯಂ ಉತ್ಪನ್ನಗಳನ್ನ ಆಧರಿಸಿರುವ ಕೃಷಿ. ಇಂತಹ ಒಂದು ಕೃಷಿಯನ್ನ ನಮ್ಮ ದೇಶವು ಮಾದರಿಯಾಗಿ ಇಟ್ಟುಕೊಳ್ಳುತ್ತಾಯಿದೆ. ಸರ್ಕಾರ ರಾಸಾಯನಿಕ ಗೊಬ್ಬರದ ಕೃಷಿಗೆ ಸಬ್ಸಿಡಿ ಕೊಡುತ್ತೆ. ಆದರೆ ಸಾವಯವ ಕೃಷಿಗೆ ಸಬ್ಸಿಡಿ ಕೊಡೊಲ್ಲ. ರಾಸಾಯನಿಕ ಉತ್ಪನ್ನಗಳ ಬೆಲೆ ಸಹಜವಾಗಿ ಕಡಿಮೆ ಅನ್ನಿಸುತ್ತೆ. ಬಡತನದಲ್ಲಿ ಇರುವ ಗ್ರಾಹಕರು ಅದನ್ನ ಕೊಂಡು ತಿನ್ನುತ್ತಾರೆ. ಅದು ವಿಷ ಅದ್ರೂ ಕೂಡ ಅದನ್ನ ತಿನ್ನಬೇಕಾದ ಸ್ಥಿತಿ ಇದೆ. ನಮ್ಮ ದೇಶದ ವ್ಯವಸಾಯ ಸಮಸ್ಯೆಯನ್ನ ಅಭಿವೃದ್ಧಿಯ ಸವಾಲುಗಳಿಂದ ಬೇರೆ ಮಾಡಿ ನೋಡಲು ಸಾಧ್ಯವಿಲ್ಲ. ಈ ದೇಶದಲ್ಲಿ ಇಂದು ನಡೆಯುತ್ತಿರುವ ಅಭಿವೃದ್ಧಿ ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ನಡೆಯುತ್ತಿರುವ ಅಭಿವೃದ್ಧಿ. ಇದು ಜನರ ಹಿತಕ್ಕಾಗಿ ನಡೆಯುತ್ತಿರುವ ಅಭಿವೃದ್ಧಿಯಲ್ಲ. ನಮ್ಮ ಸಂಶೋಧನೆ ಹೇಗಿರಬೇಕೆಂದರೆ ಜನಪರವಾಗಿರಬೇಕು, ಜನಮಿತ್ರವಾಗಿರಬೇಕು. ಎಲ್ಲರನ್ನೂ ಒಳಗೊಂಡ ಸಂಶೋಧನೆಯಾಗಬೇಕು. ನಮ್ಮ ಸಂಶೋಧನೆಗಳು ಮಳೆ ಆಧಾರಿತ ಬೆಳೆಗಳನ್ನ ಕಾಪಾಡಬೇಕು. ರೈತರಿಗೆ ಸ್ವತಂತ್ರ ಕೊಡೋ ಸಾವಯವ ಕೃಷಿಗೆ ಒತ್ತು ಕೊಡಬೇಕು. ಆಹಾರದ ಭದ್ರತೆಯ ಕಡೆಗೆ ಗಮನ ಕೊಡಬೇಕು. ವಿಕೇಂದ್ರಿಕೃತವಾದ ಒಂದು ವ್ಯವಸ್ಥೆಗೆ ದಾರಿ ಮಾಡಿಕೊಡುವ ತಂತ್ರಜ್ಞಾನ ಸೃಷ್ಟಿಯಾಗಬೇಕು.

**ಡಾ॥ ಎಸ್. ಎ. ಪಾಟೀಲ**
ಮಾಜಿ ಕುಲಪತಿಗಳು
ಕೃಷಿ ವಿಶ್ವವಿದ್ಯಾಲಯ,
ಧಾರವಾಡ



ಎಲ್ಲರಿಗೂ ನಮಸ್ಕಾರ. ನಾನು ಗುಲ್ಬರ್ಗಾ ಜಿಲ್ಲೆಯಿಂದ ಬಂದವನು. ಇವತ್ತಿಗೂ ಹಿಂದುಳಿದ ಹಳ್ಳಿಗಳು ಏನಾದ್ರು ಇದ್ದರೆ ಅದರಲ್ಲಿ ನನ್ನ ಹಳ್ಳಿಯೂ ಒಂದು. ನಾನು ಅಭ್ಯಾಸ ಮಾಡುವಾಗ ೧೦ ಕಿ.ಮಿ ನಡೆದೇ ಹೋಗಬೇಕಿತ್ತು. ನನ್ನ ಊರಿನ ಹೆಸರು ಬಿರಾಳ ಅಂತ. ನಮಗೆ ೧೨೦ ಎಕರೆ ಹೊಲ ಇತ್ತು. ಮೂರು ಮಂದಿ ಅಣ್ಣ ತಮ್ಮಂದರು ಇದ್ದರು ನಮ್ಮ ಅಪ್ಪಂಗೆ ಎಲ್ಲರೂ






ದುಡಿತಿದ್ದರು. ಆದರೂ ಕೂಡ ಸಾಲ ಇತ್ತು. ಯಾಕೆಂದರೆ ಅವರು ಬರೀ ಜೋಳ ಮಾತ್ರ ಬೆಳಿತಿದ್ದರು. ೧ರೂಪಾಯಿಗೆ ೧೬ ಸೇರು ಜೋಳ ಮಾರುತ್ತಾ ಇದ್ದರು. ಇಷ್ಟೊಂದು ಬೆಳೆದೂ ಇವರು ಸಾಲದಲ್ಲಿರೋದನ್ನ ನೋಡಲಾರದೆ ಕೃಷಿ ವಿಜ್ಞಾನ ಓದಬೇಕು ಅಂಥ ತೀರ್ಮಾನ ಮಾಡಿದೆ. ನಮ್ಮೂರಿಗೆ ಈಗಿನ ಹಾಗೆ ಬಸ್ಸಿನ ಸೌಕರ್ಯ ಇರಲಿಲ್ಲ. ಭಾಳ ಕಷ್ಟಪಟ್ಟು ಇಂಟರ್ ವರಗೆ ಗುಲ್ಬರ್ಗದಲ್ಲಿ ಓದಿ ಧಾರವಾಡ ಕೃಷಿ ವಿದ್ಯಾಲಯಕ್ಕೆ ಸೇರಿದೆ. ಜೋಳದ ಮೇಲೆ ಸಂಶೋಧನೆ ಮಾಡಬೇಕು ಅಂತ ನನಗೆ ಭಾಳ ಆಸೆಯಿದ್ದರೂ ನನಗೆ ಸಂಶೋಧನೆ ಮಾಡಲು ಅವಕಾಶ ದೊರೆತದ್ದು ಹತ್ತಿ ಸಂಶೋಧನೆ ಮಾಡಲಿಕ್ಕೆ. ನಾನು ೧೯೬೭ರಲ್ಲಿ ಕೃಷಿ ಸಂಶೋಧನೆಗೆ ಕಾಲಿಟ್ಟವನು. ನನ್ನ ಸಂಶೋಧನಾ ಕೆಲಸ ಪ್ರಾರಂಭವಾದದ್ದು ಹತ್ತಿಯಿಂದ. ನಾನು ಸಂಶೋಧನೆಯ ಕೆಲಸ ಪ್ರಾರಂಭಿಸಿದಾಗ ತೆಳ್ಳಗಿನ ಬಟ್ಟೆಮಾಡಲಿಕ್ಕೆ ಅಂತ ಈಜಿಪ್ಟ ಮತ್ತು ಸೂಡಾನ ದೇಶಗಳಿಂದ ಉದ್ದ ಎಳೆಯ ಹತ್ತಿಯನ್ನ ಆಮದು ಮಾಡಿಕೊಳ್ಳುತ್ತಿದ್ವಿ. ಈ ಆಮದನ್ನ ತಪ್ಪಸಬೇಕು ಅಂತ ವರಲಕ್ಷ್ಮಿ, ಡಿಸಿಎಚ್ ೨ ಹತ್ತಿತಳಿಗಳನ್ನ ಕಂಡು ಹಿಡಿದ್ವಿ. ತುಂಬಾ ಪ್ರಚಾರಕ್ಕೆ ಬಂದ ರೈತರು ಮೆಚ್ಚಿದ ತಳಿಗಳು.

ಬಿ.ಟಿ.ಹತ್ತಿಬಂದರೂ ಇನ್ನೂ ಬಳಕೆಯಲ್ಲಿವೆ. ಗಿಡ್ಡ ತಳಿ ಭತ್ತ ಹಾಗೂ ಗಿಡ್ಡ ತಳಿ ಗೋಧಿಯಷ್ಟೇ ಮಹತ್ವದ ಸಂಶೋಧನೆ ಇದು. ಇದು ರಾಷ್ಟ್ರಕ್ಕೆ ನಮ್ಮ ರಾಜ್ಯದ ಕೊಡುಗೆ ಅನ್ನಬಹುದು. ಇದರಿಂದ ನಾವು ಹತ್ತಿಯನ್ನ ಆಮದು ಮಾಡಿಕೊಳ್ಳೋದು ನಿಲ್ತು. ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ನಾವು ಹತ್ತಿಯನ್ನ ರಫ್ತು ಮಾಡಲಿಕ್ಕೆ ಶುರು ಮಾಡಿದ್ದವಿ. ನಾವು ಅವಾಗಲೇ ಬೀಜ ಉತ್ಪಾದನೆಗೆ ರೈತರನ್ನಬಳಸಿ ಕೊಂಡಿದ್ವಿ. ಈ ಹತ್ತಿ ಸ್ವಲ್ಪ ಜೋತು ಬೀಳ್ತದ್ದರಿಂದ ಭಾಳ ಮಂದಿ ಇದು ಛಲೋ ಇಲ್ಲ ಅಂದರು. ಅದಕ್ಕೆ ಒಮ್ಮೆ ಕಾಟನ್ ಮಿಲ್ ನವರನ್ನಕರೆದು ಒಂದು ಕ್ಷೇತ್ರೋತ್ಸವ ಮಾಡಿ ಅವರಿಗೆ ಪರಿಚಯಿಸಿದ್ವಿ. ಅವರಿಗೆ ಈ ಹತ್ತಿ ಬಹಳ ಇಷ್ಟ ಆಗಿ ಈ ತಳಿಗೆ ಧಾರಣೆ ಬರಲಿಕ್ಕೆ ಪ್ರಾರಂಭ ಆಯಿತು. ಎರಡೇ ವರ್ಷದಲ್ಲಿ ೪೫,೦೦೦ ಎಕರೆಯಲ್ಲಿ ಬಳ್ಳಾರಿ , ರಾಯಚೂರು ಜಿಲ್ಲೆಯಲ್ಲಿ ಈ ತಳಿಯನ್ನ ರೈತರು ಬೆಳೆಯಲು ಪ್ರಾರಂಭಿಸಿದರು. ಆ ಹಂತದಲ್ಲೇ ಇದರ ಬೀಜ ಉತ್ಪಾದನೆಗೆ ರೈತರನ್ನ ಸೇರಿಸಿಕೊಂಡಿದ್ದವಿ. ರೈತರಿಂದ ೭೦ ರೂಪಾಯಿಗೆ ಬೀಜ ಖರೀದಿಸಿ ೩೦ ರೂಪಾಯಿಗೆ ಸ್ವಚ್ಛಮಾಡಲಿಕ್ಕೆ, ಪ್ಯಾಕಿಂಗ್ ಮಾಡಲಿಕ್ಕೆ ಬಳಸಿ ಕೇವಲ ನೂರು ರೂಪಾಯಿಗೆ ಬೀಜ ರೈತರಿಗೆ ಕೊಡತಾಯಿದ್ದವಿ. ಇದಕ್ಕೆ ಡಿಮಾಂಡ್ ಬಂತು ಅಂತ ರೈತರು ಕಂಪನಿಯವರ ತರಹನೆ ತಾವೇ ಹೆಚ್ಚಿನ ಬೆಲೆಗೆ ಅಂದರೆ ಕೆ.ಜಿ.ಗೆ ೪೦೦/೫೦೦ ರೂಗೆ ಮಾರಲಿಕ್ಕೆ ಸುರು ಮಾಡಿದ್ದರು.

ಒಮ್ಮೆ ನಮ್ಮ ಕೆಲಸಗಳಿಗೆ ಐ.ಸಿ.ಎ.ಆರ್ ಮೂಲಕ ವಿಶ್ವಬ್ಯಾಂಕಿನಿಂದ ಸಾಲದ ರೂಪದಲ್ಲಿ ಹಣ ಬಂತು. ಅವರು ನಿಮ್ಮ ಸಂಶೋಧನೆಯಲ್ಲಿ ರೈತರನ್ನ ಸಹಭಾಗಿಗಳನ್ನಾಗಿ ಮಾಡಿಕೊಳ್ಳಲೇ ಬೇಕು ಅಂದ್ರು. ಈ ಯೋಜನೆ ನಡೀತಿದ್ದಾಗ ನಾವು ೧೫–೨೦ ಮಂದಿ ವರ್ಲ್ಡ ಬ್ಯಾಂಕ್‌ನವರೊಂದಿಗೆ ಕೂಡಿ ಒಮ್ಮೆ ಧಾರವಾಡ ಜಿಲ್ಲ ಕುಂದಗೋಳ ತಾಲ್ಲೂಕಿನಾಗೆ ಪ್ರವಾಸ ಮಾಡಿದ್ವಿ. ಅಲ್ಲಿ ರೈತರನ್ನ ಕರೆದು ನೀವು ಏನು ಬೆಳಿ ತೆಗೀತಿರೀ ಅಂತ ಕೇಳಿದ್ವಿ.

ಅವರು ಒಂದೇ ಹೊಲದಾಗ ಒಂದೇ ಸಮಯದಲ್ಲಿ ಐದಾರು ಬೆಳಿ ಬೆಳೆಯೋದನ್ನ ನೋಡಿ ವರ್ಲ್ಡ್ ಬ್ಯಾಂಕ ಮಂದಿ ಗಾಭರಿಯಾಗಿ ಇವರಿಗೆ ಹೇಳಲಿಕ್ಕೆ ಏನೂ ಇಲ್ಲ ಇವರಿಂದ ಕಲಿಯಾಕೆ ಭಾಳ ಅದಾವು ಅಂದ್ರು. ಗಂಗಾವತಿ ಕಡಿಗೆ ಹೋಗಿ  ನೋಡಿ ೪೦ ಚೀಲ ಭತ್ತ ಬೆಳಿತಾರೆ, ೧೨ ಚೀಲ ಗೊಬ್ಬರ ಹಾಕ್ತಾರೆ,  ನಾಲ್ಕೈದು ಸಾವಿರ ರೂಪಾಯಿ ಔಷಧ ಹೊಡಿತಾರೆ. ಹೊಡೆದದ್ದೂ ಹೊಡೆದದ್ದೆ. ಗೊಬ್ಬರ ಅತಿಯಾಗಿ ಹಾಕಿ, ಬೇಕೂಂತ ಹುಳ ಹುಟ್ಟಿಸುತ್ತಾರೆ. ಹುಳ ಹುಟ್ಟಿದ್ಮೇಲೆ, ಔಷಧ ಹೊಡೆದು ಹೊಡೆದು ಹುಳ ಕಂಟ್ರೋಲ್ ಮಾಡ್ತಾರೆ. ಒಂದು ಎಕರೆಗೆ ೧೦ ರಿಂದ ೧೨ ಸಾವಿರ ಖರ್ಚು ಮಾಡ್ತಾರೆ.  ಅವರಿಗೆ ನಾಲ್ಕೈದು ಸಾವಿರ ಉಳಿಸಿದ್ರೆ ಹೆಚ್ಚಾಗ್ತದೆ. ಅದೇ ಬುದ್ಧಿವಂತ ಒಣ ಹೊಲದ ರೈತರು ಎಕರೆಗೆ ಇಪ್ಪತ್ತೈದು ಸಾವಿರ ಮಾಡ್ತಾರೆ. ಯಾರು ಕಡಿಮೆ ಖರ್ಚು ಮಾಡಿ ಹೆಚ್ಚು ಲಾಭ ಮಾಡ್ತಾರೊ ಅವರು ಬುದ್ಧಿವಂತ ರೈತರು. ನೂರಮೂವತ್ತು ವರ್ಷದ ಹಿಂದೆ ಕನ್ನಮಟ್ಟಿ ಸೀಳುಗೋಳ ಅವರು ಬರೆದ ಪುಸ್ತಕ ಕೃಷಿ ಜ್ಞಾನ ದೀಪಿಕೆಯನ್ನ ನೋಡಿದರೆ ನಮ್ಮ ರೈತರಿಗೆ ಎಂತಹ ಕೃಷಿ ಜ್ಞಾನ ಇತ್ತು ಅನ್ನೋದು ತಿಳಿತದೆ. ಇವತ್ತಿನವರು ಆ ಪುಸ್ತಕವನ್ನ ಓದಿ ೫೦ ಪಿ.ಎಚ್.ಡಿ ಮಾಡಬಹುದು. ಎಲ್ಲಾನೂ ರೈತರ ಕಡಿಗೆ ಇತ್ತು. ನಾವು ಸರ್ಕಾರದವರು ಬಂದ್ವಿ, ಸಂಸ್ಥೆಗಳು ಬಂದ್ವು, ಸಂಶೋಧನೆ ಬಂತು, ಬ್ರಿಟೀಷರು ಏನೋ ಒಂದು ವ್ಯವಸ್ಥೆ ಮಾಡಿದ್ರು. ಆಮೇಲೆ ಸ್ವತಂತ್ರ ಬಂದ ಮ್ಯಾಲೆ ಸರ್ಕಾರದವರು ಯುನಿವರ್ಸಿಟಿ ಮಾಡಿದರು. ಡಿಪಾರ್ಟಮೆಂಟ್ ಬಂತು, ದೇಶಕ್ಕೆ ಒಳ್ಳೆಯದಾಗಿದೆ, ವಿಜ್ಞಾನಿಗಳಿಗೆ ಒಳ್ಳೆಯದಾಗಿದೆ, ಇಂಡಸ್ಟ್ರೀಸ್‌ಗಳಿಗೆ ಒಳ್ಳೆಯದಾಗಿದೆ ಇಲ್ಲ ಅಂತ ಇಲ್ಲ. ಆದ್ರೆ ಖರ್ಚಿನ ದೃಷ್ಟಿಯಂದ, ರೈತನ ಹಿತ ದೃಷ್ಟಿಯಿಂದ ಅಂತಹ ಒಳ್ಳೆಯದು ಆಗಿಲ್ಲ. ಇವತ್ತು ಚಿನ್ನದ ಬೆಲೆ ಏರಿರೋ ರೀತಿಯಲ್ಲೆ ಆಹಾರದ ಬೆಲೆನೂ ಏರಿದ್ರೆ ರೈತರೂ ಛಲೇ ಇರ್ತಿದ್ದರು. ಹಾಗೇ ಬಿಟ್ಟರೆ ಆಗುತ್ತೆ. ೩ರೂಗೆ ಕಿಲೋ ಅಕ್ಕಿ, ೨ರೂಗೆ ಕಿಲೋ ಗೋಧಿಯಂತಹ ಸ್ಕೀಮುಗಳು ಹಾಗೆ ಆಗೋದಿಕ್ಕೆ ಬಿಡೋದಿಲ್ಲ. ನಾನು ಅದರ ಬಗ್ಗೆ ಏನೂ ಹೇಳೋದಿಲ್ಲ. ಸರ್ಕಾರದ ಅನೇಕ ಸ್ಕೀಮುಗಳು ಬರ್ತವೆ ಹೋಗ್ತವೆ ನಾವು ರೈತರು ಅದರ ಬಗ್ಗೆ ಹುಶಾರಗಿರಬೇಕು. ಈ ದೇಶದಲ್ಲಿ ಮುಂದೆ ಏನಾದ್ರೂ ಒಳ್ಳೇದು ಆಗಬೇಕಿದ್ರೆ ಅದು ರೈತರಿಂದಲೇ ಆಗಬೇಕು.

• • • • • • • • • •



## ಪ್ರಶ್ನೋತ್ತರ

ಪ್ರತಿ ವಿಚಾರ ಮಂಡನೆಯ ನಂತರ ನ್ಯಾಯ ಮಂಡಲಿ ಪರಿಣತರಿಗೆ ಅನೇಕ ಪ್ರಶ್ನೆಗಳನ್ನು ಕೇಳಿ ವಿಚಾರವನ್ನು ಸ್ಪಷ್ಟ ಪಡಿಸಿಕೊಳ್ಳುತ್ತಿತ್ತು. ಇಲ್ಲಿ ಆಯ್ದು ಕೊಟ್ಟಿರುವ ಪ್ರಶ್ನೋತ್ತರಗಳು ಮೂರುದಿನಗಳ ಕಾಲ ಸತತವಾಗಿ ನಡೆದ ಚರ್ಚೆಯಲ್ಲಿ ಬಂದು ಹೋದ ಎಲ್ಲ ವಿಷಯಗಳನ್ನೂ ಒಳಗೊಂಡಿದೆ ಎಂದು ಹೇಳಲಾಗದು. ಬದಲಿಗೆ ಅಂಚಿಗೆ ತಳ್ಳಲ್ಪಟ್ಟ ಮಹಿಳೆಯರು ಮತ್ತು ಪುರುಷರೂ ಕೂಡ ಗಹನವಾದ ವಿಷಯಗಳಿಗೆ ಹೇಗೆ ಸ್ಪಂದಿಸಿ ಪ್ರಶ್ನೆಗಳನ್ನು ಕೇಳಬಲ್ಲರು ಎಂಬುದನ್ನು ಪ್ರತಿನಿಧಿಸುತ್ತದೆ ಎಂದು ಹೇಳಬಹುದು. ಇದು ನಿಮಗೆ ಇಡೀ ಚರ್ಚೆಯ ವಿವಿಧ ಆಯಾಮಗಳನ್ನು ಪರಿಚಯಿಸುವಲ್ಲಿ ಯಶಸ್ವಿಯಾಗುತ್ತದೆ ಎಂದು ಭಾವಿಸುತ್ತೇವೆ. ಹಾಗೆಯೇ ಚರ್ಚೆಯ ಸಮಯದಲ್ಲಿ ಮೂಡಿಬಂದ ಮನತಟ್ಟಿದ ಕೆಲವು ಹೇಳಿಕೆಗಳನ್ನೂ ಸಹ ಇಲ್ಲಿ ಕೊಡಲಾಗಿದೆ.

***ಸಿದ್ದರಾಜಪ್ಪ :*** *ನಾವು ಹೋಯ್ತಿದ್ದ ದಾರಿಯಲ್ಲಿ ಸರಿಯಾಗೇ ಹೋಯ್ತಿದ್ದೊ, ಹಿಂದಿನ ತಲೆಮಾರಿನಿಂದ ಬಂದ ಪದ್ಧತಿನ ಉತ್ತೇಜನ ಮಾಡ್ಕೊಂಡು ಇದ್ದೊ. ಮಕ್ಕಳು ಮರಿ ಸಾಕ್ತಿದ್ವಿ, ಆಸ್ತಿ ಕಳಿತಿರಲಿಲ್ಲ, ಒಳ್ಳೆ ಧರ್ಮದಲ್ಲಿ ನಡೀತಿದ್ವಿ. ನೀವು ಬೇರೆ, ಬೇರೆ ವೆರೈಟಿ ತಂದ್ಬಿಟ್ಟು ಏನೇನೋ ಮಾಡಿದ್ರಿ ಇದನ್ನ ಇವಾಗ ನಿಲ್ಸಕ್ಕೆ ಆಗೊಲ್ವಾ?*

***ಅಜ್ಜಮ್ಮ ಇಲ್ಲೆಪ್ಪನವರ :*** *ಈಗ ಗೊಂಜೋಳ ಜಾಸ್ತಿ ಬರೋಹಾಂಗ ಮಾಡಿದ್ರಿ. ಯಾರಿಗ ಉಪಯೋಗ ಆತ್ರಿ ಅದು? ಕೋಳಿ ಕಂಪನಿ ಅವರಿಗೆ ಆತು. ರೈತರಿಗೆ ಏನು ಉಪಯೋಗ ಆಗಲಿಲ್ರಿ.*

ನಾವು ರಾಸಾಯನಿಕ ಗೊಬ್ಬರ ಹಾಕಿದ್ರೆ, ನಮ್ಮ ಭೂಮಿಯಲ್ಲ ನಮಗೇನು ಸಿಗೊಲ್ಲ. ಮುಂದೆ ಭೂಮಿ ತಾಯಿ ನಮಗೆ ಅನ್ನ ಕೊಡೊಲ್ಲ. ಭೂಮಿ ತಾಯಿಗೆ ಜ್ವರ ಬಂದಿದೆ. ಅದಕ್ಕೆ ಕೊಟ್ಟಿಗೆ ಗೊಬ್ಬರ ಹಾಕಿ ಸರಿ ಪಡಿಸಬೇಕು. ಅಂದ್ರೆ ಮಾತ್ರ ನಮಗೆ ಅನ್ನ ಸಿಗ್ತದೆ. ಭೂ ತಾಯಿನೂ ಸಂತೋಷದಿಂದ ಇರ್ತಾಳೆ.

*– ಶೋಭಾವತಿ*

***ಶಾಂತಿಮೂಲೆ :*** *ಈಗಿನ ತಲೆಮಾರಿನ ರೈತರು ಬೆಳಿಗ್ಗೆ ಇಂದ ರಾತ್ರಿವರಗೆ ಆಕಾಶವಾಣಿಲಿ ಟಿ.ವಿ ಲಿ ರಾಸಾಯನಿಕ ಗೊಬ್ಬರಗಳ ಬಗ್ಗೆ ಕೇಳ್ತಾರೆ. ಪ್ರಜೆಗಳ ಹಕ್ಕು ಅಂತ ನೀವು ಹೇಳಿದ್ರಿ ಪ್ರಜೆಗಳ ಕೂಗನ್ನ ಸರ್ಕಾರ ಮತ್ತು ಯುನಿವರ್ಸಿಟಿಗಳು ಕೇಳಬೇಕು*





*ಅಂದ್ರಿ. ಈ ವಿಚಾರದಲ್ಲಿ ಯುನಿವರ್ಸಿಟಿಗಳು ಏನು ಕೆಲಸ ಮಾಡ್ತಿವೆ?*

**ಡಾ॥ ಸರ್ವೇಶ :** ಎಲ್ಲೋ ಒಂದು ಕಡೆ ನಾವು ಎಡವಿದವಿ ಅನ್ನೋದು ತಿಳವಳಿಕೆಗೆ ಬಂದಿದೆ. ಇದು ಸರ್ಕಾರಕ್ಕೂ ಬಂದಿದೆ, ವಿಜ್ಞಾನಿಗಳಿಗೂ ಬಂದಿದೆ. ವಿಜ್ಞಾನಿಗಳಲ್ಲೂ ಒಂದು ತೊಂದರೆ ಆಗಿದೆ. ಇಲ್ಲೂ ಕೂಡ ವಿಶೇಷಜ್ಞರ ತೊಂದರೆ. ಹೇಗೆ ಕಿವಿ ಡಾಕ್ಟರ್‌ಗೆ ಕಣ್ಣು ಗೊತ್ತಿರಲ್ವೋ, ಹೊಟ್ಟೆ ಡಾಕ್ಟರ್‌ಗೆ ಕಾಲಿನ ಸಮಸ್ಯೆ ಗೊತ್ತಿರಲ್ವೋ ಹಾಗೆ. ಇಲ್ಲೂ ಕೂಡ ಕೀಟದೋನು ಬರೇ ಕೀಟ ನೋಡ್ತಾನೆ. ತಳಿಯವನು ಬರೇ ತಳಿ ನೋಡ್ತಾನೆ, ರೋಗದೋನು ಬರೇ ರೋಗ ನೋಡ್ತಾನೆ. ಇದೇ ವಿಷಯವನ್ನ ಮೊನ್ನೆ ನಾನು ರಿಸರ್ಚ ಕೌನ್ಸಿಲಿಂಗ್ ಮೀಟಿಂಗ್ ನಲ್ಲಿ ಹೇಳ್ದೆ. ಒಂದು ಹಂತದಲ್ಲಿ ವಿಜ್ಞಾನಿಗಳು ದಾರಿ ತಪ್ಪಿರಬಹುದು. ಅದು ಬೇಕೆಂದೇ ಮಾಡಿದ್ದಲ್ಲ. ವಿಜ್ಞಾನಿಗಳ ದೃಷ್ಟಿಕೋನ ಸ್ವಲ್ಪ ಬದಲಾಗಬೇಕು ಅನ್ನೋ ಮಾತೇನಿದೆ ಅದನ್ನ ನಾನು ಒಪ್ತೇನೆ. ಖಂಡಿತವಾಗ್ಲೂ ಬದಲಾವಣೆ ಮಾಡಿಕೊಳ್ಳಬೇಕು.

* * * * * *

***ಮಾರುತಿ ಹೊಸಮನಿ :*** *ಹಾಗಾದರೆ ರೈತರು ಅಭಿವೃದ್ಧಿಯನ್ನ ನೋಡಬಾರದು ಅಂತನಾ ನೀವು ಹೇಳ್ತಿರೋದು?*

**ಸುನಂದಾ ಜಯರಾಂ :** ಇಲ್ಲ ಹಾಗಲ್ಲ ಅಭಿವೃದ್ಧಿ ರೈತರ ಬದುಕನ್ನ ಹಾಳು ಮಾಡಬಾರದು. ಆರೋಗ್ಯಕರ ಬೆಳೆ ಬೆಳೆಯುವಂತಾಗಬೇಕು, ಜನರ ಬದುಕಿಗೆ ಪೂರಕವಾಗುವಂತಹ, ವಲಸೆ ತಪ್ಪಿಸುವಂತಹ, ಆರೋಗ್ಯ ಹಾಳುಮಾಡದೆ ಇರುವಂತಹ ಅಭಿವೃದ್ಧಿ ಬೇಕು.

> ಇಂದಿನ ಪರಿಸ್ಥಿತಿಯಲ್ಲಿ ಉಳುಮೆ ಮಾಡಿ, ಬೀಜ, ಗೊಬ್ಬರ ಸಾಲ ತಂದು ಆತ್ಮಹತ್ಯೆ ಮಾಡಿಕೊಳ್ಳೋಕ್ಕಿಂತ ಎಲ್ಲಾದ್ರೂ ತಿರಿದು ಕೊಂಡು ತಿನ್ನೋದು ವಾಸಿ ಅನಿಸ್ತಿದೆ
>
> – ಸಾಮವ್ವ

**ಹೇಮವ್ವ :** *ನಮ್ಮ ರೈತರ ತಪ್ಪು ಯಾಕಿಲ್ಲ ರಿ? ನಮ್ಮ ರೈತರ ತಪ್ಪು ಸಾಕಷ್ಟು ಐತ ರ್ರೀ. ಯಾಕೆ ಅಂದ್ರೆ, ನಾವು ದೊಡ್ಡವರಾಗ್ಬೇಕು, ನಾವು ಶ್ರೀಮಂತರಾಗ್ಬೇಕು, ೧೨ ನೂರು ರೂಪಾಯಿ ಕೊಟ್ಟು ಟ್ರ್ಯಾಕ್ಟರ್ ಹೊಡಿಸಬೇಕು, ಬಿ.ಟಿ. ಬೀಜ ತಂದು ಹಾಕ್ಬೇಕು. ಬಹಳಷ್ಟು ದುಡಿಯಬೇಕು, ನಾವು ಶ್ರೀಮಂತರಾಗ್ಬೇಕು ಅಂತ, ಯೋಚನೆ ಮಾಡಿದ್ದು ನಾವೆ ತಾನೆ? ನಾವು ಅದೇ ಬೀಜ ಹಾಕೋ ಬದಲು, ನಾವೇ ಕಟ್ಟಿಗೆ ರಂಡಿನಲ್ಲಿ ಹೊಡೆದುಕೊಂಡು, ನಾವೇ ಬೇಸಾಯ ಮಾಡಿಕೊಂಡು, ನಾವೇ ದುಡಿದುಕೊಂಡು, ನಮ್ಮ ಗಟ್ಟಿ ಬೀಜ ನಾವೇ ಇಟ್ಕೊಂಡು, ನಾವೇ ಮಾಡಿಕೊಂಡ್ರೆ ಯಾರು ಬೇಡ ಅಂತಿದ್ದರು? ನಮ್ಮ ರೈತರದ್ದು ಮುಕ್ಕಾಲು ಭಾಗ ತಪ್ಪಿದೆ. ಈಗ ನಾನು ರೈತ ಮಹಿಳೆಯಾಗಿ, ಬಿ.ಟಿ. ಬೀಜ ತಂದದ್ದು ನಾನು, ಗೊಬ್ಬರ ತಂದದ್ದು ನಾನು, ಆಮೇಲೆ ಗೋವಿನ ಜೋಳದ ಪ್ಯಾಕೆಟ್ ತಂದದ್ದು ನಾನು, ನನ್ನದ್ಯಾಕೆ ತಪ್ಪಿಲ್ಲ? ನನ್ನದೂ ಮುಕ್ಕಾಲು ಭಾಗ ತಪ್ಪಿದೆ. ನಾವೇ ಸರ್ಕಾರದ ಹತ್ತಿರ ಹೋಗಿ ಬೀಜ ಕೊಡ್ರಿ, ಗೊಬ್ಬರ ಕೊಡ್ರಿ ಅಂತ ಕೇಳಿದೆವು. ನಾವೆ ಬೀಜ ಮಾಡಿ, ನಾವೆ ದುಡಿದು, ನಮ್ಮ ಕೊಟ್ಟಿಗೆ ಗೊಬ್ಬರ ಹಾಕಿ ಮಾಡಿದ್ರೆ ಯಾಕೆ ಆಗೋದಿಲ್ಲ? ಆಮೇಲೆ ಜವಾರಿ ಎಮ್ಮೆ ಬಿಡೋದು, ಜವಾರಿ ಆಕಳ ಬಿಡೋದು, ಫಾರಂ ಎಮ್ಮೆ ತರೋದು, ಜರ್ಸಿ ಆಕಳ ತರೋದು, ನಾವು ಮನುಷ್ಯರ ಅವಶ್ಯಕತೆ ಬಿಟ್ಟು ಹಂದಿ ಅವಶ್ಯಕತೆ ನೋಡಾಕಹತ್ತೀವಿ. ತಪ್ಪೆಲ್ಲ ರೈತರದೇ ಆಗಿದೆ ರೀ.*

**ಸುನಂದ ಜಯರಾಂ :** ನೀವು ಹೇಳೋಮಾತ್ನಲ್ಲಿ ಅರ್ಥ



ಇದೆ. ನಾನು ಹೇಳೋದು ಇಷ್ಟೆ. ಇದು ಕೇವಲ ರೈತರಿಂದ ಆಗಿರೋ ತಪ್ಪಲ್ಲ. ಸರ್ಕಾರದ ಹಾಗೂ ವ್ಯವಸ್ಥೆಯ ತಪ್ಪೂ ಇದೆ. ಸರ್ಕಾರನೂ ರೈತರ ಪರವಾಗಿ, ರೈತರ ಹಿತಕ್ಕಾಗಿ ಕೆಲಸ ಮಾಡಬೇಕು.

* * * * * *

***ಹೊಯ್ಸಳ ಅಪ್ಪಾಜಿ :*** *ಸಂಶೋಧನೆಗಳು ಜ್ಞಾನ ಹಾಳು ಮಾಡುತ್ತವೆ ಅಂತ ಹೇಳಿದ್ರಿ. ಅವರಿಗೆ ಸಂಶೋಧನೆ ಮಾಡಲಿಕ್ಕೆ ಹಕ್ಕು ಎಲ್ಲಿಂದ ಬಂತು ಅಂತ ಕೇಳಿದ್ರಿ. ಇದನ್ನ ಸ್ವಲ್ಪ ವಿವರಿಸ್ತೀರಾ?*

**ಗಾಯತ್ರಿ :** ಸಂಶೋಧನೆಗಳು ಜ್ಞಾನವನ್ನ ಹಾಳು ಮಾಡ್ತವೆ ಅಂದರೆ ಒಂದು ಜ್ಞಾನ ವ್ಯವಸ್ಥೆ ಇನ್ನೊಂದು ಜ್ಞಾನ ವ್ಯವಸ್ಥೆ ನಾಶ ಮಾಡ್ತದೆ ಅಂತ ಅರ್ಥ. ಉದಾಹರಣೆಗೆ ಪಶ್ಚಿಮದಿಂದ ಬಂದ ಜ್ಞಾನ ವ್ಯವಸ್ಥೆ ನಮ್ಮ ಜ್ಞಾನ ವ್ಯವಸ್ಥೆಯನ್ನ ಹಾಳು ಮಾಡುತ್ತಿರುವುದನ್ನ ನೀವು ನೋಡ್ತಾಯಿದ್ದೀರಿ.

* * * * *

***ಈರಯ್ಯ ಕಿಲ್ಲೇದಾರ :*** *ಮೊದಲು ರಾಸಾಯನಿಕ ಕೃಷಿಗೆ ನಮ್ಮನ್ನ ಇಳಿಸಿದ್ರಿ. ಆಗ ನಾವು ಸಾವಯವ ಮಾಡ್ತಿದ್ವಿ. ಈಗ ರೈತರು ರಾಸಾಯನಿಕ ಮಾಡ್ತಿದ್ದಾರೆ, ನೀವು ಬಿ ಟಿ ತರೋ ಬಗ್ಗೆ ಮಾತಾಡ್ತಾಯಿದ್ದೀರಿ. ಬಿ ಟಿ ಗೂ ಎರಡು ಮೂರು ವರ್ಷದಲ್ಲಿ ರೋಗ ಬರೋದು ಸಹಜ. ಆಮೇಲೆ ಏನು ಮಾಡ್ತೀರಿ?*

**ಡಾ|| ಪಾಟೀಲ :** ಬದಲಾವಣೆ ಹಂತದಲ್ಲಿ ಇದೆಲ್ಲ ಸಹಜ. ನಿಮ್ಮಲ್ಲಿ ಸಾಂಪ್ರದಾಯಿಕ ಜ್ಞಾನ ಏನಿದೆ ಅದೂನೂ ಬೇಕು, ಆಧುನಿಕ ಜ್ಞಾನನೂ ಬೇಕು. ಮೊದಲು ಈ ದೇಶದ







ಜನಸಂಖ್ಯೆ ೩೫ ಕೋಟಿ ಇತ್ತು. ಇಂದು ೧೧೫ ಕೋಟಿ ಆಗಿದೆ. ಅಂದಿನ ಪರಿಸ್ಥಿತಿಗೆ ಅವಶ್ಯವಾಗಿ ರಾಸಾಯನಿಕ ಗೊಬ್ಬರ ಬೇಕಿತ್ತು ಬಳಸಿದ್ವಿ. ಅದರಿಂದ ಖಂಡಿತಾ ಇಳುವರಿ ಹೆಚ್ಚಾತು. ರೈತರ ಆರ್ಥಿಕ ಪರಿಸ್ಥಿತಿನೂ ಸುಧಾರಿಸ್ತು. ಮುಂದೆ ಏನಾದೀತು ನಮಗೆ ಗೊತ್ತಿಲ್ಲ.

* * * * * *

> ನಾವು ಯೀಲ್ಡ್, ಯೀಲ್ಡ್ ಅಂತ ಹೋಗ್ತಾ ಇರೋದರಿಂದಲೇ ಆತ್ಮಹತ್ಯೆ ಮಾಡಿಕೊಳ್ತಾ ಇದೀವಿ
>
> –ರುದ್ರಪ್ಪ ಝುಳ್ವಿ

***ಸಿದ್ದರಾಜಪ್ಪ :*** *ಗೆದ್ದಲಿಗೆ ಔಷಧ ಹಾಕ ಬೇಕು ಅಂತ ಹೇಳಿದ್ರಿ. ಆದರೆ ನಾವು ರೈತರು ಅದು ಭಗವಂತ ಕೊಟ್ಟ ವರ ಅಂತ ಅಂದಕೊಂಡಿದೀವಿ. ಗೆದ್ದಲು ಇದ್ದರೆ ನಮ್ಮ ಭೂಮಿ ಫಲವತ್ತಾಗುತ್ತೆ. ಅದನ್ನ ಔಷಧ ಹಾಕಿ ಕೊಲ್ಲಿ ಅಂತೀರಲ್ಲ ಇದು ಸರೀನಾ?*

**ಡಾ|| ಶೈಲಜಾ ಹಿತ್ತಲಮನಿ :** ನಾನು ಕೊಲ್ಲಿ ಅಂತಿಲ್ಲ. ಅದನ್ನ ಕಂಟ್ರೋಲ್ ಮಾಡಿ ಅಂತಿದ್ದೇನೆ ಅಷ್ಟೆ.

**ರುದ್ರಪ್ಪ ಝುಳ್ವಿ :** *ಕಳೆನಾಶಕ ಸಿಂಪಡಣೆಯಿಂದ ನಮ್ಮ ಭೂಮಿ ಫಲವತ್ತತೆ ಏನಾಗುತ್ತಿದೆ ತಮಗೆ ಗೊತ್ತಿದೆ.*

***ಡಾ.ಶೈಲಜಾ ಹಿತ್ತಲಮನಿ :*** *ನಾವು ರೆಕಮೆಂಡ್ ಮಾಡಿರೋದು ಮಾಕ್ಸಿಮಮ್ ಯೀಲ್ಡ್ ಬರಲಿ ಅಂತ*

***ರುದ್ರಪ್ಪ ಝುಳ್ವಿ :*** *ಅಮ್ಮ ..... ನಾವು ಯೀಲ್ಡ್ ಯೀಲ್ಡ್ ಅಂತ ಹೋಗ್ತಾಯಿರೋದರಿಂದಲೇ ಆತ್ಮಹತ್ಯೆ ಮಾಡುಕೋತಾಯಿದೀವಿ*

**ಡಾ.ಶೈಲಜಾ ಹಿತ್ತಲಮನಿ :** ಅದು ನಿಮಗೆ ಬಿಟ್ಟದ್ದು.

* * * * * *

***ಚಿಕ್ಕ ಬೋರೇಗೌಡ :*** *ನೀವು ರೈತರ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿದ್ದೀರಿ. ಒಳ್ಳೇದು. ರೈತರ ಸಮಸ್ಯೆಗಳ ಪರಿಹಾರಕ್ಕೆ ತಮ್ಮ ಬಳಿ ಸಲಹೆಗಳೇನಾದ್ರೂ ಇವೆಯಾ?*

**ಡಾ|| ವಾಸವಿ :** ನಾನು ಏನು ಭಾಳ ತಿಳಿದಿಲ್ಲ. ಮೊದಲು ರೈತರು ಒಕ್ಕಲುತನ ಅಂದರೆ ಏನು? ಅದರ ಪರಂಪರೆ ಏನು ಅನ್ನೋದನ್ನ ಅರ್ಥ ಮಾಡಿಕೊಂಡು ಅದಕ್ಕೊಂದು ಹೊಸ ವ್ಯಾಖ್ಯೆಯನ್ನ ಹುಡುಕಬೇಕಾಗಿದೆ. ರೈತರು ಒಗ್ಗೂಡಿ ಸಮಸ್ಯೆಯನ್ನ ಎದುರಿಸಬೇಕಾಗಿದೆ.

* * * * * *




***ಶಾಂತಿಮೂಲೆ :*** *ಕಂಪನಿಗಳು ರೈತರ ಸೇವೆ ಮಾಡಲಿಕ್ಕೆ ಬಂದಿದ್ದರೆ ಖಂಡಿತಾ ಸ್ವಾಗತ. ಆದರೆ ಅದು ಹಾಗಿಲ್ಲ. ರೈತರಿಂದ ೩೦೦೦ ರೂಗೆ ಒಂದು ಕಿಲೋ ಬೀಜ ಕೊಂಡು ಅದನ್ನ ನೀವು ೩೦,೦೦೦ ಕ್ಕೆ ಮಾರ್ತೀರಿ. ಇದರಲ್ಲಿ ಸೇವೆ ಎಂತಹದು ಬಂತು? ಇದು ವ್ಯಾಪಾರ ಅಲ್ಲವೆ?*

**ಡಾ|| ಅಂಗಡಿ :** ಲಾಭ ಮಾಡ್ತೀವೆ ಅಂದರೆ ಏನು ಹೇಳೋಣ. ಲಾಭ ಇಲ್ಲದಿದ್ರೆ ಬದುಕೋಕೆ ಅಗೊಲ್ಲ. ನಾವು ಒಂದೊಂದು ತಳಿ ಅಭಿವೃದ್ಧಿ ಮಾಡಲಿಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿರ್‍ತೀವೆ. ಅದನ್ನ ಹಿಂದಕ್ಕೆ ಪಡೆಯೋ ಬಗೆ ಹೇಗೆ? ನಮ್ಮದು ವ್ಯಾಪಾರ ಪ್ಲಸ್ ಸೇವೆ . ಅಷ್ಟು ಹೇಳ್ತೀನಿ ನಾನು.

* * * * * *

ಖಾಸಗಿ ಕ್ಷೇತ್ರ ಅಂದ್ರೆ ಜನಗಳಿಗೆ ಒಂದು ರೀತಿ ತಪ್ಪು ಕಲ್ಪನೆ ಇದೆ. ನನಗೂ ಮೊದಲು ಹಾಗೆಯೇ ಇತ್ತು. ಆದರೆ ಆರೀತಿ ಇಲ್ಲ ಖಾಸಗಿ ಕ್ಷೇತ್ರ. ಯಾವ ಕ್ಷೇತ್ರವೇ ಇರಲಿ ನನಗೆ ಅನ್ನಿಸೋದು ಮೊದಲು ರೈತರಿಗೆ ನಮ್ಮಿಂದ ಒಳ್ಳೇದು ಆಗಬೇಕು ಅನ್ನೋದು.

**– ಡಾ|| ಶರಣಬಸವೇಶ್ವರ ಅಂಗಡಿ.**

***ಶಿವಗಂಗಮ್ಮ ಹೊಸಮನಿ :*** *ನೀವು ಎಲ್ಲರನ್ನೂ ಒಳಗೊಂಡು ಕೆಲಸ ಮಾಡ್ತೀವೆ ಅಂದ್ರಿ. ಅದು ನಿಜವಾಗಿ ಆದೀತೇನ್ರಿ?*

**ಡಾ|| ಪ್ರಸಾದ್ :** ರೈತರ ಸಹಭಾಗಿತ್ವದಲ್ಲಿ ಸಂಶೋಧನೆ ಅಂದ ಕೂಡಲೆ ಇದು ತಕ್ಷಣದಲ್ಲಿ ಆಗೋದಲ್ಲ. ಇದಕ್ಕೆ ನಾಳೆಯೇ ಉತ್ತರ ಸಿಗೋದಿಲ್ಲ. ಇದು ಬಹಳ ದೀರ್ಘಾವಧಿ ಕೆಲಸ. ಜನರೊಟ್ಟಿಗೆ ಕೆಲಸ ಮಾಡ್ತಾ, ಮಾಡ್ತಾನೆ ಅದಕ್ಕೆ ಪರಿಹಾರ ಕಂಡುಕೊಳ್ಳಬೇಕು.

* * * * * *

***ಹೊಯ್ಸಳ ಅಪ್ಪಾಜಿ :*** *ನಮ್ಮ ದೇಶದಲ್ಲಿ ಸಹಭಾಗಿತ್ವ ಅಂದರೆ ಹೇಗೆ? ನಾವು ಹೇಗೆ ಭಾಗವಹಿಸ ಬೇಕು? ಹೇಗೆ ಅದರ ಕಡೆಗೆ ಪ್ರಯತ್ನ ಮಾಡೋದು?*

**ಪ್ರೊ|| ರೇಸನ್ :** ಇದಕ್ಕೆ ಸುಲಭವಾದ ಉತ್ತರ ಇಲ್ಲ. ನಿಮ್ಮ ದೇಶದ ಸಂಸ್ಕೃತಿ, ನಿಮ್ಮ ದೇಶದ ವಿಜ್ಞಾನಿಗಳು ಹೇಗೆ ಕೆಲಸ ಮಾಡ್ತಾರೆ ಅನ್ನೋದು ನನಗೆ ಗೊತ್ತಿಲ್ಲ. ಒಂದು ಮಾತನ್ನು ನಾನು ಹೇಳಬಲ್ಲೆ . ವಿಜ್ಞಾನಿಗಳು ಜನ ಸಹಭಾಗಿತ್ವದ ಸಂಶೋಧನೆಯಲ್ಲಿ ಬಾಗವಹಿಸಿದರೆ ಅವರ ಮಾತಿಗೂ ಒಂದು ಬೆಲೆ ಸಿಗುತ್ತೆ.

* * * * * *




***ಗಂಗಮ್ಮ :*** *ನೀವು ಸಣ್ಣ ರೈತರಿಗೆ ದುಡ್ಡು ಕೊಟ್ಟು ಕೊಳ್ಳೋದಕ್ಕೆ ಆಗೋದಿಲ್ಲ ಅಂದ್ರಿ. ದೊಡ್ಡ ರೈತರು ದುಡ್ಡು ಕೊಟ್ಟು ಕೊಳ್ತಾರೆ ಅವರಿಗೆ ಸಿಗುತ್ತೆ. ಅಲ್ಲಿಗೆ ದುಡ್ಡಿಲ್ಲ ಅಂದ್ಬಿಟ್ಟು ನಮ್ಮನ್ನ ಈ ಮಟ್ಟಕ್ಕೇನೆ ಇಡೋದಾ ಸಾ?*



**ಡಾ|| ನೂತನ್ :** ಹಾಗಲ್ಲ. ಪರಿಹಾರ ಏನು ಹೇಳಿ. ನನ್ನ ಕೆಲಸ ವಿಜ್ಞಾನಿಯಾಗಿ ತಳಿ ಅಭಿವೃದ್ಧಿ ಮಾಡೋದು. ನಿಮ್ಮ ಊರು ಮಾಗಡಿಗೆ ಸೂಕ್ತವಾದಂತಹ ಒಂದು ತಳಿಯನ್ನು ನಾನು ಅಭಿವೃದ್ಧಿ ಮಾಡಬಹುದು. ಅಷ್ಟು ಬಿಟ್ಟು ನಾನು ಏನು ಮಾಡೋಕೆ ಆಗುತ್ತೆ ಹೇಳಿ?

***ಗಂಗಮ್ಮ :*** *ಅಲ್ಲ ಸಾರ್ ಸಣ್ಣ ರೈತರು ಬದುಕೋದು ಹೇಗೆ ಹೇಳಿ? ದೊಡ್ಡ ರೈತರು ಮುಂದೆ ಬರ್ಬೇಕು, ಸಣ್ಣ ರೈತರು ಹಿಂದೆ ಉಳೀಬೇಕು ಅಂತ ನೀವು ಹೇಳ್ತಾಯಿದ್ದೀರಿ?*

**ಡಾ|| ನೂತನ್ :** ಖಂಡಿತಾ ಅಂತಹ ಮನೋಭಾವ ನಮ್ಮದಿಲ್ಲ. ಏಕೆಂದರೆ ಈ ದೇಶದಲ್ಲಿ ಹೆಚ್ಚು ಇರೋದೆ ಸಣ್ಣ ರೈತರು. ಅವರು ಮುಂದೆ ಬಂದ್ರೇನೆ ಕೃಷಿ ಮುಂದೆ ಬರೋದು.

***ಗಂಗಮ್ಮ :*** *ದೊಡ್ಡ ರೈತರಿಗೆ ಜಾಸ್ತಿ ಲಾಭ, ಸಣ್ಣ ರೈತರಿಗೆ ಕಮ್ಮಿ ಲಾಭ ಅಂದರೆ 'ಡಿಪರೆನ್ಸ್' ಬಂತಲ್ಲ?*

**ಡಾ|| ನೂತನ್ :** ಡಿಫರೆನ್ಸ್ ಬರಬೇಕು ಅಂದ್ರೆ ಅದು ಸೃಷ್ಟಿ ಕರ್ತನ ಆಟ. ಈಗ ನಿಮ್ಮನ್ನು ಸಾಹುಕಾರ ಆಗಬೇಡ ಅಂತ ನಾವು ಹೇಳಿದ್ವ? ನಿಮಗೆ ಹಣ ಕೊಟ್ಟು ಅನುಕೂಲ ಮಾಡೋದು ನನ್ನ ಜವಾಬ್ದಾರಿ ಅಲ್ಲ.

***ಸದಾಶಿವಯ್ಯ :*** *ತೆಂಗಿನ ನುಸಿ ರೋಗಕ್ಕೆ ನೀವು ಏನು ಮಾಡೋಕೆ ಆಗೇ ಇಲ್ವಲ್ಲ ಸಾರ್?*

> ಭೂಮಿಯ ಮೇಲೆ ಆಕ್ರಮಣ ಮಾಡಿ ಉತ್ಪನ್ನ ತೆಗೆಯೋದು ಕೃಷಿಯಲ್ಲ . ಆಧುನಿಕ ಮಾಹಿತಿ, ವಿಜ್ಞಾನ ನಮಗೆ ಇದನ್ನ ಹೀಗೆ ಕಲಿಸಿದೆ. ಭೂಮಿ ಅನ್ನೋದು ಸಮಾಜ ಮತ್ತು ಪರಿಸರದ ನಡುವಿನ ಒಂದು ಕೊಂಡಿ. ಅದು ಸಮಾಜಕ್ಕೂ ಹೊಂದಿ ಕೊಂಡಿರಬೇಕು ಹಾಗೆನೇ ಪರಿಸರಕ್ಕೂ ಕೂಡ. ನಾವು ಕೃಷಿಗೆ ಇರುವ ಹೊಸ ಹೊಸ ಅರ್ಥಗಳನ್ನ ಇಂದು ಗುರುತಿಸಬೇಕಿದೆ.
>
> – ಡಾ|| ವಾಸವಿ

**ಡಾ|| ನೂತನ್ :** ಯಾರು ಹೇಳಿದ್ದು. ನಾನು ೪೫ ದಿನದಲ್ಲಿ ನುಸಿ ಕಂಟ್ರೋಲ್ ಮಾಡ್ತೀನಿ. ಇಲ್ಲಾ ಅಂದ್ರೆ ನನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೋಗಲಿಕ್ಕೆ ನಾನು ತಯಾರಿದ್ದೇನೆ.

***ಸದಾಶಿವಯ್ಯ :*** *ಅಯ್ಯಯ್ಯೋ ನನ್ನ ತೋಟದಲ್ಲಿ ಬಂದು ಸಂಶೋಧನೆ ಮಾಡಿ ರಾಜೀನಾಮೆ ಕೊಟ್ಟು ನೀವು ತೌರು ಮನೆಗೆ ಹೋಗೋದು ಬ್ಯಾಡ. ಮೊದಲು ನಿಮ್ಮ ಸರ್ಕಾರಿ ತೋಟದಲ್ಲಿ ತೆಂಗಿನ ಗಿಡಗಳಿಗೆ ಬಂದಿರೋ ನುಸಿ ಕಂಟ್ರೋಲ್ ಮಾಡಿ ತೋರಿಸಿ. ಅಷ್ಟೇ ಸಾಕು.*

***ಸದಾಶಿವಯ್ಯ :*** *ಹೋಗಲಿ ಶೇಂಗಾದ ಬೆಂಕಿ ರೋಗಕ್ಕೆ ಏನು ಮಾಡಿದೀರಿ?*

**ಡಾ|| ನೂತನ್ :** ಅದಕ್ಕೆ ಈಗ ಹೊಸ ತಳಿ ಬರ್ತಾ ಇದೆ, ಚಿಂತಾಮಣಿ ೨ ಅಂತ ಹೇಳಿ. ಈ ವರ್ಷ ನಾವು ಅದುನ್ನ ಬಿಡುಗಡೆ ಮಾಡ್ತಾ ಇದ್ದೀವಿ. ಅದರಲ್ಲಿ ಬೆಂಕಿ ರೋಗ ಬರ್ತಾ ಇಲ್ಲ. ನಿರೋಧಕ ಶಕ್ತಿ ಇದೆ ಅದರಲ್ಲಿ.

***ಸದಾಶಿವಯ್ಯ :*** *ಸಾರ್ ಖಂಡಿತ ಮಾಡಿ. ಈಗಾಗಲೇ ಅರೆಬೆತ್ತಲೆ ಆಗ್ಬಿಟ್ಟಿದ್ದಾರೆ ರೈತರು. ಪೂರ್ತಿ ಬೆತ್ತಲೆಯಾಗೋದರೊಳಗೆ ನಿಮ್ಮ ಸಂಶೋಧನೆ ಮುಟ್ಟಿಟ್ರೆ ರೈತ ಪಾವನವಾಗ್ಬಿಡ್ತಾನೆ.*

**ಡಾ|| ನೂತನ್ :** ಓ ನಿಮಗೆ ಇದೊಂದು ಹೇಳಬೇಕು ನಾನು. ಯಾವುದೇ ಒಂದು ತಳಿ ಬಿಡುಗಡೆ ಮಾಡಬೇಕಾದ್ರೆ



ಕನಿಷ್ಟ ಪಕ್ಷ ೫ ವರ್ಷ ಬೇಕಾಗುತ್ತದೆ ನಮಗೆ. ಈ ಸಮಸ್ಯೆ ಮೇಲೆ ನಾವು ಕಳೆದ ೪ ವರ್ಷಗಳಿಂದ ಕೆಲಸ ಮಾಡ್ತಾ ಇದ್ದೇವೆ. ಈ ಕೊನೆಯ ಒಂದು ವರ್ಷ ನಾವು ಅದುನ್ನ ಫೀಲ್ಡ್ ಟ್ರಯಲ್ ಅಂತ ಕರೆಯುತ್ತೇವೆ ನಾವು. ದೊಡ್ಡ ದೊಡ್ಡ ಕ್ಷೇತ್ರಗಳಲ್ಲಿ ರೈತರಿಂದಲೇ ಬೆಳೆಸಿ ಆ ಫಲಿತಾಂಶವನ್ನು ತಗೊಂಡು ನಂತರ ನಾವು ಬಿಡುಗಡೆ ಮಾಡ್ತೇವೆ. ಮಾರ್ಚ್ ೨೦೧೦ ರಲ್ಲಿ ನಾವು ಅದುನ್ನ ಬಿಡುಗಡೆ ಮಾಡ್ತೇವೆ.




***ಸದಾಶಿವಯ್ಯ :*** *ಸಾರ್, ನಿಮ್ಮಲ್ಲಿ ಒಂದು ಸವಿನಯ ಪ್ರಾರ್ಥನೆ. ಕೊನೆಯದಾಗಿ ವಾದ ವಿವಾದವನ್ನು ಮುಕ್ತಾಯ ಮಾಡೋಣ. ಆದರೆ ಈ ಕಪ್ಪು ತಲೆ ಹುಳ ಬಂದಾಗ ನೀವು ಸಂಶೋಧನೆಯನ್ನ ಕೈಗೆತ್ತಿಕೊಂಡ್ರಿ. ನೀವು ಅದಕ್ಕೆ ಪರೋಪ ಜೀವಿಯನ್ನು ಉತ್ಪಾದನೆ ಮಾಡುವ ಹೊತ್ತಿಗೆ ಅದು ಗಡಿ ಪಾರಾಗಿತ್ತು. ಹಾಗೆ ಮುಗಿದು ಹೋದ ಮೇಲೆ ಔಷಧಿ ಬರುವುದು ಬೇಡ. ಮುಂದಿನ ದಿನಗಳಲ್ಲಿ ಮುಂದೆ ಇಷ್ಟನೇ ಇಸವಿಗೆ ಯಾವ ರೋಗ ಬರಬಹುದು, ಯಾವ ಕೀಟ ಬರಬಹುದು, ಯಾವ ಬೆಳೆಗೆ ಬರಬಹುದು, ಇದರ ಬಗ್ಗೆ, ಮುಂದಿನ ಪೀಳಿಗೆಗೆ ಅನುಕೂಲವಾಗುವಂತೆ ನೀವು ಮುಂಜಾಗ್ರತೆ ಕ್ರಮ ವಹಿಸಿ ಸಂಶೋಧನೆ ಮಾಡಿದ್ರೆ ನಮಗೆಲ್ಲರಿಗೂ ಸೂಕ್ತ ಅನ್ನಿಸುತ್ತದೆ. ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು.*

ವಿಜ್ಞಾನಿಗಳ ಪ್ರಪಂಚ ಬೇರೆ. ಅವರ ಆಲೋಚನೆ, ಅವರು ಏಳೋದು, ಕೂಡೋದು, ಮಲಗೋದೆಲ್ಲ ಬೇರೆಯಾದ ವ್ಯವಸ್ಥೆಯಲ್ಲೇ.ನಿಮ್ಮ ಪ್ರಪಂಚ ಬೇರೆ, ನಿಮ್ಮ ಹೊಲ, ನಿಮ್ಮ ಊರು, ನಿಮ್ಮ ವ್ಯವಸಾಯ ಎಲ್ಲವೂ ಬೇರೆಯಾದ್ದೆ. ಅವರ ಪ್ರಪಂಚಕ್ಕೂ ನಿಮ್ಮ ಪ್ರಪಂಚಕ್ಕೂ ಅಜಗಜಾಂತರ ವ್ಯತ್ಯಾಸ. ಅದಕ್ಕೆ ನೀವು ಪ್ರಶ್ನೆ ಕೇಳಿದ ತಕ್ಷಣ ಅವರು ಹೆದರುತ್ತಾರೆ. ಅವರಿಗೆ ನಿಮ್ಮ ಪ್ರಶ್ನೆಗೆ ಉತ್ತರ ಕೊಡೋದು ಹೇಗೆ ತಿಳಿಯೋದಿಲ್ಲ.

– ಪ್ರೊ. ಪೀಟರ್ ರೇಸನ್.

***ಹೇಮವ್ವ :*** *ನೋಡಿ ಸಾರ್ ನಮ್ಮದು ಒಣ ಭೂಮಿ. ಒಣ ಭೂಮಿಯಲ್ಲಿ ನಾವು ಏನು ಬಿತ್ತಿ ಬೆಳೆದ್ರೂ ಲಾಸ್ ಆಗ್ತದೆ. ಎಲ್ಲಾವೂ ಸಾಲಕಟ್ಟಲಿಕ್ಕೆ ಆಗ್ತದೆ. ಹಾಗಾಗಿ ನಾವು ನಮಗೆ, ನಮ್ಮ ಹೊಟ್ಟೆಗೆ ಎಷ್ಟು ಬೇಕೋ ಅಷ್ಟೇ ಮಾಡಿಕೊಂಡು ಇರೋದಾ? ನಾವು ಬೆಳೆದದ್ದಕ್ಕೆ ಮಾರುಕಟ್ಟೆಯಲ್ಲಿ ಬೆಲೆ ಸಿಗೋದಿಲ್ಲಲ್ಲ ಏನು ಮಾಡೋದು?*



**ಡಾ॥ ನೂತನ್ :** ಈ ಮಾರುಕಟ್ಟೆ ಪ್ರಶ್ನೆ ವ್ಯವಸ್ಥೆಗೆ ಸಂಬಂಧಪಟ್ಟಂತೆ ನನಗೆ ನೀವು ಪ್ರಶ್ನೆ ಕೇಳೋದು ತಪ್ಪು. ನನ್ನ ಕೆಲಸ ಏನು ಅದನ್ನ ನಾನು ಚಾಚೂ ತಪ್ಪದಂತೆ ಮಾಡ್ತೀನಿ. ನಿಮಗೆ ತಳಿ ಬೇಕಾ, ಬೇಸಾಯದ ಕ್ರಮ ಬೇಕಾ, ಶಾಸ್ತ್ರ ಬೇಕಾ ನಾನು ಕೊಡ್ತೀನಿ. ಉತ್ಪತ್ತಿ ಆದ್ಮೇಲೆ ಏನು ಅಂತ ಪ್ರಶ್ನೆ ಕೇಳಿದ್ರೆ ನಾನು ಏನು ಮಾಡಲಿ ?

***ಹೇಮವ್ವ :*** *ನಮಗೆ ಅದುನ್ನ ಹಾಕ್ರಿ, ಇದುನ್ನ ಹಾಕ್ರಿ ಅಂತ ಆಸೆ ಹುಟ್ಟಿಸಿ ನಮಗೆ ಎಲ್ಲಾ ಬೆಳೆಯೋದಿಕ್ಕೆ ಹತ್ತಿಸ್ಬಿಡ್ತಾರೆ ಆಮೇಲೆ ಹೀಗಾಗುತ್ತೆ.*

**ಡಾ॥ ನೂತನ್ :** ಅಲ್ಲ ನಿಮಗೆ ಬೆಲೆ ಜಾಸ್ತಿ ಕೊಟ್ಬಿಟ್ರೆ ಸರ್ಕಾರಕ್ಕೆ ಇನ್ನೂ ಒಂದು ಸಮಸ್ಯೆ ಬರುತ್ತದೆ ಅಂತ ನಾನು ನಿಮಗೆ ಹೇಳ್ತೀನಿ. ನೀವೇ ಹೆಚ್ಚಿನ ಬೆಲೆ ಕೊಟ್ಟು ಅಂಗಡಿಯಲ್ಲಿ ಮತ್ತೆ ಕೊಳ್ಳಬೇಕಾಗುತ್ತೆ. ಎಲ್ಲಿಂದ ಬರುತ್ತದೆ ರೊಕ್ಕ?

* * * * * *



***ಈರಯ್ಯ ಕಿಲ್ಲೇದಾರ :*** *ನನ್ನದೊಂದು ಸಣ್ಣ ಪ್ರಶ್ನೆ. ಈಗ ಕರ್ನಾಟಕ ಸರ್ಕಾರ ಒಂದು ಕಡೆ ಸಾವಯವ ಕೃಷಿ ನೀತಿ ಅಂತ ಮಾಡ್ತಾ ಇದೆ. ಇನ್ನೊಂದು ಕಡೆ ಈ ರೀತಿ ರಾಸಾಯನಿಕ ಕೃಷಿಗೂ ಬೆಂಬಲ ನೀಡುತ್ತೆ ಇದು ಕರ್ನಾಟಕ ಸರ್ಕಾರದ ಕೃಷಿ ನೀತಿಯಾ? ಅದಕ್ಕೆ ಒಂದು ರೀತಿಯ ಗೊಂದಲ. ಈ ಗೊಂದಲಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕೋ ಅಥವಾ ಕಾನೂನು ಪ್ರಕಾರ ಏನಾದ್ರೂ ಮಾಡಬಹುದಾ?*

**ಮೇ॥ ಜ॥ ಒಂಬತ್ಕೆರೆ :** ಎರಡು ವಿಷಯ. ಒಂದು ಈ ವ್ಯವಸಾಯ ಅನ್ನೋದು ನಮ್ಮ ರಾಜ್ಯ ಸರ್ಕಾರಗಳ ಕೈನಲ್ಲಿ ಇದೆ. ಕೇಂದ್ರ ಸರ್ಕಾರ ತಗೊಂಡು ಬರೋ ವ್ಯವಸಾಯ ನೀತಿಯನ್ನ ಒಪ್ಪಿಕೊಳ್ಳದೇ ಅದನ್ನ ಪ್ರತಿಭಟಿಸಿ ನಮ್ಮ ರಾಜ್ಯಕ್ಕೆ ಬೇಕಾದಂತಹ ಒಂದು ವ್ಯವಸಾಯ ನೀತಿಯನ್ನ ರೂಪಿಸಿಕೊಳ್ಳೋ ಒಂದು ಶಕ್ತಿ ನಮ್ಮ ಸರ್ಕಾರಕ್ಕೆ ತರುವ ತರಹ ಒತ್ತಡ ಗುಂಪುಗಳನ್ನ ನಾವು ತಯಾರು ಮಾಡಿಕೊಳ್ಳಬೇಕು. ನಮ್ಮ ಶಾಸಕರುಗಳಿಗೆ, ನಮ್ಮ ಸಂಸದರಿಗೆ ಅವರ ಹತ್ತಿರ ಮಾತಾಡುವಂತಹ, ಅವರಿಗೆ ತಿಳಿ ಹೇಳುವಂತಹ ಪ್ರಯತ್ನಗಳನ್ನ ನಡೆಸಬೇಕು. ಎಷ್ಟೋ ಸಲ ಸಂಸದರುಗಳಾಗಲಿ, ನಮ್ಮ ಶಾಸಕರಾಗಲಿ, ಈ ರಾಸಾಯನಿಕ ವ್ಯವಸಾಯದಿಂದ ಏನು ಹಾನಿ ಇದೆ, ಸಾವಯವದಿಂದ ಏನು ಒಳ್ಳೇದಿದೆ ಅನ್ನೋದು ಅವರಿಗೆ ಅಷ್ಟು ಸ್ಪಷ್ಟವಾಗಿ ಅರ್ಥವಾಗಿರೋದಿಲ್ಲ. ಅದನ್ನ ಅರ್ಥ ಹೇಳಿ ಮಾಡಿಸುವಂತಹ ಪ್ರಯತ್ನ ನಡೆಯಬೇಕು. ಮತ್ತೆ ಒಂದು ರಾಜ್ಯದಲ್ಲಿ ಕೂಡ ನಮ್ಮ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ತರಹ ಹವಾಮಾನ ಪರಿಸ್ಥಿತಿ ಇರುತ್ತದೆ. ಅದಕ್ಕೆ ಸರಿ ಹೋಗುವಂತಹ ಒಂದು ವ್ಯವಸಾಯ ನೀತಿಯನ್ನ ನಾವು ಮಾಡಬೇಕು. ಪೂರ್ಣ ಕರ್ನಾಟಕ ರಾಜ್ಯಕ್ಕೆ ಒಂದು ನೀತಿಯಲ್ಲ, ಕರ್ನಾಟಕ ರಾಜ್ಯದ ಬೇರೆ ಬೇರೆ ಭಾಗಗಳಿಗೆ ಸರಿ ಹೊಂದುವಂತಹ ವ್ಯವಸಾಯ ನೀತಿಯನ್ನ ರೂಪಿಸುವ ಹಾಗೆ ನಾವು ಸರ್ಕಾರದ ಮೇಲೆ ಒತ್ತಡ ತರಬೇಕು

***ಲಲಿತ ಜಿ. ಭಟ್ :*** *ದುಬಾರಿ ವೆಚ್ಚದ ಸಂಶೋಧನೆ, ರೈತರಿಗೆ ಅಪಾಯಕಾರಿಯಾಗ್ತಾ ಇದೆ. ಇಷ್ಟಿದ್ದೂ ಸರ್ಕಾರ ಯಾಕೆ ಸಂಶೋಧನೆ ಮಾಡಿ, ಮಾಡಿ ಅಂತ ಹೇಳ್ತಾ ಇದೆ?*

**ಮೇ॥ ಜ॥ ಒಂಬತ್ಕೆರೆ :** ಯಾಕೆ ಅಂದ್ರೆ ನಮ್ಮ ಪ್ರಧಾನಮಂತ್ರಿಗಳಾಗಲಿ, ರಾಜ್ಯದ ಮುಖ್ಯಮಂತ್ರಿಗಳಾಗಲಿ ಅವರೆಲ್ಲ ಇಂತಹ ಒಂದು ಕೈಗಾರಿಕೋದ್ಯಮಿಗಳ ಮುಷ್ಟಿಯಲ್ಲಿ ಇದ್ದಾರೆ. ಅದರಿಂದ ಅವರು ಈ ಕೈಗಾರಿಕಾ ಒಕ್ಕೂಟಗಳೇನಿರುತ್ತೆ ಅದಕ್ಕೆ ಕಾನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ ಅಂತ ಹೇಳ್ತೀವಿ. ಕೈಗಾರಿಕೆ ಉದ್ಯಮಪತಿಗಳ ಒಕ್ಕೂಟದವರು. ಅವರು ಎಲ್ಲಾ ಸೇರಿ ನಮ್ಮ ಪ್ರಧಾನಮಂತ್ರಿಗಳಿಗೆ ಸಲಹೆಗಳನ್ನ ಕೊಡುತ್ತಾರೆ. ವ್ಯವಸಾಯಕ್ಕೂ ಕೂಡ ಅವರು ಸಲಹೆಗಳನ್ನ ಕೊಡುತ್ತಾರೆ. ಇವರು ಅವಾಗ ಹೇಳಿದ್ರಲ್ಲ, ಇಂಡಿಯಾದ ಮೇಲೆ ಅಮೇರಿಕಾದ ವ್ಯವಸಾಯ ಜ್ಞಾನ ಹೇರುವ ಪ್ರಯತ್ನ ಅಂತ ಅದು ಆಗ್ತಾ ಇದೆ. ಆ ಬೋರ್ಡ್‌ನಲ್ಲಿ ಇಂಡಿಯಾದ ಉದ್ಯಮಪತಿಗಳ ಸಂಸ್ಥೆ ಇದೆ. ಅಮೇರಿಕಾದ ಬಹುರಾಷ್ಟ್ರೀಯ ಸಂಸ್ಥೆಗಳಿವೆ. ಒಬ್ಬ ರೈತ ಇಲ್ಲ ಆ ಸಂಸ್ಥೆಯಲ್ಲಿ. ಅದರಿಂದ ನಿಮಗೇನು ಗೊತ್ತಾಗುತ್ತೆ ಯಾರು ಯಾರಿಗೆ ಏನೇನು ಸಲಹೆಗಳನ್ನ ಕೊಡುತ್ತಾರೆ ಅಂತ.

> ರೈತರು ಭೂಮಿಗೆ ಯಾವಾಗ ಒಳ್ಳೇದು ಮಾಡ್ತಾರೆ, ರೈತರು ಯಾವಾಗ ರಾಸಾಯನಿಕ ಬಿಟ್ಟು ಸೆಗಣಿ ಗೊಬ್ಬರಕ್ಕೆ ಬರ್ತಾರೆ, ನಮ್ಮ ಕುರಿಗಳು ಆ ಹೊಲದ ಕಸಕಡ್ಡಿಗಳನ್ನು ಯಾವಾಗ ಮೇಯ್ದು ಅಲ್ಲಿ ಹಿಕ್ಕೆ ಹಾಕ್ತಾವೆ ಆಗ ನಾವು ಆರೋಗ್ಯವಂತರಾಗ್ತೇವೆ.
>
> – ನೀಲಕಂಠ ಕುರುಬರ



***ತಲವಾರ್ ಅಜ್ಜಪ್ಪ :*** *ಸಾರ್ ನಾನು ರೈತ, ನೀವು ಗ್ರಾಹಕ. ನಾವಿಬ್ಬರೂ ಕೂಡಿ ಬಹುರಾಷ್ಟ್ರೀಯ ಕಂಪೆನಿ ಬೀಜಗಳನ್ನ ಅವೈಡ್ ಮಾಡುವಂತಹ ಮಾರ್ಗ ಯಾವುದು?*

**ಮೇ॥ ಜ॥ ಒಂಬತ್ಕೆರೆ :** ನಮ್ಮ ಮಧ್ಯದಲ್ಲಿ ಚರ್ಚೆ ಆಗಬೇಕು. ಆ ಚರ್ಚೆ ಜೊತೆ ನಾವು ಹೋರಾಟ ಮಾಡಬೇಕು. ಹೋರಾಟದಲ್ಲೇ ನಮಗೆ ಏನಾದ್ರೂ ಫಲ ಸಿಗಬೇಕು.

***ಸದಾಶಿವಯ್ಯ :*** *ಸಾರ್, ಗ್ರಾಹಕರಿಗೆ ಸಾವಯವ ಕೃಷಿಯ ಮೇಲೆ ಮತ್ತೆ ಸಾವಯವ ಕೃಷಿಯ ಪದಾರ್ಥಗಳ ಮೇಲೆ ಎಷ್ಟರಮಟ್ಟಿಗೆ ಒಲವಿದೆ? ಅವರ ಒಂದು ಪ್ರೀತಿ ವಾತ್ಸಲ್ಯ ನಮ್ಮ ರೈತರ ಮೇಲೆ ಹೇಗಿದೆ, ಅದನ್ನ ಸ್ವಲ್ಪ ಹೇಳಬೇಕು.*

**ಮೇ॥ ಜ॥ ಒಂಬತ್ಕೆರೆ :** ಈ ಗ್ರಾಹಕರು ಯಾರಿದ್ದಾರೆ, ಸಾವಯವ ಆಹಾರವನ್ನ ಬಯಸುವವರು, ಬಳಸುವವರು, ಅಂತಹವರು ಬಹಳ ಕಡಿಮೆ ಇದ್ದಾರೆ. ಯಾಕೆ ಅಂದ್ರೆ ಈ ಪಟ್ಟಣಗಳಲ್ಲಿರುವ ಮಧ್ಯಮ ವರ್ಗದ ಜನಗಳಿಗೆ ಹಣ ಮಾಡೋದರ ಬಗ್ಗೆ ಆಸಕ್ತಿ ಇದೆಯೇ ಹೊರತು ಅವರ ಸ್ವಂತ ಆರೋಗ್ಯ ಆಗಲಿ, ಅವರು ತಿನ್ನುವ ತಿಂಡಿಗಳ ಬಗ್ಗೆ ಹೆಚ್ಚಿನ ಆಸಕ್ತಿ ಇಲ್ಲ, ಹೆಚ್ಚಿನ ಗ್ರಹಿಕೆ ಇಲ್ಲ. ಆದ್ದರಿಂದ ನಿಮ್ಮಂತಹ ಸಾವಯವ ರೈತರು ಇವರಿಗೂ ಕೂಡ ಸ್ವಲ್ಪ ಜ್ಞಾನವನ್ನ, ಬೆಳೆಸುವುದರ ಬಗ್ಗೆ ಶ್ರಮ ಪಟ್ಟರೆ ಮಾತ್ರ ಅವರಿಗೆ ಅರ್ಥವಾಗುತ್ತದೆ. ಇಲ್ಲದೇ ಇದ್ದರೆ ಅವರ ಸ್ವಂತಕ್ಕೆ ಬಿಟ್ಟರೆ ಅವರಿಗೆ ಅರ್ಥವಾಗೋದಿಲ್ಲ.

•••••••••••••••••



# ರೈತ ತೀರ್ಪು

*ಎರಡು ಸಾವಿರದ ಒಂಭತ್ತನೇ ಇಸವಿ ಡಿಸೆಂಬರ್ ಮಾಹೆಯ ಒಂದು, ಎರಡು ಮತ್ತು ಮೂರನೇ ದಿನದಂದು ಬೆಂಗಳೂರಿನ ಬಳಿ ಇರುವ ಫೈರ್ ಫ್ಲೈಸ್ ಆಶ್ರಮದಲ್ಲಿ ರೈತ ನ್ಯಾಯ ಮಂಡಲಿಯ ಸಭೆ ನಡೆಯಿತು. ಈ ಸಭೆಯಲ್ಲಿ ಕರ್ನಾಟಕದ ಎಲ್ಲ ಪ್ರದೇಶಗಳನ್ನು, ವರ್ಗಗಳನ್ನು ಪ್ರತಿನಿಧಿಸುವ ನಾವು ಮೂವತ್ತು ಮಂದಿ ಸಣ್ಣ ರೈತರು, ರೈತ ಮಹಿಳೆಯರು, ರೈತ ಕಾರ್ಮಿಕರು ನ್ಯಾಯ ಮಂಡಲಿಯ ಸದಸ್ಯರಾಗಿ ರೈತ ಸಂಶೋಧನೆಗೆ ಸಂಬಂಧಿಸಿದಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಪರಿಣಿತರ ವಾದಗಳನ್ನು ಆಲಿಸಿದ್ದೇವೆ. ಇವರ ವಾದಗಳನ್ನು ಆಲಿಸಿದ ಮೇಲೆ ದೇಶದ ಸಣ್ಣ, ಅತಿಸಣ್ಣ ರೈತರ, ರೈತರ ಮಹಿಳೆಯರ, ಕೃಷಿ ಕಾರ್ಮಿಕರ ಹಿತ ದೃಷ್ಟಿಯಿಂದ ಕೃಷಿ ಸಂಶೋಧನೆಯಲ್ಲಿ ಅನೇಕ ಬದಲಾವಣೆಗಳು ಮತ್ತು ಸುಧಾರಣೆಗಳು ಆಗ ಬೇಕೆಂದು ನಮಗೆ ತೀವ್ರವಾಗಿ ಅನಿಸಿದೆ. ಈ ಹಿನ್ನೆಲೆಯಲ್ಲಿ, ಸರ್ಕಾರ, ನೀತಿ ನಿರೂಪಕರು, ವಿಶ್ವ ವಿದ್ಯಾನಿಲಯಗಳು, ಕೃಷಿ ವಿಜ್ಞಾನಿಗಳು ಒಟ್ಟಾರೆ ದೇಶದ ಸಣ್ಣ ರೈತರ ಭವಿಷ್ಯದ ಬಗ್ಗೆ ಕಾಳಜಿಯುಳ್ಳ ಜನ ಸಮುದಾಯದ ಮುಂದೆ ಈ ದಿನ ಅಂದರೆ ದಿನಾಂಕ ೫.೧೨.೨೦೦೯ ರಂದು ಬೆಂಗಳೂರಿನಲ್ಲಿ ಈ ಕೆಳಕಾಣಿಸಿದ ಶಿಫಾರಸುಗಳನ್ನು ಮಂಡಿಸುತ್ತಿದ್ದೇವೆ.*

1. **ಇಂದಿನ ರೈತರು ಸಾಂಪ್ರದಾಯಿಕ ಒಕ್ಕಲುತನಕ್ಕೆ ಹಿಂತಿರುಗಲಾಗದೆ, ದುಬಾರಿ ಆಧುನಿಕ ಕೃಷಿಯನ್ನು ಮಾಡಲಾಗದೆ ಬಿದ್ದು ತೊಳಲಾಡುತ್ತಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತ ಪರ ಸಂಶೋಧನೆಗಳ ಅಗತ್ಯವಿದೆ.**

2. **ರೈತರ ಅನುಶೋಧನೆಗಳನ್ನು ಗಂಭೀರವಾಗಿ ಪರಿಗಣಿಸಿ, ಸರ್ಕಾರವು ವಿಜ್ಞಾನಿಗಳಿಗೆ ಕೊಡುವಂತೆ ನುಶೋಧಕರಿಗೂ ನ್ಯಾಯಯುತ ಸಂಭಾವನೆ ನೀಡಿ ಅಗತ್ಯ ಮನ್ನಣೆ ನೀಡ ಬೇಕು. ಈ ಶೋಧನೆಗಳಿಗೆ ಸೂಕ್ತ ಪ್ರಚಾರ ಸಿಗಬೇಕು**

3. **ಪದೇ ಪದೆ ಖರೀದಿಸಿ ತರ ಬೇಕಾದ ಹಾಗೂ ಹೆಚ್ಚು ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳನ್ನು ಬೇಡುವ ಹೈಬ್ರೀಡ್ ತಳಿ ಸಂಶೋಧನೆಗಳು ಬೇಡ. ಬದಲಿಗೆ ರೈತರೇ ಉತ್ಪಾದಿಸಬಹುದಾದ, ಪರಿಸರಕ್ಕೆ ಹೊಂದಿಕೊಳ್ಳುವ ಬರ ನಿರೋಧಕ ಶಕ್ತಿಹೊಂದಿರುವ, ಉತ್ತಮವಾದ, ರುಚಿಯಲ್ಲೂ ಮುಂದಿರುವ ಆಹಾರ ಹಾಗೂ ಮೇವು ನೀಡುವ ಜವಾರಿ ತಳಿಗಳ ಮೇಲೆ ಸಂಶೋಧನೆ ನಡೆಯಲಿ.**

4. ಸರ್ಕಾರ, ಖಾಸಗಿ ಮತ್ತು ಬಹು ರಾಷ್ಟ್ರೀಯ ಕಂಪನಿಗಳ ಸಹಭಾಗಿತ್ವದಲ್ಲಿ ನಡೆಸುವ ಸಂಶೋಧನೆಯ ಕುರಿತ ಮಾಹಿತಿಯನ್ನು ಪಾರದರ್ಶಕವಾಗಿ ರೈತರು ಪಡೆಯುವಂತಾಗಬೇಕು.

5. ಕೃಷಿ ವಿಶ್ವವಿದ್ಯಾನಿಲಯಗಳು ಹಾಗೂ ಇತರ ಸರ್ಕಾರಿ ಸಂಶೋಧನಾ ಸಂಸ್ಥೆಗಳು ತಾವು ನಡೆಸುವ ಸಂಶೋಧನೆಗಳಲ್ಲಿ ರೈತರ ಸಹಭಾಗಿತ್ವಕ್ಕೆ ಅವಕಾಶ ನೀಡಬೇಕು. ಹಾಗೆಯೇ ಸಂಶೋಧನೆಯ ಲಾಭದಲ್ಲಿ ಸಮಪಾಲು ನೀಡಬೇಕು.

6. ಖಾಸಗಿ/ ಬಹು ರಾಷ್ಟ್ರೀಯ ಕಂಪನಿಗಳು ರೈತರ ಜಮೀನುಗಳಲ್ಲಿ ಅಥವಾ ತಮ್ಮದೇ ಜಮೀನುಗಳಲ್ಲಿ ಬೀಜೋತ್ಪಾದನೆ/ಪ್ರಯೋಗ ಮಾಡುವಾಗ 1.ರೈತರ ಆರೋಗ್ಯ 2. ಮಣ್ಣಿ ನಲ್ಲಿ ಆಗುವ ಬದಲಾವಣೆ 3.ಪರಿಸರದ ಸುತ್ತ ಮುತ್ತಲೂ ಆಗುತ್ತಿರುವ ಪರಿಣಾಮಗಳನ್ನು ಕೃಷಿ ಇಲಾಖೆ ಹಾಗೂ ನಾಗರಿಕ ಗಂಪುಗಳು (ರೈತರು ಒಳಗೊಂಡಂತೆ) ಪರಿಶೀಲನೆ ಮಾಡಿ, ಈ ಕುರಿತ ಮಾಹಿತಿಯನ್ನು ಪ್ರತಿ ವರ್ಷ ಮಾಧ್ಯಮಗಳು ಹಾಗೂ ಗ್ರಾಮ ಸಭೆಗಳ ಮೂಲಕ ರೈತ ಸಮುದಾಯಕ್ಕೆ ತಿಳಿಸ ಬೇಕು. ವ್ಯತಿರಿಕ್ತ ಪರಿಣಾಮಗಳು ಬಂದಲ್ಲಿ ಆ ಕಂಪನಿಗಳನ್ನು ಜವಾಬ್ದಾರಿಗಳನ್ನಾಗಿ ಮಾಡಿ, ಹೊಣೆಗಾರರನ್ನಾಗಿ ಮಾಡಬೇಕು.

7. ಪ್ರತಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬೇರೆ, ಬೇರೆ ಬೆಳೆಗಳಿಗೆ ಸಂಬಂಧಪಟ್ಟಂತೆ ಸಣ್ಣ ರೈತರ ಜಮೀನಿನಲ್ಲಿ ಇಲಾಖೆಯು ನಡೆಸುವ ಪ್ರಾತ್ಯಕ್ಷಿಕೆಗಳು ಮತ್ತು ರೈತ ಪಾಠಶಾಲೆಗಳು ರಾಜ್ಯ ವ್ಯಾಪ್ತಿ ನಡೆಯುವಂತೆ ವ್ಯವಸ್ಥೆ ಆಗ ಬೇಕು.

8. ಕೃಷಿ ತಂತ್ರಜ್ಞಾನ ಹಾಗೂ ಸಂಶೋಧನೆ ಕುರಿತ ಮಾಹಿತಿ ರೈತರಿಗೆ ಅರ್ಥವಾಗುವಂತೆ ಸ್ಥಳೀಯ ಭಾಷೆಗಳಲ್ಲಿ ಸರಳವಾಗಿ ಸಿಗುವಂತಿರಬೇಕು.

9. ಕರ್ನಾಟಕದ ಪ್ರಮುಖ ಬೆಳೆಗಳಲ್ಲೊಂದಾದ ಕಬ್ಬು ಬೆಳೆ ಬಗ್ಗೆ ಸಾಕಷ್ಟು ಸಂಶೋಧನೆ ನಡೆಯುತ್ತಿಲ್ಲ. ಕಬ್ಬು ಬೆಳೆ ಅಭಿವೃದ್ಧಿ ಹಾಗೂ ವ್ಯವಸಾಯದ ಕುರಿತು ಹೆಚ್ಚಿನ ಸಂಶೋಧನೆಗಾಗಿ ಕಬ್ಬು ಸಂಶೋಧನಾ ಕೇಂದ್ರ ಬೇಕು.

10. ನಿರ್ದಿಷ್ಟ ಪ್ರದೇಶದಲ್ಲಿ ನಿಖರವಾಗಿ ಮಳೆಬೀಳುವ, ಬೀಳದಿರುವ ಹಾಗೂ ಅತಿವೃಷ್ಟಿ, ಅನಾವೃಷ್ಟಿಯಾಗುವ ಬಗ್ಗೆ ವೈಜ್ಞಾನಿಕ ಮುನ್ಸೂಚನೆ ಕೊಡುವಂತಾಗಬೇಕು. ಈ ಮಾಹಿತಿ ರೈತರಿಗೂ ಸಿಗುವಂತಾಗಬೇಕು.

11. ನೀರು ಹಾಗೂ ಮಣ್ಣು ಪರೀಕ್ಷೆ ಸೌಲಭ್ಯ ಸಣ್ಣ ರೈತರಿಗೆ ಸುಲಭವಾಗಿ ಸಿಗುವಂತಾಗಲು ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರಗಳು ಬೇಕು.

12. ಹವಾಮಾನ ಆಧಾರಿತ ಬೆಳೆ ವಿಮೆ ಪದ್ಧತಿ ರದ್ದು ಮಾಡಿ ಪ್ರತಿಯೊಂದು ಹೊಲವನ್ನೇ ಒಂದು ಘಟಕವನ್ನಾಗಿ ಮಾಡಿ ಆಗಿರುವ ನಷ್ಟವನ್ನು ಪರಶೀಲಿಸಿ ಸೂಕ್ತ ಪರಿಹಾರ ನೀಡುವ ವ್ಯವಸ್ಥೆಯಾಗಬೇಕು.

13. ರೈತ ಸಮುದಾಯದ ಮತ್ತು ಸರಕಾರದ ಸಹಭಾಗಿತ್ವದಲ್ಲಿ ಹೋಬಳಿ ಮಟ್ಟದಲ್ಲಿ ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆಗಾಗಿ ಗುಡಿಕೈಗಾರಿಕೆಗಳ ಸ್ಥಾಪನೆ ಮಾಡಬೇಕು. ಗುಡಿ ಕೈಗಾರಿಕೆಗಳು ಸ್ಥಳೀಯ ಸನ್ನಿವೇಶ ಆಧಾರಿತ ಕೃಷಿ ಉತ್ಪನ್ನಗಳಿಗೆ ಜೋಡಣೆ ಆಗಿರಬೇಕು. ಬಂಡವಾಳ ಹೂಡಿಕೆ ಸರಕಾರದ್ದಾಗಿರಬೇಕು.

14. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ದೇಸಿ ಬೀಜ ಬ್ಯಾಂಕ್ ಸ್ಥಾಪನೆ ಹಾಗೂ ಅವುಗಳ ಮೂಲಕ ಬೀಜಗಳ ವಿತರಣೆ, ಬೀಜ ಮೇಳ, ಪ್ರಾತ್ಯಕ್ಷಿಕೆ, ತಳಿ ಅಭಿವೃದ್ಧಿ ಮುಂತಾದ ಕಾರ್ಯಕ್ರಮಗಳು ನಡೆಯಬೇಕು.

15. ರೈತ ವಿರೋಧಿಯಾದ ಬೀಜ ಕಾನೂನುಗಳು ಬೇಡ.

16 ದೇಶದ ಜನಸಂಖ್ಯೆಯಲ್ಲಿ ಎಪ್ಪತ್ತು ಪ್ರತಿ ಶತ ಇರುವ, ಒಟ್ಟಾರೆ ಆರ್ಥಿಕ ವ್ಯವಸ್ಥೆಗೆ ಬಹು ಮುಖ್ಯ ಕೊಡುಗೆ ನೀಡುವ ಕೃಷಿರಂಗಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರತ್ಯೇಕವಾದ ಆಯವ್ಯಯ (ಬಜೆಟ್) ಮಂಡಿಸಬೇಕು.

17. ದನಕರು, ಕುರಿಗಳಿಗೆ ಮೇಯಿಸಲು ಮೀಸಲಾಗಿಟ್ಟಿದ್ದ ಗೋಮಾಳಗಳು ಹಾಗೂ ಕೆರೆಗಳು ಈಗ ಇಲ್ಲವಾಗಿವೆ. ಅವು ಮತ್ತೆ ಸಮುದಾಯಕ್ಕೆ ಲಭ್ಯವಾಗುವಂತೆ ಮಾಡಬೇಕು.

18. ಹೊಸ ತಲೆಮಾರಿನ ಮಕ್ಕಳಿಗೆ ಕೃಷಿ ಬದುಕಿನ ಬಗ್ಗೆ ಆಸಕ್ತಿ ಹುಟ್ಟಿಸಲು, ವಿವರ ತಿಳಿಯುವಂತಾಗಲು ಶಾಲಾ ಪಠ್ಯದಲ್ಲಿ ಕೃಷಿ ವಿಷಯವನ್ನೂ ಅಳವಡಿಸಬೇಕು.

19. ವಿಶೇಷ ವಿತ್ತ ವಲಯ ಹಾಗೂ ಅಭಿವೃದ್ಧಿಯ ನೆಪದಲ್ಲಿ ಕೃಷಿ ಭೂಮಿಯನ್ನು ರೈತರಿಂದ ಕಿತ್ತುಕೊಳ್ಳಬಾರದು.

20. ಅರಣ್ಯ ಇಲಾಖೆ ತನ್ನ ಭೂಮಿಯಲ್ಲಿ ಅಕೇಶಿಯಾ, ನೀಲಗಿರಿ ಮುಂತಾದ ಗಿಡಗಳನ್ನು ಬೆಳೆಯುವುದು ಮತ್ತು ರೈತರಿಗೆ ಉಚಿತವಾಗಿ ಹಂಚುವುದನ್ನು ನಿಲ್ಲಿಸಬೇಕು.
ಅಂತರ್ಜಲ ಮಟ್ಟ ಕುಸಿಯಲು ಕಾರಣವಾದ,ಪರಿಸರಕ್ಕೆ ಮಾರಕವಾದ
ಇದನ್ನು ಏಕ ಬೆಳೆಯಾಗಿ ನೆಡುವ ಬದಲು ನೆಲ-ಜಲ ಸಂರಕ್ಷಿಸುವ, ಪರಿಸರಕ್ಕೆ ಹಾಗೂ ಪ್ರಾಣಿ, ಪಕ್ಷಿ, ಮನುಷ್ಯರಿಗೆ ಅಗತ್ಯವಿರುವ ಗಿಡ ಮರಗಳನ್ನು ಬೆಳೆಸ ಬೇಕು.

21. ಕೃಷಿ ನೀತಿಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಸಣ್ಣ ರೈತರು, ಕೃಷಿ ಕಾರ್ಮಿಕರು, ಬಡಗಿ, ಕುಂಬಾರ ಇತ್ಯಾದಿ ಕೃಷಿಗೆ ಪೂರಕ ಉದ್ಯಮಗಳ ಸಮುದಾಯಗಳನ್ನು ಸೇರಿಸಿಕೊಂಡು, ಸನ್ನಿವೇಶಾಧಾರಿತ ಕೃಷಿ ನೀತಿಯನ್ನು ರೂಪಿಸಬೇಕು.

22 ಕರ್ನಾಟಕ ಕುರಿ ಅಭಿವೃದ್ಧಿ ಮಂಡಳಿಯಲ್ಲಿ ಹಾಗೂ ನೀತಿ ನಿರೂಪಣೆಯಲ್ಲಿ ಕುರಿಗಾಹಿಗಳಿಗೆ ಪ್ರಾತಿನಿಧ್ಯ ಬೇಕು.

* * *

# ರೈತ ತೀರ್ಪಿನ ಬಗ್ಗೆ  ಮೂಡಿ ಬಂದ ಕೆಲವು ಸಾರ್ವಜನಿಕ ಅಭಿಪ್ರಾಯಗಳ ಸಂಕ್ಷಿಪ್ತ ರೂಪ

**ಡಾ|| ಪ್ರಕಾಶ ಕಮ್ಮರಡಿ**
ವಿಜ್ಞಾನಿ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು




**ಈ**ಗ ವೇದಿಕೆಯ ಮೇಲಿರುವ ರೈತರು ತಮ್ಮ ತೀರ್ಪನ್ನು ಇತ್ತಿದ್ದಾರೆ. ದೊಡ್ಡ ರೈತರ, ಮೇಲು ಜಾತಿ ರೈತರ, ನೀರಾವರಿ ರೈತರ ತೀರ್ಪುಗಳು ಅಭಿಪ್ರಾಯಗಳು ಈಗಾಗಲೇ ಹಲವು ವೇದಿಕೆಗಳಲ್ಲಿ ಪ್ರಕಟವಾಗಿವೆ. ಈ ನ್ಯಾಯ ಮಂಡಲಿಯಲ್ಲಿದ್ದ ರೈತರಾರು ಮೇಲು ಜಾತಿಯವರ, ಶ್ರೀಮಂತ ರೈತರಲ್ಲ, ಈ ರೈತರ ಅಭಿಪ್ರಾಯ ಇದುವರೆವಿಗೂ ಕೇಳಿ ಬಂದಿಲ್ಲ. ಹಾಗಾಗಿ ಈದಿನ ಇವರು ನೀಡಿರುವ ತೀರ್ಪು ಬಹಳ ಮಹತ್ವದ್ದು. ಈ ದಿನ ಸಭೆಯಲ್ಲಿ ನನಗಿಂತ ಹಿರಿಯರಾದ ಡಾ.ವೀರೇಶರವರು, ಡಾ.ವೀರಭದ್ರಯ್ಯನವರು ಇದ್ದಾರೆ. ಈ ಇಡಿ ರೈತ ತೀರ್ಪಿನ ಪ್ರಕ್ರಿಯೆ ಡಾ.ದ್ವಾರಕೀನಾಥ ಅವರ ನೇತ್ರತ್ವದಲ್ಲಿ ನಡೆದಿದೆ. ಹಾಗಾಗಿ ಈ ರೈತ ತೀರ್ಪಿನಲ್ಲಿ ಮೂಡಿ ಬಂದಿರುವ ಅಭಿಪ್ರಾಯಗಳನ್ನು ಹೇಗೆ ಬಳಸಿ ಕೊಳ್ಳಬೇಕು ಎಂಬುದನ್ನು ಅವರು ನನಗಿಂತಲೂ ಹೆಚ್ಚು ಚೆನ್ನಾಗಿ ಹೇಳಬಲ್ಲರು. ಆದರೂ ಒಂದೆರಡು ಅಂಶಗಳನ್ನು ನಾನು ಹೇಳಲು ಇಷ್ಟಪಡುತ್ತೇನೆ. ನಮ್ಮ ವಿಶ್ವವಿದ್ಯಾನಿಲಯಗಳು, ಐ ಸಿ ಎ ಆರ್ ಗಳು ಸ್ವಾಯತ್ತವಾಗಿರಬೇಕು. ಹಾಗೆಯೇ ಈ ಸಂಸ್ಥೆಗಳಲ್ಲಿ ಕೆಲಸ ಮಾಡುವ ವಿಜ್ಞಾನಿಗಳಿಗೂ ಸಾಕಷ್ಟು ಸ್ವಾತಂತ್ರದ ಅಗತ್ಯವಿದೆ. ಒಬ್ಬ ವಿಜ್ಞಾನಿ ಸರ್ಕಾರಿ ನೌಕರನಾಗಿರುವುದರಿಂದ ಅವನು ಸರ್ಕಾರದ ಎಲ್ಲಾ ಸೇವಾ ನಿಬಂಧನೆಗಳಿಗೆ ಒಳಪಟ್ಟಿರುತ್ತಾನೆ. ಹಾಗಾಗಿ ಅವನ ಸ್ವಾತಂತ್ರಕ್ಕೆ ಅವನ ಅಭಿವ್ಯಕ್ತಿಗೆ ಹಲವು ಅಡಚಣೆಗಳು ಸದಾ ಇರುತ್ತವೆ . ಅದರಲ್ಲೂ ಕೃಷಿ ವಿಜ್ಞಾನಿಗಳ ಸ್ವಾತಂತ್ರ್ಯಕ್ಕೆ, ಮುಕ್ತ ಅಭಿವ್ಯಕ್ತಿಗೆ ಯಾವುದೇ ರೀತಿ ಅಡಚಣೆ ಬರಕೂಡದು. ಹಾಗಾದಾಗ ಜನ ತಾಂತ್ರೀಕರಣ ಒಳಗಿನಿಂದ ಗಟ್ಟಿ ಆಗುತ್ತಾ ಹೋಗುತ್ತದೆ. ಇವತ್ತು ಮೆಡಿಕಲ್, ಇಂಜಿನಿಯರಿಂಗ್ ಮುಂತಾದ ಕ್ಷೇತ್ರಗಳನ್ನು ಖಾಸಗಿ ಸಂಸ್ಥೆಗಳು ಆಕ್ರಮಿಸಿ ಕೊಂಡು ಬಿಟ್ಟಿವೆ. ನಮ್ಮ ಅದೃಷ್ಟಕ್ಕೆ ಕೃಷಿ ಸಂಶೋಧನೆಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸರ್ಕಾರದ ಹಿಡಿತದಲ್ಲಿದೆ. ಅಂದರೆ ಸಮಾಜದ ಹಿಡಿತ ಅದರ ಮೇಲಿದೆ ಎಂದೇ ಅರ್ಥ. ರೈತ ತೀರ್ಪಿನ ಪ್ರಕ್ರಿಯೆ ಏನಿದೆ ಅತ್ಯಂತ ಸ್ವಾಗತಾರ್ಹವಾದುದು. ಇದಕ್ಕೆ ಪ್ರತಿಯೊಬ್ಬ ಕೃಷಿ ವಿಜ್ಞಾನಿಯೂ ಖಂಡಿತಾ ಸ್ಪಂದಿಸುತ್ತಾನೆ ಎಂದು ನಾನು ಭಾವಿಸಿದ್ದೇನೆ. ಇದನ್ನ ಮುಂದೆ ತೆಗೆದು ಕೊಂಡು ಹೋಗುವ ಪ್ರಯತ್ನಗಳು ನಡೆಯುತ್ತವೆ ಎಂದು ಭಾವಿಸಿದ್ದೇನೆ.

**ಶ್ರೀಮತಿ ಸುನಂದಾ ಜಯರಾಂ**
ರೈತ ಹೋರಾಟಗಾರರು, ಮಂಡ್ಯ

**ಕ**ರ್ನಾಟಕ ರಾಜ್ಯ ರೈತ ಸಂಘಟನೆ ವಿವಿಧ ಜನಪರ ಹೋರಾಟಗಳನ್ನು ಸೇರಿಸಿಕೊಂಡು ಮಾಡಿದಂಥ ಹೋರಾಟ ಮತ್ತೊಂದು ಸಾರಿ ಕರ್ನಾಟಕದಲ್ಲಿ ಮೂಡಿ ಬರಲಾರದೇನೋ? ರೈತ ಚಳುವಳಿಗೆ 'ಆದರ್ಶ' ನಡೆಸಿದಂತಹ ಇಂತಹ ಒಂದು ಪ್ರಕ್ರಿಯೆಯ ಆಯಾಮ ಖಂಡಿತಾ ಅಗತ್ಯ ಇತ್ತು ಅಂತ ನನ್ನ ಅನುಭವ ಹೇಳುತ್ತಾ ಇದೆ. ಎಲ್ಲರೂ ಕೈ ಜೋಡಿಸಿ ನಮಗೆ ಸಿಗಬೇಕಾದ ನ್ಯಾಯ ಮತ್ತು ಹಕ್ಕನ್ನು ಹೇಗೆ ಪಡೆಯಬೇಕು ಅನ್ನುವ ಚಿಂತೆ ನನ್ನ ಮನಸ್ಸಿನಲ್ಲಿ ಇತ್ತು. ಅದರ ಪ್ರಥಮ ಹೆಜ್ಜೆಯಾಗಿ 'ಆದರ್ಶ'ದ ಈ ಪ್ರಕ್ರಿಯೆ ಬಂದಿದೆ. ಎಲ್ಲರೂ ಇದಕ್ಕೆ ಕೈ ಜೋಡಿಸಿದಾರೆ. ಈ ತೀರ್ಪಿನ ಜೊತೆಯಲ್ಲಿ ನಾವು ಮುಂದಿನ ಹೋರಾಟದ ಹೆಜ್ಜೆ ಇಡುವಂತಾಗಲಿ ಎಂದು ನಾನು ಆಶಿಸುತ್ತೇನೆ.



**ಡಾ|| ಪ್ರಕಾಶ ಭಟ್**

<u>ಸಮುದಾಯ ಕಾರ್ಯಕರ್ತರು, ಧಾರವಾಡ</u>

**ಪ್ರ**ತಿಯೊಂದು ರೈತ ಸನ್ನಿವೇಶವೂ ವಿಶಿಷ್ಟವಾದದ್ದು. ಸಂಶೋಧನಾಲಯದಲ್ಲಿ ಕುಳಿತು ಟೆಸ್ಟ ಟ್ಯೂಬು ಇಟ್ಕೊಂಡು ಮಾಡಿದ ಸಂಶೋಧನೆಗಳು ರೈತ ಹೊಲದಲ್ಲಿ ಯಶಸ್ವಿಯಾಗಲು ಸಾಧ್ಯವೇ ಇಲ್ಲ. ಉದಾಹರಣೆಗೆ ಎಲ್ಲರೂ ಒಪ್ಪಿರುವ ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡಬೇಕು ಅನ್ನುವ ತಂತ್ರಜ್ಞಾನ ಕೂಡ ಹಲವು ಕಡೆ ಅಪ್ರಸ್ತುತವಾಗಿರುವುದನ್ನು ನಾನು ನೋಡಿದ್ದೇನೆ. ನಾವು ವಿಜ್ಞಾನಿಗಳು ನಮಗೆ ಎಲ್ಲಾ ಗೊತ್ತಿದೆ ಅನ್ನೋದನ್ನ ಬಿಟ್ಟು ಕೊಡದೆ ಹೋದರೆ ಬಹಳ ತಪ್ಪಾಗುತ್ತದೆ. ಬಹಳ ಸಲ ನಮ್ಮ ಸೈಂಟಿಫಿಕ್ ಪೇಪರ್ಗಳು 'ಇಂಡಿಯನ್ ಫಾರ್ಮರ್ ಇಸ್ ಇಗ್ನೊರೆಂಟ್ ಅನ್ನೋ ಭಾವನೆ ಯಿಂದಲೇ ಬಂದಂತೆ ಕಾಣುತ್ತದೆ. ನಾವು ಮೊದಲು ಅನ್ ಲರ್ನ ಆಗದೇ ಇದ್ದರೆ ತಂತ್ರಜ್ಞಾನಗಳು ಅಭಿವೃದ್ಧಿ ಆಗೋದಿಲ್ಲ. ಇಂದು ನೀವು ನೀಡಿರುವ ತೀರ್ಪಿಗೆ ಧನ್ಯವಾದ. ನಿಮ್ಮ ಆಜ್ಞೆಯನ್ನು ನಾವು ಒಪ್ಪಿಕೊಂಡಿದ್ದೇವೆ. ಇದನ್ನ ನಾವು ನಡೆಸುತ್ತೇವೆ. ನನ್ನ ಹಿರಿಯ ಸಹೋದ್ಯೋಗಿಗಳೂ ಇದನ್ನ ಒಪ್ಪಿಕೊಂಡಿದ್ದಾರೆ. ಕೃಷಿ ಸಂಶೋಧನೆಗೆ ಸಂಬಂಧಿಸಿದಂತೆ



ದೊಡ್ಡ ರೈತರಿಗೂ, ಸಣ್ಣ ರೈತರಿಗೂ, ಅತಿ ಸಣ್ಣ ರೈತರಿಗೂ ಬಹಳ ವ್ಯತ್ಯಾಸ ಇದೆ . ಅದನ್ನ ಮನಗಂಡು 'ಆದರ್ಶ'ದವರು ಅದನ್ನ ಎತ್ತಿಹಿಡಿದಿದ್ದಾರೆ. ಅದಕ್ಕಾಗಿ ಅವರಿಗೂ ಧನ್ಯವಾದಗಳು.

**ಶ್ರೀ ಸಂತೋಷ ಕೌಲಗಿ**

<u>ರೈತರು, ಮೇಲುಕೋಟೆ</u>

**ನಾ**ನು ಕಳೆದ ಮೂರು ದಿನಗಳಿಂದ ರೈತ ತೀರ್ಪಿನ ಎಲ್ಲ ಪ್ರಕ್ರಿಯೆಯನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಪ್ರಜಾಪ್ರಭುತ್ವದ ಈ ಭರಾಟೆಯಲ್ಲಿ ಒಂದು ದೊಡ್ಡ ಜನ ಸಮುದಾಯ ಎಲ್ಲೋ ಬಿಟ್ಟು ಹೋಗುತ್ತಿದೆ ಎಂದು ನನಗೆ ಅನಿಸ ತೊಡಗಿತು. ಈ ನ್ಯಾಯ ಮಂಡಲಿ ಏನು ತೀರ್ಪು ನೀಡಿದೆ ಅದು ನನಗೆ ಬಹಳ ಮುಖ್ಯವಾದದ್ದು ಅಂತ ನನಗೆ ಅನಿಸುತ್ತನೇ ಇಲ್ಲ. ಪ್ರಜಾಪ್ರಭುತ್ವದಲ್ಲಿ ಒಬ್ಬ ವ್ಯಕ್ತಿಗೆ ಭಾಷೆಯ ಮತ್ತು ಅಭಿವ್ಯಕ್ತಿಯ ಒಂದು ಶಕ್ತಿ ಇಲ್ಲದಿದ್ದರೆ ಆತ ಬಾಯಿ ಮುಚ್ಚಿಕೊಂಡೇ ಇರಬೇಕಾಗುತ್ತೆ. ಈ ನ್ಯಾಯ ಮಢಲಿಯ ಸದಸ್ಯರಾಗಿ ಕುಳಿತಿರುವ ಮಂದಿ ಕಳೆದ ೫೦–೬೦





ವರ್ಷಗಳಿಂದ ಎರಡು ಎಕರೆಯಷ್ಟು ಒಣಭೂಮಿಯಲ್ಲಿ ಕೆಲಸ ಮಾಡುತ್ತಾ ಒಂದು ದಿನವೂ ತಮ್ಮ ಬಗ್ಗೆ ಯಾಗಲೀ , ತಮ್ಮ ಜನರ ಬಗ್ಗೆಯಾಗಲೀ ಯೋಚನೆ ಮಾಡಲು ಸಹ ಸಮಯವಿಲ್ಲದೆ ಬದುಕಿದವರು. ಕಳೆದ ಮೂರು ದಿನಗಳಿಂದ ಅವರು ಕೇಳಿದ ಪ್ರಶ್ನೆ ಅವರು ಮಾತನಾಡಿದ ರೀತಿ ನನಗೆ ಬಹಳ ಆಶ್ಚರ್ಯ ತಂದಿತು. ಈಗ ಅವರು ನನಗೆ ಮಣ್ಣಿನ ಪರೀಕ್ಷೆ ಮಾಡೋ ಯಂತ್ರಕೊಡಿ, ಮತ್ತೊಂದು ಕೊಡಿ ಅಂತ ಕೇಳಿದರು. ಬಹಳ ಸಲ ಅದು ಬಾಲಿಶವಾಗಿ ಕಂಡರೂ ಅದು ವಾಸ್ತವ. ಸ್ವತಂತ್ರ ಬಂದು ಅರವತ್ತು ವರ್ಷದ ನಂತರವೂ ಒಬ್ಬ ರೈತ ಮಹಿಳೆಗೆ ಮಣ್ಣು ಪರೀಕ್ಷೆ ಮಾಡಿಸುವಂತಹ ಒಂದು ಸುಲಭ ಪ್ರಯೋಗ ಮಾಡಿಸುವುದು ಕಷ್ಟ ಆಗಿದ್ದರೆ ಅದು ಆಕೆಯ ತಪ್ಪಲ್ಲ. ಅದು ವ್ಯವಸ್ಥೆಯ ತಪ್ಪು. ೨೧ ನೇ ಶತಮಾನಕ್ಕೆ ಭಾರತ ನುಗ್ಗುತ್ತಿದೆ, ನಾವು ಚಂದ್ರ ಲೋಕಕ್ಕೆ ಹೋಗಲು ತಯಾರಿ ನಡೆಸಿದ್ದೇವೆ ಅದೇ ಹೊತ್ತಿನಲ್ಲೆ ಒಂದು ಸಣ್ಣ ತಂತ್ರಜ್ಞಾನವನ್ನ ರೈತರಿಗೆ ಕೊಡಲು ಆಗುತ್ತಾ ಇಲ್ಲ. ಇದು ಬಹಳ ಶೋಚನೀಯ ಅನಿಸುತ್ತೆ. ಈ ತೀರ್ಪಿನ ಫಲಶ್ರುತಿ ಏನೋ ನನಗೆ ಗೊತ್ತಿಲ್ಲ. ನನಗೆ ಮಾತ್ರ ಇಡೀ ಪ್ರಕ್ರಿಯೆ ಪ್ರಜಾಪ್ರಭುತ್ವದ ಬಗ್ಗೆ , ಭಾರತದ ಹಳ್ಳಿಗಳ ಬಗ್ಗೆ ಹೊಸ ಕಣ್ಣು ತೆರೆಸಿದೆ.

**ಶ್ರೀ ಕುರುಬೂರು ಶಾಂತಕುಮಾರ**

<u>ಚಾಮರಾಜ ನಗರ</u>

**ನಾ**ವು ಬಹಳ ವರ್ಷಗಳಿಂದ ಕೃಷಿ ಸಂಶೋಧನೆಗಳು ರೈತರ ಹೊಲದಲ್ಲಿ ಅವರ ಹಿತಾಸಕ್ತಿ ಕಾಪಾಡುವಂತಿರಬೇಕೆಂದು ಬಹಳ



ವರ್ಷಗಳಿಂದ ಹೇಳುತ್ತಾ ಬಂದಿದ್ದೇವೆ. ಆದರೆ ಅದು ಸರ್ಕಾರದ ಗಮನಕ್ಕೆ ಬಂದರೂ ಕೂಡ ಅದರ ಬಗ್ಗೆ ಸರ್ಕಾರ ನಿರ್ಲಕ್ಷ ವಹಿಸಿದೆ. ರೈತ ತೀರ್ಪಿನ ಈ ವಿಚಾರ ಹಳ್ಳಿಗಳನ್ನ ಮುಟ್ಟಿ, ಒಂದು ಕ್ರಾಂತಿಕಾರಿ ಚಳುವಳಿಯನ್ನು ಹುಟ್ಟು ಹಾಕಿದರೆ ಈ ತೀರ್ಪಿಗೆ ಮಾನ್ಯತೆ ಸಿಕ್ಕಹಾಗೆ ಆಗುತ್ತೆ. ನಾವು ಸರ್ಕಾರವನ್ನು ಆಯ್ಕೆ ಮಾಡುವಂತಹ ವ್ಯವಸ್ಥೆಯಲ್ಲೂ ಬಹಳ ದೊಡ್ಡ ತಪ್ಪು ಮಾಡುತ್ತಾ ಇದ್ದೇವೆ. ರೈತ ತೀರ್ಪಿನ ಮುಖಾಂತರ ರೈತರನ್ನು ಜಾಗ್ರತಿ ಮಾಡಿದರೆ ಬಹಳ ಒಳ್ಳೇದು ಆಗುತ್ತೆ.




### ಶ್ರೀಮತಿ ಬಿ.ಟಿ.ಲಲಿತಾ ನಾಯಕ

ಬೆಂಗಳೂರು

**ಇ**ವರ ಮಾತುಗಳನ್ನು ಕೇಳ್ತಾಯಿದ್ದರೆ ನಮ್ಮ ಭೂಮಿ ಹೇಗೆ ಸಾಯ್ತಾ ಇದೆ ಅನ್ನೋದನ್ನ ನೆನೆಸಿಕೊಂಡು ಭಯ ಆಗೋಕೆ ಶುರು ಆಯ್ತು. ಕಳೆದ ಮೂರು ನಾಲ್ಕು ದಿನದಿಂದ ಇವರನ್ನ ನೋಡ್ತಾ ಇದ್ದೇನೆ. ಸಂಶೋಧನೆ ಮಾಡ್ತಾಯಿರೋ ಜನ ತಮ್ಮ ಪಾಡಿಗೆ ಸಂಶೋಧನೆ ಮಾಡ್ತಾ ತಮ್ಗೂ ರೈತರಿಗೂ ಏನೂ ಸಂಬಂಧ



ಇಲ್ಲ ಅನ್ನೋ ರೀತಿಲಿ ಇದಾರೆ ಅನಿಸ್ತು. ಸಂಶೋಧನೆಗೂ ರೈತನಿಗೂ ಸಂಬಂಧ ಇಲ್ಲ, ಸರ್ಕಾರಕ್ಕೂ ರೈತನಿಗೂ ಸಂಬಂಧ ಇಲ್ಲ, ಕೃಷಿ ಮಂತ್ರಿಗೂ ರೈತನಿಗೂ ಸಂಬಂಧ ಇಲ್ಲ. ಇಂತಹ ಸಂಬಂಧವಿಲ್ಲದ ವ್ಯವಸ್ಥೆಯಿಂದ ನಾವು ಮೊದಲು ಹೊರ ಬರಬೇಕು.ಎಲ್ಲದಕ್ಕೂ ಒಂದು ಸಂಬಂಧವನ್ನ ಕಲ್ಪಿಸಲಬೇಕು. ನನಗೆ ಬಹಳ ವಿಷಯಗಳನ್ನು ಕಲಿಸಿದ ನ್ಯಾಯ ಮಂಡಲಿಯ ಸದಸ್ಯರಿಗೆ ನಮೋ ನಮ: ನಮಸ್ಕಾರ.

### ಡಾ|| ದ್ವಾರಕೀನಾಥ

ಬೆಂಗಳೂರು

**ಮೊ**ದಲನೆಯದಾಗಿ ಇಂದು ರೈತ ವೃತ್ತಿ ಬಹಳ ಬದಲಾಗಿದೆ. ಹಿಂದೆ ಇದ್ದ ಹಾಗೆ ಇಲ್ಲ. ೧೯೪೯ರಲ್ಲಿ ನಾನು ಕೃಷಿ ಪದವೀಧರನಾಗಿ ಕೆಲಸ ಪ್ರಾರಂಭಿಸಿದೆ. ನಾನು ಮೂರು ತಲೆಮಾರಿನ ರೈತರನ್ನು ನೋಡಿದ್ದೇನೆ. ಇಂದಿನ ಯುವ ರೈತರಿಗೆ ಹೊರಗಿನ ವಿಚಾರಗಳ ಕಡೆಗೆ ಹೆಚ್ಚಿನ ಗಮನ ಇದೆ. ಅವನಿಗೆ ಬೇಕಿರಲಿ ಬೇಡದಿರಲಿ ಅವನ ತಲೆಯನ್ನು ಅನೇಕ ವಿಚಾರಗಳು ತಂಬುತ್ತಿವೆ. ಮಿಡಿಯಾ ಇಂಪ್ಯಾಕ್ಟ ಬಹಳ ಇದೆ. ಗ್ರಾಮ ಜೀವನದ ಸಾಮರಸ್ಯ ಛಿದ್ರವಾಗಿ ಹೋಗಿದೆ. ರೈತ ಅತ್ಯಂತ ಪರವಾಲಂಬಿಯಾಗಿಹೋಗಿದ್ದಾನೆ. ದುಡ್ಡು ಇಲ್ಲದೆ ವ್ಯವಸಾಯ ಮಾಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿ ಹೋಗಿದೆ.

### ಡಾ|| ಗೋಪಾಲ ಕಾಡೆಕುಡಿ

ಧಾರವಾಡ

**ಇ**ವತ್ತು ಸಾವಿರ ಜನ ರೈತರಿದ್ದರೆ ಸಾವಿರ ಪ್ರಶ್ನೆಗಳು ಏಳುತ್ತವೆ. ನೀರು ಇದ್ದವರ ಪ್ರಾಬ್ಲಂ ಬೇರೆ, ನೀರು ಇಲ್ಲದವರ ಪ್ರಾಬ್ಲಂ ಬೇರೆ. ಸಣ್ಣ ಜಮೀನುದಾರರ ಪ್ರಾಬ್ಲಂ ಬೇರೆ, ದೊಡ್ಡ ಜಮೀನು ದಾರರ ಪ್ರಾಬ್ಲಂ ಬೇರೆ. ಹೈಬ್ರೀಡ್ ಬೀಜ ಬಳಸೋ ರೈತನ ಪ್ರಾಬ್ಲಂ ಬೇರೆ. ಬೀ ಟಿ ರೈತನದು ಬೇರೆ. ಹೀಗೆ ಪ್ರತಿಯೊಬ್ಬ ರೈತನ ಮನಸ್ಸಿನಲ್ಲು ಒಂದೊಂದು ಪ್ರಾಬ್ಲಂನ ನಾವು ಅಳವಡಿಸುತ್ತ ಇದ್ದೇವೆ. ರೈತರ ಮಕ್ಕಳು ಇಂದು ಹಳ್ಳಿಯಲ್ಲಿ ಉಳಿಯಲಿಕ್ಕೆ ತಯಾರಿಲ್ಲ. ಅದನ್ನ ಇವರ ಜಡ್ಜಮೆಂಟ್ನಲ್ಲಿ ಬಾಳ ಛಲೋ ಹೇಳಿದ್ದಾರೆ. ಇದನ್ನೆಲ್ಲ ವಿಚಾರ ಮಾಡಿದಾಗ ಇದು ಕೇವಲ ಟೆಕ್ನಾಲಜಿ ಸಮಸ್ಯೆಯಲ್ಲ ಬೇರೆ ಏನೋ ಇದೆ ಅನ್ನೋದು ಅರ್ಥವಾಗುತ್ತೆ.



**ಶ್ರೀಮತಿ ಹೇಮಲತಾ ಮಹಿಷಿ**
ಬೆಂಗಳೂರು

**ನ**ನಗೆ ಅನಿಸಿದ್ದು ಇಷ್ಟು. ನ್ಯಾಯ ಮಂಡಲಿ ಸದಸ್ಯರು ತಮ್ಮ ಪರಂಪರೆಯ ಹಿನ್ನೆಲೆಯಲ್ಲಿ, ಅನುಭವದ ಹಿನ್ನೆಲೆಯಲ್ಲಿ ಕೇಳಿದ ಅನೇಕ ಪ್ರಶ್ನೆಗಳಿಗೆ ಆಧುನಿಕ ವಿಜ್ಞಾನ, ತಂತ್ರಜ್ಞಾನದಲ್ಲಿ ಉತ್ತರ ಇಲ್ಲ. ವಿಜ್ಞಾನ ಆಗಬಹುದು, ತಂತ್ರಜ್ಞಾನ ಆಗಬಹುದು, ಕಾನೂನು ಆಗಬಹುದು ಮೊದಲು ಅದು ತನ್ನ ಅಹಂಕಾರವನ್ನ ಬಿಡಬೇಕು. ಆ ಕುರಿಗಾರರು ಕುರಿಗಳ ಬಗ್ಗೆ ವಿಷಯ ತಿಳಿಸಿದಾಗ ನನಗೆ ಆಶ್ಚರ್ಯ ಆಯ್ತು. ಕುರಿ ಬಗ್ಗೆ ಎಷ್ಟೊಂದು ವಿಷಯ ಇದೆ. ಅದೇ ಒಂದು ಪ್ರಪಂಚ. ಪ್ರಾಣಿ – ಪಕ್ಷಿ, ವಿಜ್ಞಾನ – ವ್ಯವಸಾಯ ಭೂಮಿ ಎಲ್ಲದರ ಮಧ್ಯೆ ಎಂತಹ ಸಂಬಂಧ ಇದೆ. ನ್ಯಾಯ ಮಂಡಲಿಯ ಸದಸ್ಯರೆಲ್ಲರೂ ಚೆನ್ನಾಗೆ ಸವಾಲುಗಳನ್ನು ಹಾಕುತ್ತಾ ಇದ್ದರು. ಮೂರು ದಿನಗಳ ಕಾಲ ಸಂವಾದ ಪ್ರಕ್ರಿಯೆ ಬಹಳ ಚೆನ್ನಾಗಿ ನಡೀತು. ದಿನದಿಂದ ದಿನಕ್ಕೆ ಅದು ಪರಿಣಾಮಕಾರಿಯಾಗುತ್ತಾ ಹೋಯಿತು. ನಾನೂ ಕೂಡ ಇದರಿಂದ ಬಹಳ ಕಲಿತೆ.




ನಮಗೆಲ್ಲರಿಗೂ ವಿಚಾರದ ಕೊರತೆ ಇದೆ, ಮಾಹಿತಿ ಕೊರತೆ ಇದೆ ಅಂತ ಅವರು ಬಹಳ ಸಲ ಹೇಳಿದ್ರು. ಅವರು ಕೇಳಿದ್ದೆಲ್ಲ ಅವರಿಗೆ ನ್ಯಾಯೋಚಿತವಾಗಿ ಸಿಗಬೇಕಿದೆ.

**ಡಾ|| ಸರ್ವೇಶ**
ಬೆಂಗಳೂರು

**ನ್ಯಾ**ಯ ಮಂಡಲಿಯವು ತೀರ್ಪನ್ನು ಬಹಳ ಸಮಯೋಚಿತವಾಗಿ ನೀಡಿದ್ದಾರೆ. ಅವರ ಈ ತೀರ್ಪಿಗೆ ತಲೆಬಾಗಿ ಸರ್ಕಾರದ ಮಟ್ಟದಲ್ಲಿ ನನಗೆ ಅವಕಾಶ ಸಿಕ್ಕಾಗಲೆಲ್ಲ ನನ್ನ ಹಿರಿಯ ಅಧಿಕಾರಿಗಳ ಜೊತೆ, ಸಭೆಗಳಲ್ಲಿ ಚರ್ಚಿಸುತ್ತೇನೆ. ಇದನ್ನ ಯಾವ ರೂಪದಲ್ಲಿ ಕಾರ್ಯ ರೂಪಕ್ಕೆ ತರಬಹುದು ಅನ್ನೋದನ್ನ ಯೋಚಿಸುತ್ತೇನೆ. ಈಗಾಗಲೇ ಕೃಷಿಗೆ ಸಂಬಂಧಿಸಿದಂತೆ ಅನೇಕ ವರದಿಗಳು ಬಂದಿವೆ. ಆದರೆ ಈ ದಿನ ಈ ರೈತರು ಕೊಟ್ಟಿರುವ ತೀರ್ಪು ನಮ್ಮ ಕಣ್ಣು ತೆರೆಸುವಂತಹದ್ದಾಗಿದೆ. ನಾವು




ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಮಯ ಬಂದಿದೆ. ಇಲ್ಲಿ ಯಾವುದೇ ವಿಷಯ ಚರ್ಚೆಗೆ ಹೋಗುವಂತಹದ್ದಿಲ್ಲ. ಎಲ್ಲರೂ ಸಹಕರಿಸಿ ಮನಸ್ಸು ಕೊಟ್ಟು ಕೆಲಸ ಮಾಡಿದರೆ ಎಲ್ಲವೂ ಸಾಧ್ಯವಾಗುತ್ತೆ. ಇದು ಒಬ್ಬರು ಇಬ್ಬರು ಮಾಡತಕ್ಕಂತಹ ಕೆಲಸ ಅಲ್ಲ. ಇದು ಸಮಾಜದ ಹೊಣೆ. ನಮ್ಮೆಲ್ಲರ ಹೊಣೆ.

**ಶ್ರೀ ಮನು ಚಕ್ರವರ್ತಿ**
ಬೆಂಗಳೂರು

**ಎಂ**.ಎಸ್. ಸ್ವಾಮಿನಾಥನ್ ಅಂತಹವರು ಗ್ರೀನ್ ರೆವಲ್ಯೂಶನ್ ಬಗ್ಗೆ ಮಾತಾಡ್ತಾರೆ, ಸಸ್ಟೇನಬೆಲ್ ಅಗ್ರಿಕಲ್ಚರ್ ಬಗ್ಗೆ ಮಾತಾಡ್ತಾರೆ. ಟ್ರೆಡೀಶನಲ್ ವಿಸಡಂ ಆಫ್ ದಿ ಫಾರ್ಮರ್ಸ್ ಬಗ್ಗೆನೂ ಮಾತಾಡ್ತಾರೆ. ಅದು ನಿಜವಾ? ಸುಳ್ಳಾ? ಒಂದು ಗೊತ್ತಾಗೋದಿಲ್ಲ. ವಿಜ್ಞಾನಿಗಳು ಜನ ಸಮುದಾಯದ ದಿನನಿತ್ಯದ ಬದುಕನ್ನ ಪ್ರಯೋಗಾಲಯಕ್ಕೆ ತರುವ ಹಾಗಿದ್ರೆ. ಅಗ್ರಿಕಲ್ಚರ್ ಅನ್ನೋದು ಲ್ಯಾಬೊರೇಟರಿ ವಿಷಯಾನಾ? ಇಂದು ಯಾವ ವಿಜ್ಞಾನಿಯೂ ಎರಡರಿಂದ ಮುಕ್ತನಾಗಿಲ್ಲ. ಒಂದು ಬಂಡವಾಳಶಾಹಿ ವ್ಯವಸ್ಥೆ ಮತ್ತೊಂದು ರಾಷ್ಟ್ರ ಪ್ರಭುತ್ವದ ಹಿಡಿತ. ಬಂಡವಾಳ ಶಾಹಿ ವ್ಯವಸ್ಥೆಯಾಗಲಿ ಪ್ರಭುತ್ವವಾಗಲಿ ಸಮುದಾಯಕ್ಕೆ ಹಿತವನ್ನು ಮಾಡುತ್ತಿರುವುದಿಲ್ಲ. ಅದು ಸದಾ ಕಾಲ ತನ್ನ ಅಧಿಕಾರವನ್ನ ಚಲಾಯಿಸುತ್ತಿರುತ್ತದೆ. ಇಡೀ ವ್ಯವಸ್ಥೆಯಲ್ಲಿ



ಜ್ಞಾನದ ಬಗ್ಗೆ ವಿಜ್ಞಾನಿಗಳು ಸುಳ್ಳು ಹೇಳುವಂತಹ ಅಸತ್ಯವನ್ನು ಹೇಳ ಬೇಕಾದಂತಹ ವಾತಾವರಣ ಸೃಷ್ಟಿಯಾಗಿರತ್ತೆ. ಪ್ರಜಾಪ್ರಭುತ್ವ ಅನ್ನಿಸಿಕೊಂಡಿರುವ ನಮ್ಮ ದೇಶವನ್ನೇ ನೋಡಿ ವಿಜ್ಞಾನದಿಂದ ಅದು ಏನನ್ನು ಬಯಸುತ್ತಿದೆ ಅಂದರೆ ಡಿಫನ್ಸ ಟೆಕ್ನಾಲಜಿ, ನ್ಯೂಕ್ಲಿಯರ್ ಟೆಕ್ನಾಲಜಿ ಅದು ಕೇಳುತ್ತಿದೆ. ಏಕೆಂದರೆ ಅದಕ್ಕೆ ತನ್ನ ಬಲವನ್ನ ಹೆಚ್ಚಿಸಿಕೊಳ್ಳಬೇಕಿದೆ. ಒಬ್ಬ ಪ್ರಾಮಾಣಿಕನಾದಂತಹ ವಿಜ್ಞಾನಿ ಹೇಳಲಾರದಂತಹ ಒಂದು ಒತ್ತಡವನ್ನ ಅನುಭವಿಸ್ತಾಯಿದ್ದಾನೆ. ನಮ್ಮ ಮಾಧ್ಯಮಗಳೂ ಅಷ್ಟೆ ಸಂಶೋಧನೆಯ ಹಿಂದೆ ಇರಬಹುದಾದ ಪ್ರಗತಿಯ ಮಾದರಿಗಳನ್ನು ಪ್ರಶ್ನಿಸುತ್ತಲೇ ಇಲ್ಲ. ಆ ಪ್ರಜ್ಞೆಯೇ ಅಲ್ಲಿ ಕಾಣೆ ಆಗಿ ಹೋಗಿದೆ. ಮಾರುಕಟ್ಟೆಯಲ್ಲಿ ರೈತರಿಗೆ ಒಳ್ಳೆ ಬೆಲೆ ಬೇಕು ಅಂತಿದ್ದಾರೆ.ಆದರೆ ಯಾವ ಆಧುನಿಕ ಮಾರುಕಟ್ಟೆಯೂ ಜನಗಳಪರವಾಗಿ ಇಲ್ಲ. ಸಮುದಾಯದ ಪರವಾಗಿ ಇಲ್ಲ. ನಾವು ಆಧುನಿಕ ಕೃಷಿ ಯನ್ನು ಬಿಡಲಾಗದ, ಪಾರಂಪರಿಕ ಕೃಷಿಗೆ ಹಿಂದಿರುಗಲಾದ ಒಂದು ಪರಿಸ್ಥಿತಿಯನ್ನ ನಿರ್ಮಾಣ ಮಾಡಿದ್ದಾರೆ. ಸಾಂಪ್ರದಾಯಿಕ ಬೇಸಾಯ ಇದ್ದಂಗೆ ಇರುತ್ತಾ, ಅದೂ ಬದಲಾಗುತ್ತಾ? ಅದು ಕೂಡ ಸಂದರ್ಭಕ್ಕೆ ತಕ್ಕ ಹಾಗೆ ಬದಲಾವಣೆ ಮಾಡಿಕೊಳ್ಳುತ್ತಾನೆ ಇರುತ್ತೆ. ರೈತರು ವಿಶ್ವಾಸವನ್ನು ಬಿಟ್ಟರೆ ಅವರಿಗೆ ಇರೋದು ಎರಡೇ ಮಾರ್ಗ ಒಂದು ಆತ್ಮಹತ್ಯೆ ಇನ್ನೊಂದು ಹಿಂಸೆಯ ಮಾರ್ಗ.

**ನ್ಯಾಯಮೂರ್ತಿ ಶ್ರೀ ವೆಂಕಟಾಚಲಯ್ಯ**
ಬೆಂಗಳೂರು

**ಈ** ಪ್ರಕ್ರಿಯೆಯಲ್ಲಿ ಬಹಳ ಮುಖ್ಯವಾದ್ದು ಏನೆಂದರೆ democratic process has been demonstrated here.

.........ನನ್ನ ಕರ್ತವ್ಯ ಇದ್ದಿದ್ದೇನು ? ensure level playing field, see that nobody biased about any view. Nobody is influenced his voice whatever the honest things, It is the right thing. This has been done most beautifully. I don't consider the overseeing panel is an irrelevent thing as my co-chair suggested. It was necessary . Because, it gives credibility to the process, and it has been so beautifully done. I must congragulate the organisers for this excellent work. These are days of intelectual property rights,and I suggest that they should take a patent for this process.!

......... ಮೆಂಬರ್ಸ ಆಫ್ ದಿ ಜೂರಿ ಅವರಿಗೆ ಯಾವುದಕ್ಕೋಸ್ಕರ ನಮನವನ್ನು ಸಲ್ಲಿಸುತ್ತೇನೆ ಅಂದರೆ ಬಹಳ ದಿಟ್ಟವಾಗಿ ಅವರು ಹೇಳ್ತಿದ್ದಾರೆ The cry is between two warring groups. Our traditional wisdom is the best. we must not abandon it . There is an assult on our traditional system ಅಂತ ಅವರು ಹೇಳಿದ್ರು. we can't go back to our traditional ways, world has changed.

.......law is too serious mattter to be left alone to lawers and judges. Agriculture research is too serious matter to be left alone to agriculture scientists. This is the process of democratisation in around scientific research by the intensity of requirements, human and intelectual requirments and a changing society . Five judges can sit down and state a law. Jawaharlal Nehru once said that 'I would rather trust the foolishness of 300 million people than the wisdom of five judges'.

Here the process is most important. And when-



ever I discussed with Mr Satheesh, he was never bothered about the outcome. Whether the farmers would support the traditional agriculture or the modern chemical agriculture. It is upto them. Let them come and say what they have to. In ensembling this jury the care taken was really remarkable. At every stage, I was watching the excellence of their mind, the commitment they had to values, the system they wanted to stick to. The impression I carry back with me is that democracy is alive and well in this country, If you have ethical leadership it will survive.

• • • • • • • • • •

# ಗೋಡೆಗೆ ತಳ್ಳಿಸಿಕೊಂಡ ಮನುಷ್ಯ ಮತ್ತು ಆತನ ತೀರ್ಪು

*– ಪದ್ಮರಾಜ ದಂಡಾವತಿ*
*ಸಹ ಸಂಪಾದಕರು ಪ್ರಜಾವಾಣಿ ಬೆಂಗಳೂರು.*


'ರೈತ ತೀರ್ಪಿನ' ವಿಶೇಷ ಏನು ಎಂದರೆ ರೈತರು ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತುದು. ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ನಡೆಸುವವರು ಅವರ ಮುಂದೆ ವಾದಿಗಳ ಹಾಗೆ ನಿಂತು ತಾವು ಮಾಡಿದ ಸಂಶೋಧನೆಯ ಉಪಯುಕ್ತತೆಯ ಬಗ್ಗೆ ಸಾಬೀತು ಮಾಡಲು ಯತ್ನಿಸಿದ್ದು.

ಗೋಡೆಗೆ ತಳ್ಳಿಸಿಕೊಂಡ ಮನುಷ್ಯ ಏನು ಮಾಡುತ್ತಾನೆ? ಹಿಂದೆ ಹೋಗಲು ಸಾಧ್ಯವೇ ಇಲ್ಲ. ಮುಂದೆ ಬರಲೂ ಆಗದು. ಭಾರತದ ರೈತ ಈಗ ಇಂಥ ಸ್ಥಿತಿಯಲ್ಲಿ ಇದ್ದಾನೆ.

ಮೊನ್ನೆ ಚಾಮರಾಜನಗರದಲ್ಲಿ ಆದ ಘಟನೆ ನಿಮಗೆ ನೆನಪಿರಬೇಕು. ಮತ್ತೆ ಮತ್ತೆ ಮುಂದೆ ಬರಲು ರೈತ ಮಾಡುತ್ತಿರುವ ಪ್ರಯತ್ನಕ್ಕೆ ಅದು ಸಂಕೇತ. ಆದರೆ, ದೊಣ್ಣೆ ಹಿಡಿದ ಪೊಲೀಸರು, ಜಿಲ್ಲಾಧಿಕಾರಿಗಳು 'ಮುಂದೆ ಹೆಜ್ಜೆ ಇಟ್ಟರೆ ಎಚ್ಚರ' ಎಂದು ತಾಕೀತು ಮಾಡುತ್ತಿದ್ದಾರೆ. ಇದಕ್ಕಿಂತ ಸ್ವಲ್ಪ ಹಿಂದೆ ಹಾವೇರಿಯಲ್ಲಿ ನಡೆದ ಘಟನೆಯೂ ನಿಮಗೆ ನೆನಪಿರಬಹುದು. ಪೊಲೀಸರ ಎಚ್ಚರ ಮುರಿದು ಮುಂದೆ ಹೆಜ್ಜೆ ಇಟ್ಟ ರೈತರ ಗತಿ ಏನಾಯಿತು?

ವಿಪರ್ಯಾಸ ಎಂದರೆ ದೇಶದಲ್ಲಿ ಹಸಿರು ಕ್ರಾಂತಿ ಮಾಡಿ ಹೆಮ್ಮೆಪಟ್ಟ ಗಳಿಗೆಯಲ್ಲಿಯೇ ರೈತರ ಆತ್ಮಹತ್ಯೆಯೂ ಆರಂಭವಾಯಿತು. ಇದಾಗಿ ನಾಲ್ಕು ದಶಕಗಳೇ ಕಳೆದು ಹೋಗಿವೆ. ಆಗಲೇ ಗೋಡೆಗೆ ತಳ್ಳಿಸಿಕೊಂಡ ಮನುಷ್ಯನಾಗಿದ್ದ ರೈತ ಶಕ್ತಿ ಕೂಡಿಸಿಕೊಂಡು ಮುಂದೆ ಬರಲು ಪ್ರಯತ್ನ ಮಾಡುತ್ತಲೇ ಇದ್ದಾನೆ. ಆತನಿಗೆ ಇದೊಂದು ರಥಮುಸಲದಂಥ ಸಂದರ್ಭ. ರಥದ ಹೊರಗೆ ಎಲ್ಲೆಂದರಲ್ಲಿ ಖಡ್ಗ ಚಾಚಿಕೊಂಡಿವೆ. ಖಡ್ಗ ಹಿಡಿದ ಮನುಷ್ಯ ಯಾರು, ಎಲ್ಲಿದ್ದಾನೆ ಎಂದು ರಣಗರಂಗದ ಯೋಧನಿಗೆ ತಿಳಿಯುತ್ತಿಲ್ಲ. ತಿಳಿದರೂ ಎದುರಿಸುವ ಶಕ್ತಿ ಇಲ್ಲ. ಚಕ್ರವ್ಯೆಹದಲ್ಲಿ ಸಿಲುಕಿದ ಅಭಿಮನ್ಯುವಿಗೆ ಆದ ಹಾಗೆ ರೈತನ ಒಂದೊಂದೇ ಕೈ, ಕಾಲುಗಳನ್ನು ಕಾಣದ ಕೈಗಳು ಕತ್ತರಿಸಿ ಹಾಕುತ್ತಿವೆ.

ಹಸಿರು ಕ್ರಾಂತಿಗಿಂತ ಮುಂಚೆ ರೈತ ಸ್ವಾವಲಂಬಿಯಾಗಿದ್ದ. ತನ್ನ ಬಿತ್ತನೆ ಬೀಜಗಳನ್ನು ತಾನೇ ಬೆಳೆಯುತ್ತಿದ್ದ. ಬೇಕಾದ ಗೊಬ್ಬರ ಕೊಟ್ಟಿಗೆಯಲ್ಲಿಯೇ ಸಿದ್ಧವಾಗುತ್ತಿತ್ತು. ಹೊಲದಲ್ಲಿ ಬೆಳೆದ ಕಾಳಿಗೆ ಕೀಟಗಳ ಕಾಟ ಇರಲಿಲ್ಲ. ವರ್ಷಕ್ಕೆ ಒಂದು ಬೆಳೆ ತೆಗೆದು ಶಕ್ತಿಯುತ ಆಹಾರ ಸೇವಿಸಿ ತಾನೂ ಗಟ್ಟಿಯಾಗಿದ್ದ, ತನ್ನ ಪೀಕಿನ ಮೇಲೆ ಅವಲಂಬಿಸಿದ ಸುತ್ತಲಿನ ಸಮಾಜವನ್ನೂ ಆರೋಗ್ಯಪೂರ್ಣವಾಗಿ ಇರಿಸಿದ್ದ. ಈಗ ಆತನ ಸ್ವಾವಲಂಬನೆ ಹೊರಟು ಹೋಗಿದೆ. ರೈತ ನಂಬಿದ್ದ ಮಣ್ಣು ಈಗ ಬರಡಾಗಿದೆ. ಎದೆಯುದ್ದ ಬಿರುಸಾಗಿ ಬೆಳೆದು ನಿಲ್ಲುತ್ತಿದ್ದ ಜೋಳದ ಪೈರು ಈಗ ಎಲ್ಲಿ ಇವೆ? ಹತ್ತು ಮಕ್ಕಳನ್ನು ಹಡೆದ ಹೆಣ್ಣಿನ ಹಾಗೆ ಭೂಮಿ ವರ್ಷಕ್ಕೆ ಮೂರು ಬೆಳೆ ಬೆಳೆದು ಪೀಚಾಗಿ ಹೋಗಿದೆ. ಬೀಜಕ್ಕಾಗಿ, ಗೊಬ್ಬರಕ್ಕಾಗಿ, ಬೆಳೆದ ಬೆಳೆಗೆ ಒಳ್ಳೆಯ ಬೆಲೆಗಾಗಿ ರೈತ ನಿತ್ಯ ಹೋರಾಡಬೇಕಾಗಿದೆ. ದೇಶದ ಅತ್ಯಂತ ಫಲವತ್ತಾದ ಭೂಮಿ ಹೊಂದಿದ್ದ ಪಂಜಾಬಿನಲ್ಲಿ ಹಸಿರು ಕ್ರಾಂತಿ ವೇಳೆಯಲ್ಲಿಯೇ ರೈತರ ಆತ್ಮಹತ್ಯೆಯ ಪ್ರಮಾಣ ನಾಲ್ಕರಷ್ಟು ಹೆಚ್ಚಿತು. ಈಗ ರೈತರು ಎಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ? ಅದು ಬಿಟ್ಟು ಆತನಿಗೆ ಪರ್ಯಾಯ ಏನು ಇದೆ?



ಇದು ದುರಂತ. ಇದಕ್ಕೆ ಉತ್ತರ ಕಂಡುಕೊಳ್ಳಲು ರೈತರು ಕರ್ನಾಟಕದಲ್ಲಿ ಒಟ್ಟುಗೂಡಿದ್ದು ೮೦ರ ದಶಕದ ಆಸುಪಾಸಿನಲ್ಲಿ. ಲಕ್ಷಗಟ್ಟಲೆ ರೈತರು ಬೆಂಗಳೂರಿಗೆ ಬಂದು ಕಬ್ಬನ್‌ಪಾರ್ಕಿನಲ್ಲಿ ಪ್ರತಿಭಟನೆ ಮಾಡಿದರೆ ಸರ್ಕಾರ ನಡುಗಿ ಹೋಗುತ್ತಿತ್ತು.

ಅನೇಕ ಸಾರಿ ಸಚಿವರೇ ಈ ರ್‍ಯಾಲಿಯ ಕೊನೆಯಲ್ಲಿ ಭಾಗವಹಿಸಿ ರೈತರಿಗೆ ಸಮಾಧಾನ ಮಾಡಿದ ಸಂದರ್ಭಗಳು ನಮ್ಮ ನೆನಪಿನಿಂದ ಮಾಸಿ ಹೋಗಿಲ್ಲ. ಆದರೆ, ರೈತ ಸಂಘ ಛಿದ್ರಛಿದ್ರವಾಗಿ ಒಡೆದು ಹೋದ ನಂತರ ಈಗ ರೈತರ ಬಳಿ ಉಳಿದುದು ಬರೀ ಹಸಿರು ಶಾಲು ಮಾತ್ರ.

ಕಾಲದ ತುಳಿತಕ್ಕೆ ಸಿಲುಕಿ ಮಾಸಿ ಹೋಗಿರುವ ಶಾಲಿನಲ್ಲಿ ಪ್ರತಿಭಟನೆಯ ಕಾವು ಒಂದು ಚೂರೂ ಉಳಿದಿಲ್ಲ. ರೈತ ಸಂಘಟನೆ ಮತ್ತೆ ೮೦ರ ದಶಕಕ್ಕೆ ಹೋಗಲು ಸಾಧ್ಯವಿಲ್ಲ ಎನಿಸುತ್ತದೆ. ಪ್ರತಿಭಟನೆಯಿಂದ ಅಥವಾ ಆತ್ಮಹತ್ಯೆಯಿಂದ ತನ್ನ ಸಮಸ್ಯೆಗಳಿಗೆ ಈಗ ಆತ ಉತ್ತರ ಕಂಡುಕೊಳ್ಳಲೂ ಸಾಧ್ಯವಿಲ್ಲ.

ಹಾಗಾದರೆ ಏನು ಮಾಡಬೇಕು? ಇದು ಉತ್ತರವಿಲ್ಲದ ಪ್ರಶ್ನೆ. ಮಿಶ್ರತಳಿ ಬೀಜ, ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನೆಲ್ಲ ಬಿಟ್ಟು ಈಗ ಕೃಷಿ ಮಾಡಲು ಸಾಧ್ಯವಿದೆಯೇ? ಬಹುತೇಕ ಸಾಧ್ಯವಿಲ್ಲ ಎನ್ನುವಂಥ ಒಂದು ಸಂದರ್ಭವನ್ನು ಬಹುರಾಷ್ಟ್ರೀಯ ಕಂಪೆನಿಗಳು ನಿರ್ಮಾಣ ಮಾಡಿವೆ. ಇಂಥ ಒಂದು ಸಂದರ್ಭವನ್ನು ಎದುರಿಸಲು ಕೃಷಿ ಸಂಶೋಧನೆಯೂ ಆತನ ನೆರವಿಗೆ ಬರುತ್ತಿಲ್ಲ. ಹಾಗೆ ನೋಡಿದರೆ ಪ್ರಯೋಗಾಲಯದ ಸಂಶೋಧನೆಗೂ, ಹೊಲದ ವಾಸ್ತವಕ್ಕೂ ಅರ್ಥಾತ್ ಸಂಬಂಧವೇ ಉಳಿದಿಲ್ಲ. ಇನ್ನೂ ಅಪಾಯ ಎಂದರೆ ಕೃಷಿ ಸಂಶೋಧನೆ ಎಂಬುದು ಸಾರ್ವಜನಿಕ ಒಳಿತಿಗಿಂತ ಕಾರ್ಪೊರೇಟ್ ಒಳಿತಿನ ಕಡೆಗೆ ಹೆಚ್ಚು ಗಮನ ಕೊಡುತ್ತಿರುವುದು. ಇದು ಜಾಗತೀಕರಣದ ನಂತರದ ಬೆಳವಣಿಗೆ. ಅದರ ಫಲವೆನ್ನುವಂತೆ ಕುಲಾಂತರಿ ತಳಿಗಳು, ಜೈವಿಕ ಇಂಧನ, ಗುತ್ತಿಗೆ ಆಧಾರದ ತೋಟಗಾರಿಕೆ, ಸಂಕರ ತಳಿಗಳ ವಿಜೃಂಭಣೆ ಮತ್ತು ಅದಕ್ಕೆ ಪೂರಕವಾಗಿ ನಿರ್ಮಾಣವಾಗುತ್ತಿರುವ ಶೋಷಕ ಮಾರುಕಟ್ಟೆ. ಸಣ್ಣ, ಮಧ್ಯಮ ಮತ್ತು ಅಂಚಿನ ರೈತನಿಗೆ ಉಳಿಗಾಲವೇ ಇಲ್ಲ ಎನ್ನುವಂಥ ಸ್ಥಿತಿಯನ್ನು ಈಗಿನ ಮಾರುಕಟ್ಟೆ ಕೇಂದ್ರಿತ ಕೃಷಿ ವ್ಯವಸ್ಥೆ ನಿರ್ಮಿಸಿ ಬಿಟ್ಟಿದೆ. ಹೀಗಾಗಿ ಕೃಷಿ ಸಂಶೋಧನೆಯನ್ನು ಪ್ರಜಾಸತ್ತಾತ್ಮಕಗೊಳಿಸಲು ಮೊನ್ನೆ ಬೆಂಗಳೂರಿನಲ್ಲಿ ಒಂದು ಪ್ರಯೋಗ ನಡೆಯಿತು. ಅದು ಇಡೀ ಜಗತ್ತಿನಲ್ಲಿಯೇ ನಡೆದ ಅಂಥ ಮೊದಲ ಪ್ರಯೋಗ. ಅದಕ್ಕೆ'ರೈತ ತೀರ್ಪು' ಎಂದು ಹೆಸರು ಇಡಲಾಗಿತ್ತು. ಕನಕಪುರ ರಸ್ತೆಯ 'ಫೈರ್‌ಫ್ಲೈಸ್'ನಲ್ಲಿ ಈ ತಿಂಗಳ ಮೊದಲ ವಾರ 'ರೈತ ತೀರ್ಪು' ಹೊರಬಿತ್ತು.

ಹೈದರಾಬಾದಿನ ಡೆಕ್ಕನ್ ಡೆವಲೆಪ್‌ಮೆಂಟ್ ಸೊಸೈಟಿ, ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರೀಸರ್ಚ್ ಅಂಡ್ ಆ?ಯಕ್ಷನ್ (ಇಕ್ರಾ) ಮತ್ತು ಹಿತ್ತಲ ಗಿಡ, ಧಾರವಾಡದ ಸೆಂಟರ್ ಫಾರ್ ಅಗ್ರಿಕಲ್ಚರಲ್ ಮೀಡಿಯಾ ಹಾಗೂ ಶಿರಸಿಯ 'ಅಪ್ಪಿಕೊ' ಸಂಘಟನೆಗಳು ಈ ಕಾರ್ಯಕ್ರಮವನ್ನು ಏರ್ಪಡಿ ಸಿದ್ದುವು. ಒಂದು ವರ್ಷದ ಹಿಂದೆ ಯೋಚಿಸಿದ್ದ 'ರೈತ ತೀರ್ಪು' ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ಸಿಕ್ಕುದು ಕಳೆದ ಆರು ತಿಂಗಳಲ್ಲಿ. ರಾಜ್ಯದ ಎಲ್ಲ ಕಡೆಗಳಿಂದ ಮೂವತ್ತು ಮಂದಿ ರೈತರನ್ನು ಜ್ಯೂರಿ ಸದಸ್ಯರು ಎಂದು ಆಯ್ಕೆ ಮಾಡಲಾಗಿತ್ತು. ಇವರೆಲ್ಲ ಸಣ್ಣ, ಅತಿ ಸಣ್ಣ ಪ್ರಯೋಗಶೀಲ ರೈತರಾಗಿದ್ದರು. ಅವರಲ್ಲಿ ೧೫ ಮಂದಿ ಮಹಿಳೆಯರು ಇದ್ದರು. ಈ ಮೂವತ್ತು ಮಂದಿಯಲ್ಲಿ ದಲಿತ, ಬುಡಕಟ್ಟು, ಆದಿವಾಸಿಯಂಥ ವರ್ಗಗಳನ್ನು ಪ್ರತಿನಿಧಿಸುವ ರೈತರೂ ಇದ್ದರು. ಕರ್ನಾಟಕದ ಒಟ್ಟು ರೈತ ಸಮುದಾಯವನ್ನು ಪ್ರತಿನಿಧಿಸುವ ಈ ಮೂವತ್ತು ಮಂದಿಯನ್ನು ಆಯ್ಕೆ ಮಾಡಲು ೧೮–೨೦ ಮಂದಿಯ ತಜ್ಞರ ಒಂದು ಸಮಿತಿ ರಚಿಸಲಾಗಿತ್ತು.
ಒಟ್ಟು ಕಾರ್ಯಕ್ರಮದ ಸಲಹೆಗಾರ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ಇಂಗ್ಲೆಂಡಿನ ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಎನ್‌ವಿರಾನ್‌ಮೆಂಟ್ (ಐ.ಐ.ಇ.ಡಿ) ನಿರ್ದೇಶಕ ಡಾ. ಮೈಕೆಲ್ ಪಿಂಬರ್ಟ್ ಕಾರ್ಯ ನಿರ್ವಹಿಸಿದರು.

'ರೈತ ತೀರ್ಪಿನ' ವಿಶೇಷ ಏನು ಎಂದರೆ ರೈತರು ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತುದು. ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ನಡೆಸುವವರು ಅವರ ಮುಂದೆ ವಾದಿಗಳ ಹಾಗೆ ನಿಂತು ತಾವು ಮಾಡಿದ ಸಂಶೋಧನೆಯ ಉಪಯುಕ್ತತೆಯ ಬಗ್ಗೆ ಸಾಬೀತು ಮಾಡಲು ಯತ್ನಿಸಿದ್ದು. ಈ ವಾದ ಸರಿಯಾಗಿ ನಡೆದು ತೀರ್ಪು 'ನ್ಯಾಯಬದ್ಧ'ವಾಗಿ ಹೊರಬೀಳುತ್ತದೆಯೇ ಎಂಬುದರ 'ಮೇಲುಸ್ತುವಾರಿ' ಮಾಡಲು ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ನೇತೃತ್ವದಲ್ಲಿ ಡಾ.ಸುದರ್ಶನ್, ಡಾ. ದ್ವಾರಕೀನಾಥ್, ಹೇಮಲತಾ ಮಹಿಷಿ, ಡಾ. ಗೋಪಾಲ ಕಡೆಕೋಡಿ, ಬಿ.ಟಿ.ಲಲಿತಾ ನಾಯಕ್, ಡಾ.ಎಲ್.ಹನುಮಂತಯ್ಯ ಅವರಂಥ ವಿವಿಧ ರಂಗಗಳ ಘಟಾನುಘಟಿಗಳ ಸಮಿತಿಯನ್ನೂ ರಚಿಸಲಾಗಿತ್ತು.

ಆತ್ಮವಿಶ್ವಾಸವೇ ಇಲ್ಲದ, ವಿಲಾಯತಿ ದಿರಿಸು, ಇಂಗ್ಲಿಷ್ ಭಾಷೆಯ ಎದುರು ಕೀಳರಿಮೆ ಅನುಭವಿಸುವ ರೈತರು ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತು ಕೃಷಿ ಸಂಶೋಧಕರಿಗೆ ಪ್ರಶ್ನೆ ಕೇಳುವುದು ಸುಲಭ ಎಂದು ಸಂಘಟಕರೂ ಅಂದುಕೊಂಡಿರಲಿಲ್ಲ. ಮೊದಲ ದಿನ ಅದೇ ಆಯಿತು. ಆದರೆ ಮುಂದಿನ ಎರಡು ದಿನಗಳ ಕಾಲ ರೈತರು ತಮ್ಮ ಅನುಭದಲ್ಲಿ ಕಂಡುಂಡ ಕೋಟಲೆಗಳನ್ನೆಲ್ಲ ಸಂಶೋಧಕರ ಮುಂದೆ ಎಸೆದು 'ನೀವು ಏನು ಮಾಡಿದ್ದೀರಿ ಹೇಳಿ' ಎಂದು ತರಾಟೆಗೆ ತೆಗೆದುಕೊಂಡರು. ಸಂಶೋಧಕರೂ ತಮ್ಮ ವರಸೆ ಬಿಡಲಿಲ್ಲ. ತಾವು ಏನೆಲ್ಲ ಮಾಡಿದ್ದೇವೆ ಎಂದು ಅವರೂ ಕೊಚ್ಚಿಕೊಂಡರು. ಅಂತಿಮವಾಗಿ ೨೨ ಶಿಫಾರಸುಗಳನ್ನು ರೈತ ಜ್ಯೂರಿ ಸದಸ್ಯರು ಮಾಡಿದರು : 'ಸಾಂಪ್ರದಾಯಿಕ ಒಕ್ಕಲುತನಕ್ಕೆ ಹೊರಳಲಾಗದ, ಆಧುನಿಕ ಕೃಷಿಯನ್ನು ಮಾಡಲಾಗದ ರೈತನಿಗೆ ಅನುಕೂಲವಾಗುವ ಸಂಶೋಧನೆಗಳು ಬೇಕು, ರೈತ ತಾನೇ ತನ್ನ ಹೊಲದಲ್ಲಿ ಮಾಡುವ ಪ್ರಯೋಗಗಳಿಗೂ ಸರ್ಕಾರದ ಮನ್ನಣೆ, ಸಂಭಾವನೆ ಸಿಗಬೇಕು, ಮಿಶ್ರತಳಿ ಬೀಜಗಳಿಗೆ ಬದಲಾಗಿ ರೈತನೇ ಉತ್ಪಾದಿಸಬಹುದಾದ, ಬರ ನಿರೋಧಕ, ಪರಿಸರಕ್ಕೆ ಹೊಂದಿಕೊಳ್ಳುವ ರುಚಿಕರವಾದ ಮತ್ತು ಮೇವು ಕೊಡುವ ಜವಾರಿ ತಳಿಗಳ ಸಂಶೋಧನೆ ಆಗಬೇಕು ಇತ್ಯಾದಿ... ಇತ್ಯಾದಿ...' ಸೋಜಿಗ ಎಂದರೆ, 'ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರಗಳು ಬೇಕು' ಎಂಬ ಶಿಫಾರಸು ಕೂಡ ಇದರಲ್ಲಿ ಸೇರಿತ್ತು. ಕೃಷಿ ಇಲಾಖೆಯಲ್ಲಿ ದಶಕಗಳಿಂದ ಒಂದು ಭಾಗವೇ ಆಗಿರುವ ಮಣ್ಣು ಪರೀಕ್ಷಾ ಕೇಂದ್ರಗಳು ಬೇಕು ಎಂದು 'ರೈತ ತೀರ್ಪು' ಶಿಫಾರಸು ಮಾಡಿದ್ದು ಒಟ್ಟು ಕೃಷಿ ಸಂಶೋಧನೆಯ, ತಂತ್ರಜ್ಞಾನ ವರ್ಗಾವಣೆಯ ವೈಫಲ್ಯದ ಸಂಕೇತದಂತೆ ಇತ್ತು.

ಪಿ.ವಿ.ಸತೀಶ್, ಪಾಂಡುರಂಗ ಹೆಗಡೆ, ಸಂತೋಷ್ ಕೌಲಗಿ, ಪ್ರಕಾಶ್ ಭಟ್, ಅನಿತಾ ಪೈಲೂರು, ಡಾ॥ ಪಿ. ಬಾಬು ಅವರಂಥ ನೈಜ ಕಾಳಜಿಯುಳ್ಳ ಜನ ಸಂಘಟಿಸಿದ್ದ 'ರೈತ ತೀರ್ಪಿನ' ದೊಡ್ಡ ಕೊರತೆ ಎಂದರೆ ನೀತಿ ನಿರೂಪಕರು ಆ ಸಭೆಯಲ್ಲಿ ಇಲ್ಲದೇ ಇದ್ದುದು. ಈ ಕಾರ್ಯಕ್ರಮ ನಡೆದ ಮೂರು ದಿನಗಳ ಕಾಲವೂ

ರೈತರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡ ಮುಖ್ಯಮಂತ್ರಿ ಯಡಿಯೂರಪ್ಪ ಅಥವಾ / ಹಾಗೂ ಕೃಷಿ ಸಚಿವರು ಭಾಗವಹಿಸಲು ಸಾಧ್ಯವಾಗಿದ್ದರೆ ತಮ್ಮ ಇಲಾಖೆ ಎಡವಿದ್ದು ಎಲ್ಲಿ ಎಂದು ಅವರಿಗೆ ತಿಳಿಯುತ್ತಿತ್ತೋ ಏನೋ?

ಹೆಡ್ಲಿ–ರಾಣಾ, ನಜೀರ್, ಯಡಿಯೂರಪ್ಪ, ರೆಡ್ಡಿಗಳ ಮಧ್ಯೆ ಎಲ್ಲಿಯೋ ಕಳೆದು ಹೋಗಿರುವ ಮಾಧ್ಯಮ 'ರೈತ ತೀರ್ಪಿಗೆ' ಕೊಡಬೇಕಾಗಿದ್ದ ಗಮನವನ್ನು ಕೊಡಲಿಲ್ಲ ಎಂಬುದು ಎರಡನೇ ಕೊರತೆ. ಚಾಮರಾಜನಗರ ರೈತರ ಮೇಲೆ ಲಾಠಿ ಬೀಸಿದ್ದು ಮಾತ್ರ ಒಂದನೇ ಪುಟದ ಸುದ್ದಿಯಾಗುವ ಕಾಲ ಇದು. ನಕಾರಾತ್ಮಕ, ರೋಚಕ ಸುದ್ದಿಗಳ ಬೆನ್ನು ಹತ್ತಿರುವ ಮಾಧ್ಯಮಗಳಲ್ಲಿ 'ರೈತ ತೀರ್ಪು' ಸುದ್ದಿಗೆ ಚೂರೇ ಚೂರು ಜಾಗ ಸಿಕ್ಕಿತು.

ರೈತನಿಗಿದು ಕಷ್ಟ ಕಾಲ. ದೇಶದಲ್ಲಿ ಕೈಗಾರಿಕಾ ಬೆಳವಣಿಗೆ ನಿರೀಕ್ಷೆಗಿಂತ ಹೆಚ್ಚು ಆಗಿದ್ದರೂ ಕೃಷಿ ಬೆಳವಣಿಗೆ ನಕಾರಾತ್ಮಕವಾಗಿಯೇ ಇದೆ. ರೈತ ಮುಳುಗಿದರೆ ದೇಶ ಮುಳುಗುತ್ತದೆ. 'ರೈತ ತೀರ್ಪಿನ' ಶಿಫಾರಸುಗಳನ್ನು ಮುಂದೆ ಇಟ್ಟುಕೊಂಡು ಸಂಘಟಕರು ಸರ್ಕಾರಗಳ ಮೇಲೆ ಹೇಗೆ ಒತ್ತಡ ತರುತ್ತಾರೆ ಎಂಬುದು ದೊಡ್ಡ ಪ್ರಶ್ನೆ. ಜಗತ್ತಿನಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ ನಡೆದ ಈ ಪ್ರಯೋಗ ಯಶ ಕಂಡು ಸರ್ಕಾರ ಮತ್ತೆ ರೈತಪರ ನಿಲುವು ತೆಗೆದು ಕೊಳ್ಳುವುದು ಸಾಧ್ಯವಾದರೆ ಅದಕ್ಕಿಂತ ದೊಡ್ಡ ಯಶಸ್ಸು ಬೇರೆ ಏನೂ ಇಲ್ಲ. ಇದು ಬರೀ ಸಂಘಟಕರು ನಿರ್ಮಿಸುವ 'ಒತ್ತಡ ಗುಂಪಿನ' (pressure group) ಮೇಲೆ ಮಾತ್ರ ನಿಂತಿಲ್ಲ. ಗೋಡೆಗೆ ತಳ್ಳಿಸಿ ಕೊಂಡಿರುವ ರೈತನ ಜತೆಗೆ ಮಾಧ್ಯಮಗಳೂ ನಿಲ್ಲಬೇಕಿದೆ. ನಿಂತಾವೇ ಎಂಬುದೇ ಪ್ರಶ್ನೆ.

(ಸೌಜನ್ಯ – ಪ್ರಜಾವಾಣಿ)

••••••••••••••••••••••••••



# ನ್ಯಾಯಾಧೀಶನಾಗಿ ರೈತ, ಆರೋಪಿಯಾಗಿ ವಿಜ್ಞಾನಿ

*– ನಾಗೇಶ ಹೆಗಡೆ*
*ಹಿರಿಯ ಪತ್ರಕರ್ತರು, ಬೆಂಗಳೂರು.*

**ದೇ**ಶಕ್ಕೇ ವಿನೂತ ಎಂಬಂಥ ಎರಡು ವಿಶಿಷ್ಟ 'ನ್ಯಾಯ ವಿಚಾರಣೆ'ಗಳು ಈಚೆಗೆ ಕರ್ನಾಟಕದಲ್ಲಿ ನಡೆದವು. ತಮ್ಮದಲ್ಲದ ವೇಷ ಧರಿಸಿ ತಮ್ಮದೇ ಪ್ರತಿಬಿಂಬವನ್ನು ನೋಡಿದಾಗ ಹೇಗನ್ನಿಸುತ್ತದೆ?

ಸರಕಾರ ತನ್ನ ಪ್ರಜೆಗಳ ಹಿತರಕ್ಷಣೆ ಮಾಡುವಲ್ಲಿ ವಿಫಲವಾದಾಗ ಜನಸಾಮಾನ್ಯರು ಏನು ಮಾಡುತ್ತಾರೆ? ಮೊದಲು ಮನವಿ ಅರ್ಪಿಸುತ್ತಾರೆ; ನಂತರ ಮಾಧ್ಯಮಗಳಿಗೆ ದೂರು ಒಯ್ಯುತ್ತಾರೆ; ಕೆಲವು ಸಂದರ್ಭಗಳಲ್ಲಿ ನ್ಯಾಯಾಲಯಕ್ಕೆ ದೂರು ಒಯ್ಯುತ್ತಾರೆ. ಅವೆಲ್ಲ ವಿಫಲವಾದಾಗ ಬೀದಿಗೆ ಇಳಿಯುತ್ತಾರೆ. ಪ್ರತಿಭಟನೆ ಮಾಡುತ್ತಾರೆ. ಪ್ರತಿಕೃತಿ ಸುಡುತ್ತಾರೆ. ಹಿಂಸಾಕೃತ್ಯಕ್ಕಿಳಿದು ಲಾಕಪ್ಪಿಗೆ ಸೇರುತ್ತಾರೆ, ಶಸ್ತ್ರಾಸ್ತ್ರ ಹಿಡಿದು ಅಡವಿ ಸೇರುತ್ತಾರೆ, ಇಲ್ಲವೆ ತೀರಾ ರೋಸಿ ಹೋದವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇವಿಷ್ಟನ್ನು ಬಿಟ್ಟು ಇನ್ನೇನೂ ವಿಧಾನಗಳಿಲ್ಲವೆ?

ಇದೆ, ಅದನ್ನೇ ಇಲ್ಲಿ ವಿವರಿಸುತ್ತೇನೆ. ಅದು ವರದಿಯಂತೆನಿಸಿದರೆ ಕ್ಷಮಿಸಿ.

ದೇಶಕ್ಕೇ ವಿನೂತನ ಎಂಬಂಥ ಎರಡು ವಿಶಿಷ್ಟ 'ನ್ಯಾಯ ವಿಚಾರಣೆ'ಗಳು ಈಚೆಗೆ ಕರ್ನಾಟಕದಲ್ಲಿ ನಡೆದವು. ಒಂದು, ಮಂಗಳೂರಿನ ಬಳಿಯ ವಿಶೇಷ ಆರ್ಥಿಕ ವಲಯದ ನಿರ್ಮಾಣದಿಂದಾಗಿ ಗ್ರಾಮವಾಸಿಗಳಿಗೆ ಏನೆಲ್ಲ ಅನ್ಯಾಯವಾಗಿದೆ ಎಂಬುದರ ವಿಚಾರಣೆ. ಇನ್ನೊಂದು, ಬೆಂಗಳೂರಿನಲ್ಲಿ 'ರೈತ ತೀರ್ಪು' ಕಾರ್ಯಕ್ರಮ. ಎರಡೂ ನ್ಯಾಯ ತೀರ್ಮಾನ ಪದ್ಧತಿಯನ್ನೇ ಬಹುಮಟ್ಟಿಗೆ ಹೋಲುತ್ತಿದ್ದವು. ವಿಶೇಷ ಏನೆಂದರೆ ಇಲ್ಲಿ ಯಾವ ಅಧಿಕೃತ ನ್ಯಾಯಾಲಯವೂ ಇರಲಿಲ್ಲ. ನ್ಯಾಯಾಧೀಶರೂ ಇರಲಿಲ್ಲ, ವಕೀಲರೂ ಇರಲಿಲ್ಲ.

ಮಂಗಳೂರಿನ 'ಎಸ್ಈಝಡ್' ಕುರಿತ ನ್ಯಾಯ ವಿಚಾರಣೆಯ ದೃಶ್ಯ ಹೀಗಿತ್ತು: ಬಜ್ಪೆಯ ಒಂದು ದೇಗುಲದ ವಿಶಾಲ ಸಭಾಂಗಣ. ವೇದಿಕೆಯ ಮೇಲೆ ನ್ಯಾಯಾಧೀಶರ ಥರಾ ಕೂತವರೆಲ್ಲ ಸಾಮಾಜಿಕ ಚಿಂತಕರು. ರೈತರ ಬಗ್ಗೆ ಕಾಳಜಿ, ಅನುಕಂಪವಿದ್ದವರು. ಪತ್ರಿಕಾ ಸಂಪಾದಕರು, ಹೆಸರಾಂತ ಬರಹಗಾರರು, ವಿಶ್ವವಿದ್ಯಾಲಯಗಳ ಪ್ರೊಫೆಸರ್‌ಗಳು. ಯಾರೂ ಮಾತನಾಡುವಂತಿಲ್ಲ. ಕೋರ್ಟ್‌ನ ನ್ಯಾಯಾಧೀಶರ ಹಾಗೆ ಮೌನವಾಗಿ ಅಹವಾಲು ಕೇಳುವುದು, ಆಗೊಮ್ಮೆ ಈಗೊಮೆ ಟಿಪ್ಪಣಿ ಬರೆದುಕೊಳ್ಳುವುದು. ಅವರೆದುರು 'ಕೋರ್ಟ್'ನ ಕಟಕಟೆಗೆ ಬಂದು ಒಬ್ಬೊಬ್ಬರಾಗಿ ಎಸ್ಈಝಡ್ ಯೋಜನೆಯಿಂದಾಗಿ ನೋವುಂಡ ಜನಸಾಮಾನ್ಯರು ಬಂದು ತಮ್ಮ ಕತೆಯನ್ನು ಹೇಳುವುದು. ಇನ್ನು



ಕೋರ್ಟ್‌ರೂಮಿನಲ್ಲಿದ್ದಂತೆ ಸಭಾಂಗಣದ ತುಂಬ ಜನಸಾಮಾನ್ಯರು. ಈ ಮೂರು ಗುಂಪಿನ ನಡುವೆ ಏನೇನು ನಡೆಯುತ್ತಿದೆ ಎಂಬುದರ ವೀಕ್ಷಕರಾಗಿ ನರ್ಮದಾ ಆಂದೋಲದ ರೂವಾರಿ ಮೇಧಾ ಪಾಟ್ಕರ್ ಮತ್ತು ಮ್ಯಾಗ್ಸೆಸೆ ಪ್ರಶಸ್ತಿ ವಿಜೇತೆ ಅರುಣಾ ರಾಯ್ (ಶಿವರಾಮ ಕಾರಂತರು ಬದುಕಿದ್ದಿದ್ದರೆ ಅವರನ್ನೂ ವೀಕ್ಷಕರನ್ನಾಗಿ ಕರೆಸುತ್ತಿದ್ದರೇನೊ).

ಕಟಕಟೆಗೆ ಬಂದವರೆಲ್ಲ ಎಮ್ಆರ್‌ಪಿಎಲ್‌ನ ವಿಶೇಷ ಆರ್ಥಿಕ ವಲಯದಿಂದಾಗಿ ಎತ್ತಂಗಡಿಯಾದ ರೈತರು, ಗ್ರಾಮೀಣ ಕೂಲಿಗಳು, ಚಿಕ್ಕಮಟ್ಟ ಅಂಗಡಿಕಾರರು. ಒಬ್ಬೊಬ್ಬರದೂ ಒಂದೊಂದು ದಾರುಣ ಕತೆ. ನಿರ್ದಯಿ ಅಧಿಕಾರಿಗಳು ಹೇಗೆ ತಮ್ಮನ್ನು ಬಲಾತ್ಕಾರದಿಂದ ಎತ್ತಂಗಡಿ ಮಾಡಿದರು; ಕೈಯಾರೆ ಬೆಳೆಸಿದ್ದ ಫಸಲನ್ನು ಕಣ್ಣೆದುರೇ ಧ್ವಂಸ ಮಾಡಿದರು, ಅನ್ಯಾಯದ ವಿರುದ್ಧ ದನಿ ಎತ್ತಿದವರನ್ನು ಹೇಗೆ ಥಳಿಸಿದರು, ಬಳ್ಳಾರಿ ಜೈಲಿಗೆ ಕಳಿಸಿದರು, ಎಂಬುದರ ವಿವರಗಳು. ಮಲ್ಲಪ್ಪ ಗೌಡ ಕುಡಬಿ, ಡೋರಾ ಡಿಕುನ್ಹಾ, ಪುಷ್ಪಕ್ಕ, ದಿನೇಶ್ ಕುಳಾಲ, ಗ್ರೆಗರಿ ಪಾತ್ರೊ. ಈ ಗ್ರೆಗರಿಯ ಗೋಳಂತೂ ಒಂದೆರಡಲ್ಲ. ಇವರು ಕೊಂಕಣ ರೇಲ್ವೆ ಯೋಜನೆಯಲ್ಲಿ ಭೂಮಿಯನ್ನು ಕಳೆದುಕೊಂಡವರು. ನಂತರ ನಾಗಾರ್ಜುನ ಕಂಪನಿಯಿಂದಾಗಿ ಭೂಮಿಯನ್ನು ಕಳೆದುಕೊಂಡರು. ಆಮೇಲೆ ಎಮ್ಆರ್‌ಪಿಎಲ್. ಪ್ರತಿಬಾರಿ ಅನ್ಯಾಯ, ಪ್ರತಿಬಾರಿ ದಬ್ಬಾಳಿಕೆ.

ಎಲ್ಲರ ಹೇಳಿಕೆ ಮುಗಿದ ಮೇಲೂ ವೇದಿಕೆಯ ಮೇಲಿದ್ದವರು ಮಾತಾಡುವಂತಿರಲಿಲ್ಲ (ಎಲ್ಲರೂ ಸಮಾಲೋಚನೆ ನಡೆಸಿ ಎರಡು

ದಿನಗಳ ನಂತರ ಅವರು ತಮ್ಮ ಅನಿಸಿಕೆಗಳನ್ನು ಪ್ರಕಟಿಸಬೇಕಿತ್ತು). ಆದರೆ ಗಣ್ಯ ವೀಕ್ಷಕಿಯರು ಮಾತಾಡುವಂತೆ ಒತ್ತಾಯ ಬಂತು. ಅರುಣಾ ರಾಯ್ ವೇದಿಕೆ ಏರಿದರು. ಪ್ರಜಾತಂತ್ರದಲ್ಲಿ ಜನತಾ ನ್ಯಾಯಾಲಯದ ಪಾತ್ರ ಏನೆಂದು ವಿವರಿಸಿದರು. 'ಬ್ರಿಟಿಷರು ನಮ್ಮ ಚಿನ್ನ-ಬೆಳ್ಳಿಯನ್ನು ಎತ್ತಿ ಸಾಗಿಸಿದರು. ಹಾಗೆಂದು ನೈಸರ್ಗಿಕ ಸಂಪತ್ತನ್ನು ಧ್ವಂಸ ಮಾಡಲಿಲ್ಲ. ಆದರೆ ವಿಪರ್ಯಾಸ ನೋಡಿ: ನಮ್ಮ ಸಂಪತ್ತಿನ ರಕ್ಷಣೆಗೆಂದೇ ನಾವು ಆಯ್ಕೆ ಮಾಡಿ ಕಳಿಸಿದ ಜನಪ್ರತಿನಿಧಿಗಳು ಅಂಥ ಯಾವ ಮೌಲ್ಯವನ್ನೂ ಉಳಿಸಲಿಲ್ಲ. ಜನಹಿತವನ್ನು ಇವರು ಕಾಯುತ್ತಾರೆ ಎಂಬ ನಂಬಿಕೆಯ ಮೇಲೆ ನಾವು ಇವರಿಗೆ ರಾಜ್ಯಭಾರದ ಸೂತ್ರವನ್ನು ಕೊಟ್ಟಿದ್ದೇ ತಡ, ದುರ್ಬಲರನ್ನು ಲೂಟಿ ಮಾಡಿ ಸಮರ್ಥರಿಗೆ ದಾನ ಮಾಡುತ್ತಿದ್ದಾರೆ' ಎಂದರು.

ಅಂದಿನ 'ವಿಚಾರಣೆ'ಗೆ ಯಾವ ಅಧಿಕಾರಿಗಳೂ ಬರಲಿಲ್ಲ, ಎಮ್‌ಪಿ-ಎಮ್ಮೆಲ್ಲೆಗಳೂ ಬರಲಿಲ್ಲ. ಆದರೆ ನೆರೆದಿದ್ದ ಜನರಿಗೆ ನೇರ ಚಿತ್ರಣ ಸಿಕ್ಕಿತು.

ಇಂಥ ಜನತಾ ನ್ಯಾಯಾಲಯವನ್ನೇ ಕೆಲಮಟ್ಟಿಗೆ ಹೋಲುವಂಥ 'ರೈತ ತೀರ್ಪು' ಕಾಯಕ್ರಮ ಡಿಸೆಂಬರ್ ಮೊದಲ ವಾರ ಬೆಂಗಳೂರಿನ ಬಳಿಯ ಗ್ರಾಮವೊಂದರಲ್ಲಿ ನಡೆಯಿತು. ಪಂಚಾಯ್ತಿ ಕಟ್ಟೆಯನ್ನು ಹೋಲುವಂತೆ ಆಲದ ಮರದ ನೆರಳಿನ ವೇದಿಕೆಯಲ್ಲಿ ರಾಜ್ಯದ ನಾನಾ ಜಿಲ್ಲೆಗಳಿಂದ ಆಯ್ದ ಹತ್ತು ರೈತರು, ಅಷ್ಟೇ ಸಂಖ್ಯೆಯ ಮಹಿಳೆಯರು ನ್ಯಾಯಮೂರ್ತಿಗಳಾಗಿ ವಿರಾಜಿಸಿದ್ದರು. ಅವರೆದುರು 'ಆರೋಪಿ'ಗಳ ಸ್ಥಾನದಲ್ಲಿ ಹೆಸರಾಂತ ಕೃಷಿತಜ್ಞರು, ವಿಜ್ಞಾನಿಗಳು, ರೈತ ಮುಖಂಡರು, ಬಹುರಾಷ್ಟ್ರೀಯ ಕಂಪನಿಯ ವಕ್ತಾರರಿದ್ದರು. ಒಬ್ಬೊಬ್ಬರಾಗಿ ಅರ್ಧರ್ಧ ಗಂಟೆ ಕಾಲ ಪಂಚರೆದುರು ತಮ್ಮ ವಾದವನ್ನು ಮಂಡಿಸಿದರು. ಒಬ್ಬೊಬ್ಬರ ಉಪನ್ಯಾಸ ಮುಗಿದ ಮೇಲೂ ವೇದಿಕೆಯ ಮೇಲೆ ಚಕ್ಕಳಮಕ್ಕಳ ಹಾಕಿ ನ್ಯಾಯಮೂರ್ತಿಗಳಾಗಿ ಕೂತಿದ್ದ ರೈತರು ಈ ತಜ್ಞರಿಗೆ ಪ್ರಶ್ನೆ ಹಾಕುತ್ತಿದ್ದರು. ('ಕೃಷಿ ವಿಜ್ಞಾನಿಗಳ ಸಂಬಳ ಹೆಚ್ಚಾದಷ್ಟೂ ರೈತರ ಗೋಳು ಹೆಚ್ಚುತ್ತಿದೆ ಏಕೆ?' ಇತ್ಯಾದಿ.) ಮೂರು ದಿನಗಳಲ್ಲಿ ಒಟ್ಟೂ ಹನ್ನೆರಡು ಜನರ 'ವಿಚಾರಣೆ' ನಡೆಯಿತು. ಮಂಗಳೂರಿನಲ್ಲಿದ್ದಂತೆ ಈ ವಿಚಾರಣೆಯ ಸಂದರ್ಭದಲ್ಲೂ ವೀಕ್ಷಕರಾಗಿ ರೈಟ್ ಲೈವ್ಲಿಹುಡ್ ಪ್ರಶಸ್ತಿ ವಿಜೇತ ಡಾ. ಎಚ್ ಸುದರ್ಶನ, ಹೇಮಲತಾ ಮಹಿಷಿ, ಡಾ. ಗೋಪಾಲ ಕಡೇಕೋಡಿ ಮುಂತಾದವರಿದ್ದರು. ಸುತ್ತೆಲ್ಲ ಸಭಾಸದರಿದ್ದರು.

ವಿಚಾರಣೆ ಮುಗಿದ ಎರಡು ದಿನಗಳ ನಂತರ ರೈತ ನ್ಯಾಯಮೂರ್ತಿಗಳು ತಮ್ಮ ತೀರ್ಪನ್ನು ಮಾಧ್ಯಮಗಳೆದುರು ಬಹಿರಂಗಗೊಳಿಸಿದರು.

ಇದರಿಂದ ಏನು ಸಾಧಿಸಿದಂತಾಯಿತು ಎಂಬ ಪ್ರಶ್ನೆ ಎದ್ದಿತೆ? ನೇರವಾಗಿ ಏನೂ ಸಾಧನೆ ಆಗಲಿಲ್ಲ. ಆದರೆ ಒಂದು ಸಮಸ್ಯೆಯನ್ನು ಕೂಲಂಕಶ ವಿಶ್ಲೇಷಣೆ ಮಾಡಿ, ಅದು ಜನಮಾನಸದಲ್ಲಿ ಅಂತರ್ಗತ ಆಗುವಂತೆ ಮಾಡಲು ಈ ವಿಧಾನ ಉತ್ತಮ ಹೌದು. ರೈತರು ನ್ಯಾಯಾಧೀಶರಾಗಿ, ವಿಜ್ಞಾನಿಗಳು ಆಪಾದಿತರಾಗಿ, ಚಿಂತಕರು ಮೂಕಸಾಕ್ಷಿಗಳಾಗಿ ಒಂದು ಪರಿಚಿತ ಸಮಸ್ಯೆಯನ್ನು ವಿಭಿನ್ನ ಕೋನದಿಂದ ನೋಡಲು ಸಾಧ್ಯವಾಗುತ್ತದೆ. ಶಾಲೆಯಲ್ಲಿ ಕಲಿಯಲು ಸಾಧ್ಯವಿಲ್ಲದ ಸಂಗತಿಗಳು ಹಾಗು ಮಾಧ್ಯಮಗಳಲ್ಲಿ ಬಿಂಬಿತವಾಗದ ಸಮಸ್ಯೆಗಳು ಹೊಸ ಅರ್ಥ ಪಡೆಯುತ್ತವೆ.

(ಸೌಜನ್ಯ – ಅಡಿಕೆ ಪತ್ರಿಕೆ)






iied

ADARSA

# DECCAN DEVELOPMENT SOCIETY

Pastapur Village, Zaheerabad Mandal,
Medak Dist - 502 220 A.P. INDIA.
Tel. :+ 91-8451- 282271/ 282785
Telefax :+ 91-8451- 282271
E-Mail : ddspastapur@gmail.com

**Liason Office:**
101, Kishan Residency, Street No.5,
Begumpet, Hyderabad - 16, A.P.,INDIA.
Tel:+91-40-27764577, 27764744,
Telefax : +91-40-27764722
E-Mail : ddshyderabad@gmail.com

www.ddsindia.com